ಫೆಬ್ರವರಿ 23, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1973
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದಾಳೆಂದು

# ಮಗಳನ್ನೇ ಹತ್ಯೆ ಮಾಡಿದ ತಂದೆ!





## ಮದುವೆ ಪ್ರಸ್ತಾಪ ನಿರಾಕರಿಸಿದ ಮಗಳನ್ನು ಕೊಂದ ಜನ್ಮದಾತ!

## ರಾಮನಗರ ಬೆಂ.ದಕ್ಷಿಣ ಜಿಲ್ಲೆ ಮಾಡಲು ಹೆಚ್‌ಡಿಕೆ ತಕರಾರು!







## ಪ್ರಾಣ ಸ್ನೇಹಿತನನ್ನೇ ಪೆಟ್ರೋಲ್ ಸುರಿದು ಸುಟ್ಟ ಪಾಪಿ!

## ಅಂಗಡಿ ಶಟರ್‌ಗಳನ್ನು ಮುರಿದು ಹಣ ದೋಚುತ್ತಿದ್ದ ಮಂಕಿ ಕ್ಯಾಪ್ ಖದೀಮರು!

## ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗೆ ಬಡವರು ಬಲಿ!


ಡಿಸಿಎಂ ಡಿ.ಕೆ. ಶಿವಕುಮಾರ್


ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ

# ರಾಮನಗರ ಬೆಂ.ದಕ್ಷಿಣ ಜಿಲ್ಲೆ ಮಾಡಲು ಹೆಚ್‌ಡಿಕೆ ತಕರಾರು! ಏನೇ ಆದರೂ ಬೆಂಗಳೂರು ದಕ್ಷಿಣ ಜಿಲ್ಲೆ ಮಾಡುತ್ತೇವೆ : ಡಿಕೆಶಿ!!


**ರಾಮನಗರ**

**✍ ಶಾಂತರಾಜು ಜಿ. ಕಲ್ಲಹಳ್ಳಿ**

ಕನಕಪುರ, ಚನ್ನಪಟ್ಟಣ, ರಾಮನಗರ, ಮಾಗಡಿ ಪ್ರದೇಶವು ಬೆಂಗಳೂರಿನ ಭಾಗ. ಈ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಲು ಕೇಂದ್ರ, ಸರ್ಕಾರದ ಬಳಿ ಕೇಂದ್ರ ಸಚಿವರಾಗಿರುವ ಹೆಚ್‌ಡಿಕೆ ಕುಮಾರಸ್ವಾಮಿ ತಕರಾರು ಸಲ್ಲಿಸಿದ್ದಾರೆ. ಅವರು ಏನೇ ಮಾಡಿದರೂ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ದಕ್ಷಿಣ ಜಿಲ್ಲೆ ಎಂದು ಮಾಡುವುದನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕನಕಪುರ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರುಗಳ ಪದಗ್ರಹಣ ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಮಾವೇಶದಲ್ಲಿ ಹೇಳಿದರು. ನಾನು ಮತ್ತು ವೇದಿಕೆಯಲ್ಲಿರುವ ಕೆಲವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದೆವು. ಇದು ಕನಕಪುರ ಲೋಕಸಭಾ ಕ್ಷೇತ್ರವಾಗಿತ್ತು . ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಇದನ್ನು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಎಂದು ಮಾಡಿದೆವು. ಈಗ ಈ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಮರುನಾಮಕರಣ ಮಾಡಲು ಮುಂದಾಗಿದ್ದು, ಇದನ್ನು ಮಾಡಬಾರದು ಎಂದು ಕೇಂದ್ರ ಸರ್ಕಾರದ ಬಳಿ ಹೆಚ್.ಡಿ. ಕುಮಾರಸ್ವಾಮಿ ಅರ್ಜಿ ಹಾಕಿದ್ದಾರೆ. ಅವರು ಏನಾದರೂ ಮಾಡಲಿ, ಈ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಿಯೇ ಮಾಡುತ್ತೇವೆ. ಅದಕ್ಕೆ ನಾನು ಏನು ಮಾಡಬೇಕೋ ಅದನ್ನು ಮಾಡುತ್ತೇನೆ ಎಂದರು.

ಈ ಜಿಲ್ಲೆಯ ಹಲವು ಯೋಜನೆಗಳ ಬಗ್ಗೆ ಶೀಘ್ರದಲ್ಲಿ ಸಭೆ ಕರೆಯಲಿದ್ದು, ರಾಮನಗರ, ಚನ್ನಪಟ್ಟಣ, ಮಾಡಿ, ಹಾರೋಹಳ್ಳಿ, ಕನಕಪುರಕ್ಕೆ ಯಾವ ನೀರಾವರಿ ಯೋಜನೆ ಮಾಡಬೇಕು ಎಂದು ಗೊತ್ತಿದೆ. ಎಷ್ಟೇ ಕಷ್ಟ ಆದರೂ ನಮ್ಮ ಅವಧಿಯಲ್ಲಿ ಜಿಲ್ಲೆಯ ಕೆರೆಗಳನ್ನು ತುಂಬಿಸಿ ನಮ್ಮ ಜನ ಇಲ್ಲೇ ಬದುಕು ಕಟ್ಟಿಕೊಳ್ಳಲು ಕಾರ್ಯಕ್ರಮ ರೂಪಿಸಿದ್ದೇವೆ. ಅತ್ಯಾಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ನೀವು ವ್ಯವಸಾಯ ಮಾಡಿ ಬದುಕು ಕಟ್ಟಿಕೊಳ್ಳಬಹುದು. ಹುಬ್ಬಳ್ಳಿ-ಧಾರವಾಡ ಸೇರಿದಂತೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚು ರೇಷ್ಮೆ ಬೆಳೆಯುತ್ತಿದ್ದಾರೆ. ಕನಕಪುರದಲ್ಲಿ ಮಾಡಿರುವ ಹಾಲಿನ ಡೈರಿ ಅಮೂಲ್ ಡೈರಿ ಮಾದರಿಯಲ್ಲಿದೆ. ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಕೆಲಸ ಮಾಡಿ ನಾವು ವಿರೋಧ ಪಕ್ಷದವರಿಗೆ ತೋರಿಸುವುದಕ್ಕಿಂತ ನಮ್ಮ ಆತ್ಮಸಾಕ್ಷಿಗೆ ತೃಪ್ತಿಪಡಿಸುವಂತೆ ಮಾಡಬೇಕು. ಗ್ಯಾರಂಟಿ ಯೋಜನೆಗಳಿಂದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸರಾಸರಿ ವರ್ಷಕ್ಕೆ 250 ಕೋಟಿ ಹಣ ಹೋಗುತ್ತಿದೆ. ಈ ಜಿಲ್ಲೆಯಲ್ಲಿ ಆಗಬೇಕಿರುವ ಕಾರ್ಯಗಳ ಬಗ್ಗೆ ಚರ್ಚೆ ಮಾಡಲು ಬಜೆಟ್ ಮಂಡನೆಯಾಗುವುದರೊಳಗೆ ಅಧಿಕಾರಿಗಳು ಹಾಗೂ ರಾಮಲಿಂಗ ರೆಡ್ಡಿಯವರ ಜೊತೆ ಚರ್ಚೆ ನಡೆಸಿ ಮುಂದಿನ ಚುನಾವಣೆ ವೇಳೆಗೆ ನಮ್ಮ ಜನ ನಮ್ಮ ಕೆಲಸಗಳನ್ನು ಗುರುತಿಸಬೇಕು. ಈ ಭಾಗದ ಲೋಕಸಭಾ ಕ್ಷೇತ್ರದಲ್ಲಿ ಆರ್.ಆರ್. ನಗರ ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ ಹಿನ್ನಡೆಯಾಗಿದ್ದು, ಅಲ್ಲಿ ಸಂಘಟನೆಗೆ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ನಮಗೆ ಯಾರ ಮೇಲೂ ದ್ವೇಷ ಸಾಧಿಸುವ ಅಗತ್ಯವಿಲ್ಲ. ಕೆಲಸ ಮಾಡಿ ಜನರ ಹೃದಯ ಗೆಲ್ಲಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್.

ಈ ಜಿಲ್ಲೆಯ ಜನ ಸ್ಮರಿಸುವಂತೆ ನಾವು ಕೆಲಸ ಮಾಡಬೇಕು. ಇಲ್ಲಿ ಹೆಚ್.ಸಿ. ಬಾಲಕೃಷ್ಣ, ಸಿ.ಪಿ. ಯೋಗೇಶ್ವರ್, ಇಕ್ಬಾಲ್ ಹುಸೇನ್‌ರವರಿದ್ದಾರೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 100 ಎಕರೆ ಪ್ರದೇಶದಲ್ಲಿ ಬಡವರಿಗೆ ನಿವೇಶನ ಹಂಚುವ ಕೆಲಸ ಮಾಡಬೇಕು ಎಂದು ಈ ಮೂವರು ಶಾಸಕರಿಗೆ ಹೇಳುತ್ತೇನೆ. ಸರ್ಕಾರಿ ಜಮೀನಿನಲ್ಲಿ ಅಥವಾ ಖಾಸಗಿ ಜಮೀನು ಖರೀದಿ ಮಾಡಿ ಆ ಕೆಲಸ ಮಾಡಲೇಬೇಕು. ನಮ್ಮ ಕಾಲದಲ್ಲಿ ಇಂತಹ ಕೆಲಸ ಆಯಿತು ಎಂದು ನಾವು ಕುಮಾರಸ್ವಾಮಿಯವರಿಗೆ ಹೇಳಬೇಕು. ನಮ್ಮ ಜನ ಬೆಂಗಳೂರಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕು. ಈ ವಿಚಾರವಾಗಿ ಅನೇಕ ಕಾರ್ಯಗಳನ್ನು ರೂಪಿಸಲಾಗಿದೆ. ಮುಂದೆಯೂ ಮಾಡುತ್ತೇವೆ. ಕಾರ್ಯಕರ್ತರುಗಳಾದ ನೀವುಗಳು ಸ್ಥಳೀಯ ಮಟ್ಟದಲ್ಲಿ ಇರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬೇಕು. ಲೋಕಸಭೆ ಚುನಾವಣೆಯಲ್ಲಿ ಜನರಿಗೆ ಸುರೇಶ್ ಮೇಲೆ ಬೇಸರವಾಗಿ ಸೋಲಾಗಿಲ್ಲ, ನಿಮ್ಮ ನಿಮ್ಮಲ್ಲಿರುವ ಕೋಪ, ಭಿನ್ನಾಭಿಪ್ರಾಯಗಳಿಂದ ಸೋಲಾಗಿದೆ. ನಾನು ಹಾಗೂ ಯೋಗೇಶ್ವರ್ ಅವರ ಮಧ್ಯೆ ಎ,ಟ್ಟ ಜಗಳವಿದ್ದರೂ ಪಕ್ಷ ಮುಖ್ಯ ಎಂದು ನಾವು ಎಲ್ಲವನ್ನು ಮರೆತು ಪಕ್ಷದ ಟಿಕೆಟ್ ನೀಡಿ ಚುನಾವಣೆ ಮಾಡಿದ್ದೇವೆ. ಚುನಾವಣೆಯಲ್ಲಿ ಸೋತ ಬಳಿಕ ಆನು ಚನ್ನಪಟ್ಟಣವನ್ನು ಬಿಡಲಿಲ್ಲ. ನಮ್ಮ ನಾಯಕರನ್ನು ಹಗಲುರಾತ್ರಿ ಬಿಡದೇ ಚನ್ನಪಟ್ಟಣದಲ್ಲಿ ಸಂಘಟನೆ ಮಾಡಲಾಯಿತು. ಆಗ ಯೋಗೇಶ್ವರ್ ಅವರಿಗೆ ಈ ಹಸ್ತವೇ ಗ್ಯಾರಂಟಿ ಎಂದು ಅರಿವಾಯಿತು. ಆಗ ಬೇಷರತ್ತಾಗಿ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಇಲ್ಲಿರುವ ನಮ್ಮ ನಾಯಕರು ದಿನ ಬೆಳಗ್ಗೆ ಬಂದು ವರ್ಗಾವಣೆ ಮಾಡಿಸಲು ಮುಂದಾಗಬೇಡಿ. ಚುನಾವಣೆ ಸಮಯದಲ್ಲಿ ಯಾರೂ ಬರಲಿಲ್ಲ. ಈಗ ಎಲ್ಲರೂ ಹುಡುಕಿಕೊಂಡು ಬರುತ್ತಿದ್ದಾರೆ. ನಿಮ್ಮ ಸ್ವಂತದವರು ಯಾರು, ಬೇರೆಯವರು ಯಾರು ಎಂದು ನಮಗೆ ತಿಳಿಯುತ್ತದೆ. ಇದಕ್ಕೆಲ್ಲ ನೀವು ತಲೆ ಹಾಕಬೇಡಿ, ಕ್ಷೇತ್ರದ ಅಭಿವೃದ್ಧಿಗೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಈ ಜಿಲ್ಲೆಯಲ್ಲಿ ಯಾರೇ ಲಂಚ ಕೇಳಿದರೂ ನನ್ನ ಗಮನಕ್ಕೆ ತರಬೇಕು. ಇಲ್ಲಿ ಶುದ್ಧ ಆಡಳಿತ ನಡೆಯಬೇಕು, ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು ಎಂದರು.


ಈ ಕಾರ್ಯಕ್ರಮದಲ್ಲಿ ಡಿಕೆಶಿ ಮಾತನಾಡಿದ್ದು


ಚನ್ನಪಟ್ಟಣ ಶಾಸಕ ಸಿ.ಪಿ. ಯೋಗೇಶ್ವರ್


ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ


ರಾಮನಗರ ಶಾಸಕ ಹೆಚ್.ಎ. ಇಕ್ಬಾಲ್ ಹುಸೇನ್

### ಹೆಚ್‌ಡಿಕೆ ನೀನು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದೀಯಾ...!

ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್‌ರವರು, ಅಭಿವೃದ್ಧಿ ವಿಚಾರದಲ್ಲಿ ರಾಜ್ಯ ಸತ್ತು ಹೋಗಿದೆ ಎಂಬ ಕುಮಾರಸ್ವಾಮಿರವರ ಹೇಳಿಕೆ ಬಗ್ಗೆ ಕೇಳಿದಾಗ, ಕುಮಾರಸ್ವಾಮಿ ನಿನಗೆ ಅಧಿಕಾರ ಇದ್ದಾಗ ನೀನು ಏನು ಮಾಡಿದೆ ಹೇಳಪ್ಪಾ...? ಮಂಡ್ಯದಲ್ಲಿ ಗೆದ್ದು ಕೇಂದ್ರದಲ್ಲಿ ದೊಡ್ಡ ಮಂತ್ರಿಯಾಗಿದ್ದೀಯಲ್ಲಾ ಈಗ ನೀನು ಏನು ಮಾಡಿದ್ದೀಯಾ ಎಂದು ಮೊದಲು ಹೇಳು. ನೀವು ಏನು ಮಾಡುತ್ತೀರೋ ಮಾಡಿ ಅದಕ್ಕೆ ಅಗತ್ಯ ಸಹಕಾರ ನಾವು ನೀಡುತ್ತೇವೆ. ನೀವು ಬರೀ ದ್ವೇಷ ರಾಜಕಾರಣ ಮಾಡುತ್ತೀರಿ. ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಬಾರದು ಎಂದು ಆಕ್ಷೇಪ ಮಾಡಿದ್ದೀರಿ. ನಿಮ್ಮಂತೆ ನಾವು ದ್ವೇಷ ರಾಜಕಾರಣ ಮಾಡುವುದಿಲ್ಲ. ನಿಮಗೆ ಎಲ್ಲಾ ರೀತಿಯ ಸಹಕಾರ ನೀಡುತ್ತೇವೆ. ಕೇಂದ್ರ ಸಚಿವ ರಾಜನಾಥ್ ಸಿಂಗ್‌ರವರು ರಾಜ್ಯಕ್ಕೆ ಬಂದು ಏನು ಹೇಳಿದ್ದಾರೆ ಎಂಬುದನ್ನು ತಲೆಯಲ್ಲಿ ಇಟ್ಟುಕೊಳ್ಳಿ ಎಂದು ತಿರುಗೇಟು ನೀಡಿದರು. ಕುಮಾರಸ್ವಾಮಿಗೆ ಅಭಿವೃದ್ಧಿಗಿಂತ ದ್ವೇಷ ರಾಜಕಾರಣವೇ ಹೆಚ್ಚು. ಅಭಿವೃದ್ಧಿ ವಿಚಾರವಾಗಿ ಯಾರೂ ನನ್ನನ್ನು ಭೇಟಿ ಮಾಡುತ್ತಿಲ್ಲ ಎಂಬ ಕುಮಾರಸ್ವಾಮಿರವರ ಆರೋಪದ ಬಗ್ಗೆ ಕೇಳಿದಾಗ, ಒಂದೇ ದಿನದಲ್ಲಿ ಮೇಕೆದಾಟು ಯೋಜನೆಗೆ ಮೋದಿ ಅವರಿಂದ ಸಹಿ ಹಾಕಿಸುವುದಾಗಿ ಹೇಳಿದ್ದೆಯಲ್ಲಾ, ಯಾಕೆ ಮಾಡಿಸಿಲ್ಲಾ...? ನಮ್ಮ ಸಚಿವ ಎಂ.ಬಿ. ಪಾಟೀಲ್ ಅವರ ಬಳಿ ಹೋಗಿ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಚರ್ಚೆ ಮಾಡಿಲ್ಲವೇ...? ಅವರಿಗೆ ದ್ವೇಷದ ರಾಜಕಾರಣವೇ ಮುಖ್ಯವೇ ಹೊರತು ರಾಜ್ಯದ ಅಭಿವೃದ್ಧಿಯಲ್ಲ, ದ್ವೇಷದಿಂದ ಯಾರೂ ಯಾವುದೇ ಸಾಧನೆ ಮಾಡಿಲ್ಲ. ದೊಡ್ಡ ದೊಡ್ಡ ಚಕ್ರವರ್ತಿಗಳೇ ಕೆಳಗೆ ಬಿದ್ದಿದ್ದಾರೆ. ರಾಜಕಾರಣದಲ್ಲಿ ಯಾರೂ ಶಾಶ್ವತವಲ್ಲ ಎಂದು ಹೆಚ್.ಡಿ. ಕುಮಾರಸ್ವಾಮಿರವರ ವಿರುದ್ಧ ಕಿಡಿಕಾರಿದರು. ☯



# ಅನ್ಯಜಾತಿಯ ಯುವಕನನ್ನು ಪ್ರೀತಿಸುತ್ತಿದ್ದಾಳೆಂದು ಮಗಳನ್ನೇ ಕೆರೆಗೆ ತಳ್ಳಿ ಹತ್ಯೆ ಮಾಡಿದ ತಂದೆ!


ಆರೋಪಿ ರಾಮಮೂರ್ತಿ


ಕೊಲೆಯಾದ ಸಹನಾ

ಮಗಳು ಅನ್ಯಜಾತಿಯ ಹುಡುಗನನ್ನು ಪ್ರೀತಿಸುತ್ತಿದ್ದಾಳೆಂದು ತಂದೆಯೇ ಉಪಾಯದಿಂದ ತನ್ನ ಟಿವಿಎಸ್ ಬೈಕಿನಲ್ಲಿ ಹೋಗುತ್ತಿದ್ದಾಗ ಕೆರೆಗೆ ಬೀಳಿಸಿ ಮಗಳನ್ನು ಕೊಂದಿರುವ ಆರೋಪ ಹೊತ್ತ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್‌ನಲ್ಲಿ ನಡೆದಿದೆ.



ಆನೇಕಲ್ ಹುಸ್ಕೂರು ಬಳಿಯ ಹಾರೋಹಳ್ಳಿಯಲ್ಲಿ ಘಟನೆ ನಡೆದಿದ್ದು, ಬೈಕ್ ಸಮೇತ ಕೆರೆಗೆ ಬಿದ್ದ ತಂದೆ ರಾಮಮೂರ್ತಿ ನೀರಿನಲ್ಲಿ ಈಜಿ ದಂಡ ಸೇರಿದ್ದರೆ, ಮಗಳು ಸಹನಾ (20) ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾಳೆ. ಸಾವಿನ ಸುತ್ತ ಅನುಮಾನ ಕೇಳಿ ಬಂದಿದ್ದು, ತಂದೆಯೇ ಮಗಳನ್ನು ಕೊಂದಿದ್ದಾನೆಂದು ಗಂಭೀರ ಆರೋಪ ಉಂಟಾಗಿದೆ.

ಸಹನಾ ಬೇರೆ ಜಾತಿಗೆ ಸೇರಿದ ನಿಖಿಲ್ ಎಂಬ ಯುವಕನನ್ನು ಪ್ರೀತಿಸುತ್ತಿದ್ದು, ಕೆಲವು ದಿನಗಳ ಹಿಂದೆ ಈ ವಿಷಯ ಮನೆಯವರಿಗೂ ತಿಳಿದು ಹೋಗಿತ್ತು. ಇದರಿಂದ ಸಿಟ್ಟಿಗೆದ್ದ ತಂದೆ ರಾಮಮೂರ್ತಿ ಮನೆಯಲ್ಲಿ ಗಲಾಟೆ ಮಾಡಿದ್ದಲ್ಲದೆ, ಬೇರೆ ಹುಡುಗನ ಜೊತೆಗೆ ಮದುವೆ ಮಾಡಿಸಲು ಸಿದ್ಧತೆ ನಡೆಸಿದ್ದ. ತನ್ನ ಅಕ್ಕನ ಮಗನೊಂದಿಗೆ ಮದುವೆ ಮಾಡಲು ಮುಂದಾಗಿದ್ದು, ಈ ಬಗ್ಗೆ ಸ್ನೇಹಿತನೊಬ್ಬನ ಮನೆಗೆ ಕರೆದೊಯ್ದು ಮಾತುಕತೆಯನ್ನೂ ನಡೆಸಿದ್ದ. ಅಲ್ಲಿಯೂ ಮಗಳು ಮಾತ್ರ ತಾನು ಪ್ರೀತಿಸಿದ ಹುಡುಗನನ್ನೇ ಮದುವೆಯಾಗುವುದಾಗಿ ಹಠ ಹಿಡಿದಿದ್ದಳು ಎನ್ನಲಾಗಿದೆ.

ಅಲ್ಲಿಂದ ಮಗಳನ್ನು ಬೈಕಿನಲ್ಲಿ ಕೂರಿಸಿಕೊಂಡು ಬರುತ್ತಿದ್ದಾಗಲೇ ಕೆರೆಯ ಏರಿ ಮೇಲಿನಿಂದ ಚಲಿಸುತ್ತಿದ್ದಾಗ ಬೈಕ್ ಸಮೇತ ಕೆರೆಗೆ ಬಿದ್ದಿದ್ದಾರೆ. ಮಗಳು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರೆ, ತಂದೆ ರಾಮಮೂರ್ತಿ ಈಜಿ ದಡ ಸೇರಿದ್ದ. ಘಟನೆಯ ಬಳಿಕ ಹೆಬ್ಬಗೋಡಿ ಠಾಣೆಗೆ ತೆರಳಿ ಘಟನೆ ಬಗ್ಗೆ ಹೇಳಿಕೊಂಡಿದ್ದ. ಆದರೆ ಆತನ ವರ್ತನೆ ಕಂಡು ಪೊಲೀಸರು ಅನುಮಾನದಲ್ಲಿ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

**ಮರ್ಯಾದಾ ಹತ್ಯೆ - ಪ್ರಿಯಕರ ಆರೋಪ**

ಇದೇ ವೇಳೆ, ಯುವತಿಯನ್ನು ಪ್ರೀತಿಸುತ್ತಿದ್ದ ನಿಖಿಲ್ ಮರ್ಯಾದೆ ಹತ್ಯೆ ಬಗ್ಗೆ ಆರೋಪ ಮಾಡಿದ್ದು, ಹುಡುಗಿ ತಂದೆಯ ವಿರುದ್ಧ ಹೆಬ್ಬಗೋಡಿ ಠಾಣೆಗೆ ದೂರು ನೀಡಿದ್ದಾನೆ. ತಂದೆಯೇ ತನ್ನ ಮಗಳನ್ನು ಹತ್ಯೆ ಮಾಡಿದ್ದಾನೆ. ಕೆರೆ ನೀರಿನಲ್ಲಿ ಕಾಲಿನಿಂದ ಒತ್ತಿ ತಲೆ ಮುಳುಗಿಸಿ ಹತ್ಯೆ ಮಾಡಿದ್ದಾನೆ. ಒಂದು ವರ್ಷದಿಂದ ಪ್ರೀತಿಸುತ್ತಿದ್ದು, ಮದುವೆಯಾಗಲು ನಿರ್ಧರಿಸಿದ್ದೆವು. ಎರಡು ದಿನಗಳ ಹಿಂದಷ್ಟೇ ಯುವತಿ ಹೆತ್ತವರಿಗೆ ನಮ್ಮ ಪ್ರೀತಿ ಬಗ್ಗೆ ಗೊತ್ತಾಗಿತ್ತು. ಅದೇ ದಿನ ತನಗೆ ರಾಮಮೂರ್ತಿ ಕರೆ ಮಾಡಿದ್ದು ನಿಂದಿಸಿದ್ದಲ್ಲದೆ ಬೆಳಗ್ಗೆ ಮಾತುಕತೆಗೆ ಬರುವಂತೆ ತಿಳಿಸಿದ್ದರು. ಬೇರೊಂದು ಮನೆಯಲ್ಲಿ ನ್ಯಾಯ ಪಂಚಾಯಿತಿ ಆಗಿದ್ದು, ಈ ವೇಳೆ ಯುವತಿ ಮೇಲೆ ರಾಮಮೂರ್ತಿ ಹಲ್ಲೆ ಮಾಡಿದ್ದ. ಅಲ್ಲದೆ, ಪ್ರಾಣ ಹೋದರೂ ನಿನ್ನ ಪ್ರೀತಿಗೆ ಒಪ್ಪುವುದಿಲ್ಲ ಎಂದು ಆವಾಜ್ ಹಾಕಿದ್ದ. ಈಗ ಮಾರ್ಗ ಮಧ್ಯೆ ಕೆರೆಗೆ ತಳ್ಳಿ ಆಕೆಯನ್ನು ಹತ್ಯೆ ಮಾಡಿದ್ದಾನೆಂದು ಪೊಲೀಸ್ ದೂರು ನೀಡಿದ್ದಾನೆ.






# ಬೀದರ: ಪ್ರೀತಿಸಿದ ಯುವಕನೊಂದಿಗೆ ಮದುವೆ ಮಾಡಿಕೊಳ್ಳುವ ಹಠ ಮದುವೆ ಪ್ರಸ್ತಾಪ ನಿರಾಕರಿಸಿದ ಮಗಳನ್ನು ಕೊಂದ ಜನ್ಮದಾತ!


ಆರೋಪಿ ಮೋತಿರಾಮವ



ತಾನು ಪ್ರೀತಿಸಿದ ಯುವಕನೊಂದಿಗೆ ಮದುವೆಯಾದರೆ ಆ ಯುವಕನೇ ಹೊರತು ಬೇರೆಯವರೊಂದಿಗೆ ಅಲ್ಲವೆಂದ ಯುವತಿ. ಕುಟುಂಬದವರು ತೋರಿಸಿದ ಹುಡುಗನನ್ನು ಮದುವೆಯಾಗಲು ನಿರಾಕರಿಸಿದ್ದಕ್ಕೆ ಜನ್ಮ ನೀಡಿದ ತಂದೆಯೇ ಮಗಳನ್ನು ಕಟ್ಟಿಗೆಯಿಂದ ತಲೆಗೆ ಹೊಡೆದು ಹಗ್ಗದಿಂದ ಕತ್ತು ಬಿಗಿದು ಕೊಲೆ ಮಾಡಿರುವ ಘಟನೆ ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ವಡಗಾಂವ ಸಮೀಪದ ಬರಗೇನ್ ತಾಂಡದಲ್ಲಿ ದಿನಾಂಕ 7-2-2025 ರಂದು ಜರುಗಿದೆ.

**ಬೀದರ**
✍ ವೀರಶೆಟ್ಟಿ ಕುಂಬಾರ



ಕೊಲೆಯಾದ ಮೋನಿಕಾ

ಬರಗೇನ್ ತಾಂಡಾದ ಭಾಗುಬಾಯಿ ಮೋತಿರಾಮ ಜಾಧವ ದಂಪತಿಗಳಿಗೆ ಮೊನಿಕಾ ಅಲಿಯಾಸ್ ಸೋನಿ (18), ಮೀನಾ (15), ಜಗದೀಶ (13), ಕೃಷ್ಣ (8) ಹೀಗೆ ನಾಲ್ಕು ಜನ ಮಕ್ಕಳು ಹಾಗೂ ಮೋತಿರಾಮನ ತಂದೆ ಭೀಮ, ತಾಯಿ ಅನುಸೂಯ ಎಲ್ಲೂರು ತಮ್ಮದೇ ಜಮೀನಿನಲ್ಲಿ ಕೆಲಸ ಹಾಗೂ ಕೂಲಿ ಕೆಲಸ ಮಾಡಿಕೊಂಡು ಸುಖಸಂಸಾರ ಸಾಗಿಸುತ್ತಿರುವ ಕುಟುಂಬ ಇದಾಗಿತ್ತು.

ಹೀಗಿರುವಾಗ ವಯಸ್ಸಿಗೆ ಬಂದ ಮಗಳನ್ನು ಮದುವೆ ಮಾಡುವ ಯೋಚನೆ ತಂದೆ ಮೋತಿರಾಮ ಜಾಧವ ಮಾಡಿದರು. ಕುಟುಂಬಸ್ಥರು ತೋರಿಸಿದ ಯುವಕನೊಂದಿಗೆ ಮದುವೆ ಮಾಡಿಕೊಳ್ಳಲು ಮೋನಿಕಾಗೆ ಇಷ್ಟ ಇರಲಿಲ್ಲ. ತಾನು ಬೇರೊಬ್ಬ ಯುವಕನೊಂದಿಗೆ ಪ್ರೀತಿ ಮಾಡುತ್ತಿರುವುದಾಗಿ ಮೋನಿಕಾ ಹೇಳಿದಳು. ಈ ಸಂಬಂಧ ಮಗಳೊಂದಿಗೆ ತಂದೆಯ ಜಗಳವಾಗಿದ್ದು, ಮನೆಯಲ್ಲಿ ಯಾರು ಇಲ್ಲದ ವೇಳೆ ಕೋಪದಲ್ಲಿ ಮಗಳ ಮೇಲೆ ಕಟ್ಟಿಗೆಯಿಂದ ಮಾರಣಾಂತಿಕ ಹಲ್ಲೆ ನಡೆಸಿ ಹಗ್ಗದಿಂದ ಕತ್ತು ಬಿಗಿದು ಮಗಳನ್ನು ಕೊಂದು ಮನೆಯಿಂದ ಪರಾರಿಯಾಗಿದ್ದಾರೆ ಎಂದು ಮೃತನ ಹೆಂಡತಿ ಭಾಗುಬಾಯಿ ಸಂತಪೂರ ಪೊಲೀಸ್ ಠಾಣೆಗೆ ದೂರು ನೀಡಿದರು.

ಪಿಎಸ್ಐ ನಂದಕುಮಾರರವರು ಅಪರಾಧ ಸಂಖ್ಯೆ 22/2025 ಕಲಂ 103 ಬಿಎನ್ಎಸ್ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದರು.


ಎಸ್ಪಿ ಪ್ರದೀಪ್ ಗುಂಟಿ


ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ, ಡಿವೈಎಸ್ಪಿ ಶಿವಾನಂದ ಪವಾಡ ಶೆಟ್ಟರವರ ಸೂಕ್ತ ಮಾರ್ಗದರ್ಶನದಲ್ಲಿ ಸಿಪಿಐ ರಘುವೀರ್ ಸಿಂಗ್ ಠಾಕೂರ್‌ರವರು ಮುಂದಿನ ತನಿಖೆ ಕೈಗೊಂಡರು.

ಇವರ ತಾಂಡದ ಪಕ್ಕದ ಗ್ರಾಮವಾದ ಉಜ್ಜನಿ ಗ್ರಾಮದ ಯುವಕನೊಬ್ಬ ಇವರ ತಾಂಡಕ್ಕೆ ಗೌಂಡಿ ಕೆಲಸಕ್ಕೆ ಎಂದು ಬರುತ್ತಿದ್ದ ಆ ಯುವಕನೊಂದಿಗೆ ಮೋನಿಕಾ

☞12

# ಹಣದ ವಿಚಾರವಾಗಿ ಪ್ರಾಣ ಸ್ನೇಹಿತನನ್ನೇ ಪೆಟ್ರೋಲ್ ಸುರಿದು ಸುಟ್ಟು ಕೊಂದ ಪಾಪಿ!


ಕೊಲೆಯಾದ ಬಸವರಾಜ ತಳವಾರ

**ಅವರಿಬ್ಬರದ್ದು ಸುಮಾರು 5 ವರ್ಷದ ಸ್ನೇಹ. ಒಟ್ಟಿಗೆ ನಾನಾ ಸ್ಥಳಗಳಲ್ಲಿ ಇಬ್ಬರೂ ಸೇರಿಕೊಂಡು ಒಟ್ಟಗೆ ಕೆಲಸ ಮಾಡಿಕೊಂಡಿದ್ದರು. ಅಕ್ಕಪಕ್ಕದ ತಾಲೂಕಿನ ಸ್ನೇಹಿತರಾಗಿದ್ದ ಇವರು 5 ವರ್ಷದ ಅವಧಿಯಲ್ಲಿ ಎರಡು ದೇಹ ಒಂದೇ ಜೀವ ಅಂತ ಪ್ರಾಣ ಸ್ನೇಹಿತರಾಗಿದ್ದರು. ಇಬ್ಬರೂ ಒಂದೇ ಕಡೆ ಕೆಲಸ ಮಾಡಿಕೊಂಡು ಅನ್ಯೋನ್ಯವಾಗಿದ್ದರು ಅನ್ನಬಹುದು. ಅದರಲ್ಲಿ ಒಬ್ಬ ಸ್ನೇಹಿತ ತಾನು ದುಡಿದ ಹಣವನ್ನೆಲ್ಲ ಇನ್ನೊಬ್ಬ ಸ್ನೇಹಿತನಿಗೆ ಇಟ್ಟುಕೊಳ್ಳಲು ಕೊಡುತ್ತಿದ್ದ, ಇಬ್ಬರೂ ಸಾರಾಯಿ ಚಟಗಾರರಾಗಿದ್ದರು. ಆದರೆ ಒಂದು ದಿನ ಒಬ್ಬ ಸ್ನೇಹಿತ ತಾನು ಕೊಟ್ಟ ಹಣವನ್ನು ವಾಪಸ್‌ಕೇಳಿದಾಗ ಅವಾಗ ಇನ್ನೊಬ್ಬ ಸ್ನೇಹಿತ ಹಣ ಕೊಡಲು ನಿರಾಕರಿಸಿದ್ದು, ಇದರಿಂದ ಸಿಟ್ಟಿಗೆದ್ದು ಹಣವನ್ನು ಕೊಟ್ಟ ಗೆಳೆಯ ಇನ್ನೊಬ್ಬ ಗೆಳೆಯನ ಮೇಲೆ ಪೆಟ್ರೋಲ್ ಸುರಿದು ಹತ್ಯೆ ಮಾಡಿದ ಘಟನೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕುಂಬಾರ ಹಳ್ಳ ಗ್ರಾಮದಲ್ಲಿ ಜರುಗಿದರ ಬಗ್ಗೆ ಜಮಖಂಡಿ ಗ್ರಾಮೀಣ ಶಹರ ಪೊಲೀಸ್ ಠಾಣೆಯಿಂದ ವರದಿಯಾಗಿದೆ**


ಆರೋಪಿ ಮಹಾನಿಂಗ

ಬಾಗಲಕೋಟೆ ಜಿಲ್ಲೆ ರಬಕವಿ-ಬನಹಟ್ಟಿ ತಾಲೂಕಿನ ಹನಗಂಡಿ ಗ್ರಾಮದ ನಿವಾಸಿ ಮಹಾನಿಂಗ ಸಿದ್ದರಾಯ ಬಿದರಿ ವಯಸ್ಸು (29) ಹಾಗೂ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಜನವಾಡ ಗ್ರಾಮದ ನಿವಾಸಿ ಬಸವರಾಜ ಪರಸಪ್ಪ ತಳವಾರ ಇವರಿಬ್ಬರು ಸುಮಾರು ಐದು ವರ್ಷಗಳ ಹಿಂದೆ ಪರಸ್ಪರ ಪರಿಚಯವಾಗಿದ್ದು ಇಬ್ಬರ ಮನೆಯಲ್ಲೂ ಕಷ್ಟದ ಜೀವನ ನಡೆಸಬೇಕಾದ ಪರಿಸ್ಥಿತಿ ಇದ್ದುದ್ದರಿಂದ ಇಬ್ಬರೂ ಕೂಡಿಕೊಂಡು ಒಂದು ಯೋಚನೆಯಲ್ಲಿ ಮೊಳಗಿದ್ದು ನಾವು ಅಕ್ಕಪಕ್ಕದ ತಾಲೂಕಿನವರಾಗಿದ್ದು ಇನ್ನು ಮುಂದೆ ನಮ್ಮ ನಮ್ಮ ಊರುಗಳಲ್ಲಿ ದುಡಿಮೆ ಮಾಡಿದರೆ ಮನೆ ಜೀವನಕ್ಕೆ ಹಣ ಸಾಕಾಗುವುದಿಲ್ಲ ನಾವಿಬ್ಬರು ಸೇರಿಕೊಂಡು ಬೇರೆ ಕಡೆ ಹೋಗಿ ಚೆನ್ನಾಗಿ ದುಡಿಯೋಣ ಎಂದು ಪರಸ್ಪರ ಮಾತಾಡಿಕೊಂಡು ಗಂಟು ಮೂಟೆ ಕಟ್ಟಿಕೊಂಡು ಒಂದು ಊರಿಗೆ ಪಯಣ ಬೆಳೆಸಿದರು. ಅದು ಯಾವ ಊರು ಅಂತಾ ಮುಂದೆ ಓದಿ...

### ಮೈಸೂರಿಗೆ ಪ್ರಯಾಣ!

ಇಬ್ಬರೂ ಸ್ನೇಹಿತರು ಸೇರಿಕೊಂಡು ದುಡಿಯಲು ಬೇರೆ ಕಡೆ ಹೋಗಿ ಒಟ್ಟಿಗೆ ಕೆಲಸ ಮಾಡಿಕೊಂಡು ಮನೆ ಜೀವನಕ್ಕೆ ಹಣವನ್ನು ಸಂಪಾದಿಸಿ ತಾವು ಉತ್ತಮ ಸ್ತಿತಿಯಲ್ಲಿ ಇರುವ ಸಲುವಾಗಿ ತಮ್ಮ ತಮ್ಮ ಊರುಗಳನ್ನು ತೊರೆದ ಬಸವರಾಜ ಹಾಗು ಮಹಾನಿಂಗ ಸಾಂಸ್ಕೃತಿಕ ನಗರಿ ಮೈಸೂರಿಗೆ ಹೋದರು. ಅಲ್ಲಿ ಕೂಲಿನಾಲಿ ಕೆಲಸ ಮಾಡಿಕೊಂಡು ಒಂದು ಬಾಡಿಗೆ ಮನೆ ಪಡೆದುಕೊಂಡು ಇಬ್ಬರೂ ಚೆನ್ನಾಗಿ ದುಡಿಯಲು ಪ್ರಾರಂಭ ಮಾಡಿದರು. ಮುಂದೆ ಉತ್ತಮವಾಗಿ ಕೆಲಸ ಮಾಡಿ ದುಡ್ಡು ಮಾಡುವ ನಿರೀಕ್ಷೆಯಲ್ಲಿದ್ದರು.


ಬಸವರಾಜ ತಳವಾರನ ಶವ

ಆದರೆ ಇವರಲ್ಲಿ ಒಂದು ಚಟವಿತ್ತು.

### ಸಾರಾಯಿ ದಾಸರಾಗಿದ್ದರು

ಪ್ರಾಣ ಸ್ನೇಹಿತರಾದ ಬಸವರಾಜ ಹಾಗೂ ಮಹಾನಿಂಗರಲ್ಲಿ ಒಂದು ಮಹಾನ್ ಚಟವನ್ನು ಅಳವಡಿಸಿಕೊಂಡಿದ್ದರು. ದಿನಂಪ್ರತಿ ದುಡಿದು ಬಂದು ಸಾರಾಯಿ ಅಂಗಡಿಗೆ ಹೋಗಿ ಎಣ್ಣೆ ಏರಿಸಿಕೊಂಡು ಊಟ ಮಾಡಿ ಮಲಗಿ ಮತ್ತೆ ಮರುದಿನ ತಮ್ಮ ತಮ್ಮ ಕಾಯಕದಲ್ಲಿ ತೊಡಗುತ್ತಿದ್ದರು. ಇದರಲ್ಲಿ ಮಹಾನಿಂಗ ತಾನು ಸಂಪಾದಿಸಿದ ಹಣವನೆಲ್ಲ ತನ್ನ ಸ್ನೇಹಿತ ಬಸವರಾಜನಿಗೆ ಇಟ್ಟುಕೊಳ್ಳಲು ಕೊಡುತ್ತಿದ್ದ. ಎಷ್ಟೇ ಆಗಲಿ ತನ್ನ ಗೆಳೆಯ, ಅವನ ಬಳಿ ಇದ್ದರೆ ಒಳ್ಳೆಯದು ಅಂತ ದುಡಿದ ಹಣವನ್ನು ತನಗೆ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಉಳಿದ ಹಣವನ್ನೆಲ್ಲ ಮಹಾನಿಂಗ, ಬಸವರಾಜ ತಳವಾರ ಈತನಿಗೆ ಕೂಡಿಡಲು ಕೊಡುತ್ತಿದ್ದ. ಸುಮಾರು ಐದು ವರ್ಷಗಳ ಕಾಲ ಮೈಸೂರು ಹಾಗೂ ರಾಜ್ಯದ ವಿವಿಧ ಭಾಗಗಳಲ್ಲಿ ದುಡಿದು ಸಂಪಾದನೆ ಮಾಡಿಕೊಂಡು ಚೆನ್ನಾಗಿದ್ದ ಸ್ನೇಹಿತರು ಮುಂದೆ ಏನು ಮಾಡಿದರು ಮುಂದೆ ಓದಿ...


ಎಸ್ಪಿ ಅಮರನಾಥ್ ರೆಡ್ಡಿ


ಡಿವೈಎಸ್ಪಿ ಈ. ಶಾಂತಕುಮಾರ್


ಸಿಪಿಐ ಮಲ್ಲಪ್ಪ ಮಡ್ಡಿ

**ಬಾಗಲಕೋಟೆ**
✍ ಮಂಜುನಾಥ ಈಶ್ವರ ಕರೋಳಿ

### ಮರಳಿ ಜಮಖಂಡಿಗೆ ಬಂದರು

ಸುಮಾರು ವರ್ಷಗಳ ಕಾಲ ಮೈಸೂರು ಹಾಗೂ ರಾಜ್ಯದ ನಾನಾ ಸ್ಥಳಗಳಲ್ಲಿ ದುಡಿಮೆ ಮಾಡಿ ಉತ್ತಮ ಹಣವನ್ನು ಸಂಪಾದನೆ ಮಾಡಿಕೊಂಡು ಮರಳಿ ತವರು ಜಿಲ್ಲೆಗೆ ಬಂದೇ ಬಿಟ್ಟರು. ಬಂದ ನಂತರ ಜಮಖಂಡಿಯ ಮಹಾನಿಂಗ ಹಾಗೂ ಬಸರಾಜನಿಗೆ ಸಮೀಪವಾಗಿರುವುದರಿಂದ ಜಮಖಂಡಿಯಲ್ಲಿ ಯಾವುದಾದರೊಂದು ಕೆಲಸ ಮಾಡಿಕೊಂಡು ಮತ್ತೇ ಸಂಪಾದನೆ ಮಾಡಬೇಕೆಂಬ ಆಲೋಚನೆಯಲ್ಲಿದ್ದ ಪ್ರಾಣ ಸ್ನೇಹಿತರು ಕೆಲಸ ಹುಡುಕಲು ಪ್ರಾರಂಭಿಸಿದಾಗ ಅಲ್ಲಿ ರೈತರ ಜಮೀನಿನಲ್ಲಿ ಕಬ್ಬು ಕಡೆಯುವುದು, ಇಟ್ಟಂಗಿ ಭಟ್ಟಿಗಳಲ್ಲಿ ಕೆಲಸ ಗಿಟ್ಟಿಸಿಕೊಂಡು ಜಮಖಂಡಿಯಲ್ಲಿ ದುಡಿಯಲು ಸಲುವಾಗಿ ಜಮಖಂಡಿಯಿಂದ ದುಡಿಯಲು ಪ್ರಾರಂಭಿಸಿ ಇನ್ನು ಅವರಿಗೆ ಉಳಿದುಕೊಳ್ಳುವ ಸಲುವಾಗಿ ಜಮಖಂಡಿಯಿಂದ ಸುಮಾರು ಐದಾರು ಕಿಲೋಮೀಟರ್ ಅಂತರದಲ್ಲಿರುವ ಕುಂಬಾರಹಳ್ಳ ಎಂಬ ಗ್ರಾಮದಲ್ಲಿ ಒಂದು ಮನೆ ಬಾಡಿಗೆ ಪಡೆದುಕೊಂಡು ಜೀವನ ಸಾಗಿಸಿದ್ದರು. ಹೀಗಿರುವಾಗ ಪ್ರಾಣಸ್ನೇಹಿತರ ಮಧ್ಯೆ ಮನಸ್ತಾಪಗಳು ಪ್ರಾರಂಭವಾಗಿತ್ತು. ಅದು ಯಾವ ಕಾರಣಕ್ಕೆ ಅಂತಿರಾ!

### ಹಣದ ವಿಚಾರವಾಗಿ ಜಗಳ !

ಸುಮಾರು 14 ದಿನಗಳ ಹಿಂದೆ ಜಮಖಂಡಿಗೆ ಬಂದು ಕುಂಬಾರಹಳ್ಳದ ಗ್ರಾಮದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇದ್ದ ಆಪ್ತ ಸ್ನೇಹಿತರು ಅಂದು ದಿನಾಂಕ 3/2/2025 ರಂದು ಬೇಳಿಗ್ಗೆ 11:30 ಸುಮಾರು ಸಮಯವಿರಬಹುದು ಅಂದು ಕೆಲಸಕ್ಕೆ ರಜೆ ಮಾಡಿ ಸೀದಾ ಬಾರ್ ಅಂಗಡಿಗೆ ತೆರಳಿದ್ದಾರೆ. ಅಲ್ಲಿ ಸಾರಾಯಿ ಕುಡಿಯುತ್ತ ಕುಳಿತಾಗ ಮಾಹನಿಂಗ ಬಿದರಿ ಬಸವರಾಜ ತಳವಾರ ಈತನಿಗೆ ತಾನು ದುಡಿದು ಬಸವರಾಜನ ಬಳಿ ಕೊಟ್ಟ ಹಣವನ್ನು ಕೇಳಿದ್ದಾನೆ. ಆಗ ಬಸವರಾಜ ಈಗ್ಯಾಕೆ ನಿಂಗೆ ದುಡ್ಡು ಬೇಕು? ಇಷ್ಟು ದಿನ ಬರಲಾರದ ಹಣದ ವಿಷಯ ಇಗ್ಯಾಗೆ? ಅಂತಾ ಪ್ರಶ್ನೆ ಮಾಡಿದ್ದಾನೆ. ಅದು ನಾನು ದುಡಿದ ಹಣ ಮರಳಿ ಕೊಟ್ಟುಬಿಡು. ನನಗೆ ನಿನಗೆ ಜಗಳ ಬೇಡ, ನೀನು ಆಪ್ತ ಸ್ನೇಹಿತ ಅಂತ ನಿನ್ನ ಬಳಿ ಇರಲಿ ಅಂತಾ ಕೊಟ್ಟಿದ್ದೇನೆ. ಈಗ ಹಿಗ್ಯಾಗೆ ಮಾತಾಡ್ತಿಯ ಅಂತ ಮಹಾನಿಂಗ ಬಸವರಾಜನಿಗೆ ಕೇಳಿದ್ದಾನೆ. ಈ ವಿಷಯ ಇಲ್ಲಿ ಬೇಡ ಮನೆಯಲ್ಲಿ ಮಾತಾಡೋಣ ಅಂತಾ ಮತ್ತೇ ಮದ್ಯವನ್ನು ಪಾರ್ಸೆಲ್ ತೆಗೆದುಕೊಂಡು ಕುಂಬಾರ ಹಳ್ಳದ ಬಾಡಿಗೆ ಮನೆಗೆ ಬಂದು ಮದ್ಯವನ್ನು ಸೇವಿಸಿ ಮತ್ತೆ ಹಣದ ವಿಚಾರವಾಗಿ ಇಬ್ಬರೂ ಜಗಳ ಮಾಡುತ್ತಿದ್ದರು. ಬಸವರಾಜನು ಮಹಾನಿಂಗನಿಗೆ ಕುಡಿದ ಮತ್ತಿನಲ್ಲಿ ನೀನು ಕೊಟ್ಟ ಹಣ 2 ಲಕ್ಷ 50 ಸಾವಿರ ಹಣದಲ್ಲಿ ಒಂದು ರೂಪಾಯಿನೂ ಕೊಡುವುದಿಲ್ಲ ಅಂದಾಗ ಸಿಟ್ಟಾದ ಮಹಾನಿಂಗ ಮನೆಯ ಹೊರಗೆ ಇದ್ದ ಮೋಟರ್ ಬೈಕ್ ಬಳಿ ಹೋಗಿ ಅದರಲ್ಲಿದ್ದ ಪೆಟ್ರೋಲ್‌ನ್ನು ತೆಗೆದು ಕುಡಿದು ಟೈಟಾಗಿ ಮಲಗಿದ್ದ ಬಸವರಾಜ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಇಟ್ಟ, ಅಲ್ಲಿಂದ ಪರಾರಿಯಾಗಿ ಮತ್ತೆ ಮದ್ಯ ಏರಿಸಿಕೊಳ್ಳಲು ಬಾರ್‌ಗೆ ಹೋಗಿದ್ದಾನೆ. ಇತ್ತ ತಾವಿದ್ದ ಬಾಡಿಗೆ ಮನೆಯಿಂದ ಬೆಂಕಿ ಹೊಗೆ ಆಡುತ್ತಿದ್ದಾಗ ಗ್ರಾಮಸ್ಥರು ಭಯಭೀತರಾದರು. ಅಷ್ಟರಲ್ಲಿ ಬಸವರಾಜ ಸುಟ್ಟು ಶವವಾಗಿದ್ದ, ಇತ್ತ ಮಹಾನಿಂಗ ಮತ್ತೆ ಎಣ್ಣೆ ಹೊಡೆದು ನೇರವಾಗಿ ಜಮಖಂಡಿ ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯದಲ್ಲಿದ್ದ ಜಮಖಂಡಿ ಗ್ರಾಮೀಣ ಠಾಣಾ ಪಿಎಸ್ಐ ಜಿ.ಎಂ. ಪೂಜಾರಿ ಅವರಿಗೆ ತಾನೂ ಹಣದ ವಿಚಾರವಾಗಿ ತನ್ನ ಗೆಳೆಯನಾದ ಬಸವರಾಜ ಪರಸಪ್ಪ


ಪೆಟ್ರೋಲ್ ತುಂಬಿ ಸುರಿದ ಬಾಟಲ್


ಡಿಬಿ ತುಪ್ಪದ

☞ 12

# ಅಂಗಡಿ ಶಟರ್‌ಗಳನ್ನು ಮುರಿದು ಹಣ ಕಳುವು ಮಾಡುತ್ತಿದ್ದ ಮಂಕಿ ಕ್ಯಾಪ್ ಖದೀಮರ ಬಂಧನ!


**ಐದು ವರ್ಷಗಳಿಂದ ಮುಖಕ್ಕೆ ಮಂಕಿ ಕ್ಯಾಪ್ ಹಾಕಿಕೊಂಡು ರಾತ್ರಿ ಹೊತ್ತು ಅಂಗಡಿ ಶಟರ್‌ಗಳನ್ನು ಮುರಿದು ಹಣ ದೋಚುತ್ತಿದ್ದ ಕಳ್ಳರ ಗ್ಯಾಂಗ್‌ವೊಂದು ಯಾರ ಕೈಗೂ ಸಿಗದೆ ಸಾರ್ವಜನಿಕರ ಮತ್ತು ಪೊಲೀಸರ ನಿದ್ದೆಗೆಡಿಸಿದ್ದ ಏಳು ಜನ ಮಂಕಿ ಕ್ಯಾಪ್ ಕಳ್ಳರ ಗ್ಯಾಂಗ್‌ನಲ್ಲಿ ಇಬ್ಬರು ಅಪ್ರಾಪ್ತರು ಸೇರಿದಂತೆ ಐವರು ಹೈವೇಯಲ್ಲಿ ದರೋಡೆ ಮಾಡಲು ಹೊಂಚು ಹಾಕುತ್ತಿದ್ದಾಗ ಐದು ವರ್ಷದಿಂದ ಯಾರ ಕೈಗೂ ತಗಲಾಕಿಕೊಳ್ಳದ ಮಂಕಿ ಕ್ಯಾಪ್ ಗ್ಯಾಂಗ್ ಕೋಲಾರ ನಗರ ಠಾಣೆ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಂಡರು. ಇನ್ನುಳಿದ ಮಾಸ್ಟರ್ ಮೈಂಡ್, ಕಿಂಗ್‌ಪಿನ್ ಮತ್ತು ಬಲಗೈ ಬಂಟನನ್ನು ಆತನ ಪ್ರೇಯಸಿಯ ಮೂಲಕ ಇಬ್ಬರನ್ನು ಟ್ರ್ಯಾಪ್ ಮಾಡಿದ ಪೊಲೀಸರು ತಮ್ಮ ಖೆಡ್ಡಾಕ್ಕೆ ಕೆಡವಿಕೊಂಡು ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**


ಮಾಸ್ಟರ್ ಮಾಂಡ್ ರೋಹಿತ್ ಗಿರಿ

**ಕೋಲಾರ**

✍ ಕೋಲಾರ ಮಂಜು


ರಾಜ್ಯದ ಹಲವು ಕಡೆ ಸೇರಿದಂತೆ ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆ, ತುಮಕೂರು, ಚಿಕ್ಕಬಳ್ಳಾಪುರ ನಗರದಲ್ಲಿ ರಾತ್ರಿ ವೇಳೆ ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದು ಹಣವನ್ನು ದೋಚಿಕೊಂಡು ಹೋಗುತ್ತಿದ್ದ ಕಳ್ಳರ ಗ್ಯಾಂಗ್‌ವೊಂದು ಐದು ವರ್ಷಗಳಿಂದ ಯಾರ ಕೈಗೂ ಸಿಗದೆ ಇಡೀ ರಾಜ್ಯದಲ್ಲಿನ ಪೊಲೀಸರಿಗೆ ತಲೆ ನೋವಾಗಿ ಪರಿಣಿಸಿದರಲ್ಲದೆ ಇವರು ಯಾರು? ಎಲ್ಲಿನವರು? ಎಷ್ಟು ಜನರ ಗ್ಯಾಂಗ್ ಇದೆ ಎನ್ನುವುದರ ಬಗ್ಗೆ ಪತ್ತೆಹಚ್ಚುವುದೇ, ದುಸ್ಸಾಧ್ಯ ಎಂಬಂತೆ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಪೊಲೀಸರು ಕೈ ಚೆಲ್ಲಿದರು.


ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ

2024 ಡಿಸೆಂಬರ್ 17 ಮತ್ತು 2025 ಜನವರಿ 17 ರಾತ್ರಿ ಕೋಲಾರ ನಗರದ ಪ್ರಮುಖ ರಸ್ತೆಗಳಲ್ಲಿನ 10-20 ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದು ಒಳಹೋಗಿ ಯಾವ ವಸ್ತುಗಳನ್ನು ಕಳುವು ಮಾಡದೆ, ಕ್ಯಾಷ್ ಟೇಬಲ್‌ನಲ್ಲಿರುವ ಹಣವನ್ನು ಮಾತ್ರ ದೋಚಿಕೊಂಡು ಹೋಗಿದ್ದರು. ಈ ಕಳುವಿನ ಬಗ್ಗೆ ಅಂಗಡಿ ಮಾಲೀಕರು ನಗರ ಠಾಣೆ ಪೊಲೀಸರಿಗೆ ದೂರು ನೀಡಿದರು. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಹೆಚ್‌ಸಿ ಜಗದೀಶ್, ಡಿವೈಎಸ್ಪಿ ಎಂ.ಹೆಚ್. ನಾಗ್ತೆ, ಕೋಲಾರ ನಗರ ಪೊಲೀಸ್ ಠಾಣೆಯ ಪಿಐ ಎಂ. ಸದಾನಂದ, ಸಿಬ್ಬಂದಿ ವರ್ಗ, ಬೆರಲಚ್ಚು ತಜ್ಞರು ಮತ್ತು ಶ್ವಾನದಳದೊಂದಿಗೆ ಆಗಮಿಸಿ ಮುಂದೆ ಹಾಗೂ ಒಳಗೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿ ಕಳುವು ಮಾಡಲು ಬಂದಿರುವ ಎಲ್ಲರು ಮುಖಕ್ಕೆ ಮಂಕಿ ಕ್ಯಾಪ್‌ನ್ನು ಹಾಕಿಕೊಂಡಿರುವ ಬಗ್ಗೆ ಕಂಡು ಬಂದಿದ್ದು ಇವರು ಯಾರು ಎನ್ನುವುದನ್ನು ಕಂಡು ಹಿಡಿಯಲು ಇವರುಗಳ ಮುಖಚರ್ಯೆಯು ಕಾಣದೇ ಇರುವುದರಿಂದ ಕಳ್ಳರನ್ನು ಪತ್ತೆಹಚ್ಚುವುದಕ್ಕೆ ಕೋಲಾರ ನಗರ ಠಾಣೆ ಪೊಲೀಸರಿಗೆ ಇದೊಂದು ಸವಾಲಾಗಿ ಪರಿಣಮಿಸಿತ್ತು. ಕೋಲಾರ ನಗರದಲ್ಲಿ ಎರಡು ರಾತ್ರಿ


ಸಿಪಿಐ ಎಂ. ಸದಾನಂದ


ಪಿಎಸ್‌ಐ ಸೈಯದ್ ಖಾಸಿಂ

ಇಷ್ಟೊಂದು ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದು ಹಣವನ್ನು ಕಳವು ಮಾಡಿಕೊಂಡು ಯಾವುದೇ ಸಾಕ್ಷಿ, ಆಧಾರಗಳನ್ನು ಬಿಡದೆ ತಲೆಮರೆಸಿಕೊಂಡಿರುವ ಕಳ್ಳರ ಗ್ಯಾಂಗ್‌ನ್ನು ಪತ್ತೆಹಚ್ಚಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವುದಕ್ಕಾಗಿ ಎಸ್ಪಿ ಬಿ. ನಿಖಿಲ್ ಮತ್ತು ಡಿವೈಎಸ್ಪಿ ಎಂ.ಹೆಚ್. ನಾಗ್ತೆರವರ ಮಾರ್ಗದರ್ಶನದಲ್ಲಿ ಕೋಲಾರ ನಗರ ಪೊಲೀಸ್ ಠಾಣೆಯ ಪಿಐ ಎಂ. ಸದಾನಂದರವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಹೊನ್ನೇಗೌಡ, ಸೈಯದ್ ಖಾಸಿಂ, ಸಿಬ್ಬಂದಿ ವರ್ಗದವರಾದ ಎನ್.ನಾರಾಯಣಸ್ವಾಮಿ, ಮೋಹನ್, ಶ್ರೀನಾಥ್, ಮೊಹಬೂಬ್ ಪಾಷ, ಕಿಶೋರ್, ಶಾಮೂರ್ತಿ, ಹೆಚ್.ವಿ. ಬಾಲಾಜಿ, ಗಂಗಾಧರ್, ಕಾರ್ತಿಕ್, ತ್ಯಾಗರಾಜ್, ಹೇಮಂತ್‌ಕುಮಾರ್, ಮುರುಳಿ ಮುಂತಾದವರ ತಂಡವನ್ನು ರಚಿಸಲಾಯಿತು.


ಆರೋಪಿಗಳಾದ ದಾದಾಪೀರ್ (ರೋಹಿತ್ ಗಿರಿಯ ಬಲಗೈ ಬಂಟ), ಪ್ರವೀಣ್‌ಕುಮಾರ್, ರಿಯಾನ್, ವಿನೋದ್

ಕ್ರೈಂ ತಂಡವು ಮೊದಲಿಗೆ ರಾಜ್ಯದಲ್ಲಿ ನಡೆದಿರುವ ಅಂಗಡಿಗಳ ಸರಣಿ ಕಳವುಗಳ ಬಗ್ಗೆ ವಿವಿಧ ಪೊಲೀಸ್ ಠಾಣೆಗಳಿಂದ ಮಾಹಿತಿಗಳನ್ನು ಕಲೆ ಹಾಕಿದರು. ಬೆಂಗಳೂರಿನ ಮಲ್ಲೇಶ್ವರಂ, ಚಿಕ್ಕಬಳ್ಳಾಪುರ, ಚಿಂತಾಮಣಿ ನಗರದ ಕೆಲವು ಅಂಗಡಿಗಳಲ್ಲಿ ನಡೆದ ಕಳುವಿನ ಸಿಸಿಟಿವಿ ದೃಶ್ಯಾವಳಿಗಳನ್ನು ಗಮನಿಸಿದಾಗ ಮಧ್ಯರಾತ್ರಿ, ನಂತರ ಬೆಳಗಿನ ಜಾವದ ಸಮಯದಲ್ಲಿ ಗುರುತಿಸಿದ್ದ ಅಂಗಡಿಗಳಿಗೆ ಬರುವ ಗ್ಯಾಂಗ್ ಮುಖ ಕಾಣದಂತೆ ಕಣ್ಣುಗಳನ್ನು ಮಾತ್ರ ಬಿಟ್ಟು ಮಂಕಿ ಕ್ಯಾಪ್‌ನ್ನು ಹಾಕಿಕೊಂಡು ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಕಬ್ಬಿಣದ ಗಡಾರಿಯಿಂದ ಮೀಟಿ ರೋಲಿಂಗ್ ಶಟರ್‌ನ್ನು ಸ್ವಲ್ಪ ಮೇಲಕ್ಕೆ ಎತ್ತಿ ಅಂಗಡಿ ಒಳಕ್ಕೆ ಇಬ್ಬರನ್ನು ಕಳುಹಿಸಿ ಇನ್ನುಳಿದವರು ಹೊರಗೆ ಕಾಯುತ್ತಾ ಇದ್ದು, ಒಳಗಿನ ಸಿಸಿಟಿವಿ ದೃಶ್ಯಾವಳಿಯಲ್ಲಿ ಅಂಗಡಿ ಒಳಗೆ ಹೋದ ಖದೀಮರು ಕ್ಯಾಷ್ ಕೌಂಟರ್ ಬಳಿಗೆ ಹೋಗಿ ಕ್ಯಾಷ್ ಬಾಕ್ಸ್‌ನಿಂದ ಹಣವನ್ನು ಕಳುವು ಮಾಡಿಕೊಂಡು ಎಲ್ಲರೂ ದ್ವಿಚಕ್ರ ವಾಹನಗಳಲ್ಲಿ ಅಲ್ಲಿಂದ ಪರಾರಿಯಾಗುವುದನ್ನು ನೋಡಿದಾಗ ರಾಜ್ಯದ ನಾನಾ ಭಾಗಗಳಲ್ಲಿ ನಡೆದ ಅಂಗಡಿಗಳ ಕಳುವಿನ ಪ್ರಕರಣಕ್ಕೂ ಕೋಲಾರದಲ್ಲಿ ನಡೆದಿರುವ ಪ್ರಕರಣಕ್ಕೆ ಲಿಂಕ್ ಇದ್ದು, ಇದೊಂದು ಮಂಕಿ ಕ್ಯಾಪ್ ಕಳ್ಳರ ಗ್ಯಾಂಗ್‌ವೊಂದು ರಾಜ್ಯದಲ್ಲಿನ ಕೆಲವು ಜಿಲ್ಲೆಗಳಲ್ಲಿ ಅಂಗಡಿಗಳ ಸರಣಿ ಕಳುವು ಪ್ರಕರಣಗಳು, ಈ ಕಳ್ಳರ ಗ್ಯಾಂಗ್ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡ ತಂಡವು ಕುಖ್ಯಾತ ಮಂಕಿ ಕ್ಯಾಪ್ ಕಳ್ಳರ ಗ್ಯಾಂಗ್‌ನ ಹೆಜ್ಜೆ ಗುರುತುಗಳನ್ನು ಪತ್ತೆ ಮಾಡಿ ಅವರ ಬಂಧನಕ್ಕಾಗಿ ಬಲೆ ಬೀಸಿದರು.



ಅಂಗಡಿ ಬಳಿ ಮಹಜರ್ ನಡೆಸುತ್ತಿರುವುದು

ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ 2025 ಜನವರಿ 28ರಂದು ಮಂಗಳವಾರ ಮಧ್ಯರಾತ್ರಿ ಕೋಲಾರ ನಗರದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರ ರಸ್ತೆ ಪಕ್ಕದಲ್ಲಿರುವ ಕೋಗಿಲಹಳ್ಳಿ ದರ್ಗಾದ ಬಳಿ ಇರುವ ಪಂಪ್ ಹೌಸ್ ಸಮೀಪ ಹೈವೇ ಸರ್ವೀಸ್ ರಸ್ತೆಯಲ್ಲಿ ನಂಬರ್ ಪ್ಲೇಟ್‌ಗಳು ಇಲ್ಲದ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿಕೊಂಡು ಕೈಗಳಲ್ಲಿ ತಲ್ವಾರ್, ಚಾಕುಗಳು, ಪೆಪ್ಪರ್ ಸ್ಪ್ರೇ ಬಾಟಲಿಯನ್ನು ಇಟ್ಟುಕೊಂಡು ಹೈವೇಯಲ್ಲಿ ದರೋಡೆ ಮಾಡಲು ಹೊಂಚು ಹಾಕುತ್ತಿದ್ದ ಆರೋಪಿಗಳಲ್ಲಿ ಇಬ್ಬರು ಅಪ್ರಾಪ್ತರು ಸೇರಿದಂತೆ ಬೆಂಗಳೂರಿನ ಸುಧಾಮನಗರ, ನ್ಯೂ ತಿಪ್ಪಸಂದ್ರದಲ್ಲಿ ವಾಸ ಇರುವ ರಾಜರವರ

☞ 14

# ಪೊಲೀಸರ ಸ್ಥೈರ್ಯ ಕುಗ್ಗಿಸಿದ ಉದಯಗಿರಿ ಘಟನೆ!





**ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಎಪಿ ಸೋತು ಸುಣ್ಣವಾದ ಬೆನ್ನಲ್ಲೇ ಮೈಸೂರಿನ ಡ್ರೈಫ್ರೂಟ್ಸ್ ವ್ಯಾಪಾರಿಯೊಬ್ಬನ ವಾಟ್ಸಾಫ್ ಸ್ಟೇಟಸ್‌ನಲ್ಲಿ ರಾಹುಲ್ ಗಾಂಧಿ, ಕೇಜ್ರಿವಾಲ್ ಸೇರಿದಂತೆ ಅಸಭ್ಯ ತ್ರಿ ಈಡಿಯೇಟ್ ಚಿತ್ರವೊಂದು ಕಾಣಿಸಿತು. ಅದರಲ್ಲಿ ಉರ್ದುವಿನಲ್ಲಿ ಬರೆಯಲಾಗಿದ್ದ ಅವಹೇಳನಕಾರಿ ಬರಹವಿತ್ತು. ಇದು ಕಾಡ್ಗಿಚ್ಚಿನಂತೆ ಹರಡಿ ಸಾವಿರಾರು ವಾಟ್ಸಾಪ್‌ಗಳಿಗೆ ಶೇರ್ ಆಯಿತು. ಮುಸ್ಲಿಂ ಸಮುದಾಯದವರು ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮುಂದೆ ಜಮಾಯಿಸಿದರು. ಮುಂದೆ ಆಗಿದ್ದೇನು? ಇಲ್ಲಿದೆ ಕಂಪ್ಲೀಟ್ ಸ್ಟೋರಿ**

ಉದಯಗಿರಿಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಕಾನೂನು ಕ್ರಮವನ್ನು ಕೈಗೊಳ್ಳಲು ನಮ್ಮ ಸರ್ಕಾರ ಪೊಲೀಸರಿಗೆ ಸಂಪೂರ್ಣ ಹೊಣೆ ನೀಡಬೇಕಿತ್ತು ಮತ್ತು ಅವರಿಗೆ ಸ್ಥೈರ್ಯ ತುಂಬುವ ಕೆಲಸ ಮಾಡಬೇಕಿತ್ತು ಆದರೆ ಸರ್ಕಾರದ ಭಾಗವಾಗಿದ್ದ ಸಚಿವರು ಮತ್ತು ಪುಢಾರಿಗಳು ನೀಡಿದ ಹೇಳಿಕೆಗಳು ನಿಜಕ್ಕೂ ನಾಚಿಗೇಡಿನದ್ದಾಗಿದೆ. ಒಬ್ಬ ವ್ಯಕ್ತಿ ಯಾವುದೇ ಧರ್ಮವನ್ನು ನಿಂದಿಸುವ ಕೆಲಸ ಮಾಡಿದರೆ ಅದಕ್ಕೆ ಸಂವಿಧಾನದಂತೆ ಶಿಕ್ಷೆ ನೀಡಲಾಗುತ್ತದೆ. ಒಂದು ಹಂತದಲ್ಲಿ ಮೈಸೂರಿನ ಪೊಲೀಸರು ಅದನ್ನು ಮಾಡಿದ್ದರು.

ಸಂವಿಧಾನವನ್ನು ಮೀರಿ ತಪ್ಪು ಮಾಡಿದ ವ್ಯಕ್ತಿಯನ್ನು ನಮಗೊಪ್ಪಿಸಿ ನಾವು ಶಿಕ್ಷೆ ನೀಡುತ್ತೇವೆ ಎನ್ನುವುದು ಈ ದೇಶದ ಕಾನೂನಲ್ಲ ಅದಕ್ಕೆ ಅವಕಾಶವಿಲ್ಲ. ಉದಯಗಿರಿ ಪೊಲೀಸ್ ಠಾಣೆ ಮುಂದೆ ಜಮಾಯಿಸಿದ ಮುಸ್ಲಿಂ ಸಮುದಾಯದವರು ಈ ವಿಚಾರದಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಅವರ ಮನವೊಲಿಸಿ ಸಮಾಧಾನ ಮಾಡುವ ಕೆಲಸದಲ್ಲಿ ಶಕ್ತಿ ಮೀರಿ ಪೊಲೀಸರು ಪ್ರಯತ್ನಿಸಿದರು. ಅದಾಗಲೇ ಮುಫ್ತಿ ಮುಸ್ತಾಕ್ ಮಕ್ಬೂಲಿ ಎಂಬ ಮೌಲ್ವಿ ಪ್ರಚೋದನಾಕಾರಿ ಭಾಷಣ ಮಾಡಿ ಬಿಟ್ಟನು. ಸುತ್ತವರಿದ ಕೆಲವು ಕಿಡಿಗೇಡಿಗಳು ಕಲ್ಲು ಎತ್ತಿಕೊಂಡು ಬೀಸಿಯೇ ಬಿಟ್ಟರು. ಮುಂದೆ ಆಗಿದ್ದು ಮಾತ್ರ ಭಯಾನಕ. ಪೊಲೀಸ್




ಸಿಬ್ಬಂದಿ ಸೇರಿದಂತೆ ಅಧಿಕಾರಿಗಳ ಮೇಲೆಯೂ ಕಲ್ಲು ಬಿತ್ತು. ಇಷ್ಟಕ್ಕೂ ಅವತ್ತು ಆಗಿದ್ದೇನು? ಎಂಬುದು ಒಂದು ಕಡೆಯಾದರೆ ನಂತರ ನಮ್ಮ ಸರ್ಕಾರದ ಸಚಿವರು ಮತ್ತು ಕಾಂಗ್ರೆಸ್ ನಾಯಕರು ನೀಡಿದ ಹೇಳಿಕೆಗಳು ಮಾತ್ರ ಪೊಲೀಸರ ನೈತಿಕ ಸ್ಥೈರ್ಯವನ್ನು ತಗ್ಗಿಸುವಂತಹದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ.


ಕಮೀಷನರ್ ಸೀಮಾ ಲಾಟ್ಕರ್

ಅವತ್ತು ಫೆ.10 ಸೋಮವಾರ ಕಲ್ಯಾಣಗಿರಿ ನಿವಾಸಿ ಸತೀಶ್ ಎಂಬಾತನ ವಾಟ್ಸಪ್ ಸ್ಟೇಟಸ್‌ನಲ್ಲಿ ದೆಹಲಿ ಚುನಾವಣೆಗೆ ಲಿಂಕ್ ನೀಡುವಂತೆ ಕೋಮುಸೌಹಾರ್ಧತೆ ಕದಡುವ ಪೋಸ್ಟ್‌ವೊಂದು ಕಾಣಿಸಿತು. ಅಷ್ಟೇ ಅಲ್ಲದೆ ಅದು ಕ್ಷಣಮಾತ್ರದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಡಿತು. ಅದಾಗಲೇ ಈ ವಿಚಾರಕ್ಕೆ ರೊಚ್ಚಿಗೆದ್ದ ಮುಸ್ಲಿಂ ಸಮುದಾಯದವರು ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿದ್ದಾರೆ. ಘಟನೆಯಲ್ಲಿ ಇಬ್ಬರು ಇನ್ಸ್‌ಪೆಕ್ಟರ್ ಸೇರಿ 14 ಪೊಲೀಸರಿಗೆ ಗಾಯವಾಗಿದೆ.



## ಮೈಸೂರು

✍ಬಿ.ಎಂ. ಲವಕುಮಾರ್

ಇದರ ಬಗ್ಗೆ ಸವಿಸ್ತಾರವಾಗಿ ಹೇಳುವುದಾದರೆ ಅಂದು ಫೆ.10 ಸೋಮವಾರ ರಾತ್ರಿ 9.30 ಸುಮಾರಿನಲ್ಲಿ ಉದ್ರಿಕ್ತ ಗುಂಪು ಏಕಾಏಕಿ ಉದಯಗಿರಿ ಪೊಲೀಸ್ ಠಾಣೆಯತ್ತ ಜಮಾಯಿಸಿದ್ದು, ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಈ ವೇಳೆ ಎಸಿಪಿ ಶಾಂತಮಲ್ಲಪ್ಪ, ನಜರಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಸೇರಿದಂತೆ 14ಮಂದಿ ಪೊಲೀಸ್ ಸಿಬ್ಬಂದಿಗೆ ಕಟು ಬಿದ್ದು ಗಾಯಗೊಂಡಿದ್ದು, ಎಲ್ಲರಿಗೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಮಾತ್ರವಲ್ಲ, 10ಕ್ಕೂ ಹೆಚ್ಚು ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಿದ್ದು, ವಾಹನಗಳು ಜಖಂಗೊಂಡವು. ಘಟನೆ ಕುರಿತು ಉದಯಗಿರಿ ಪೊಲೀಸ್ ಠಾಣೆಯ ಸುತ್ತಮುತ್ತ ಇರುವ ಸಿಸಿಟಿವಿ ದೃಶ್ಯಾವಳಿಗಳನ್ನು ವಶಕ್ಕೆ ಪಡೆದ ಪೊಲೀಸರು, ಸಿಸಿಟಿವಿ ದೃಶ್ಯಾವಳಿ ಆಧರಿಸಿ ಕಲ್ಲುತೂರಾಟ ನಡೆಸಿದ ಯುವಕರನ್ನು ಪತ್ತೆಹಚ್ಚುವ ಕೆಲಸ ಮಾಡುತ್ತಿದ್ದು ಆರೋಪಿಗಳ ಮೇಲೆ ಕ್ರಮ ಕೈಗೊಳ್ಳಲು ಮುಂದಾದರು.

ಘಟನೆ ಹಿನ್ನೆಲೆಯಲ್ಲಿ ಉದಯಗಿರಿ ಪೊಲೀಸ್ ಠಾಣೆ ಸುತ್ತಮುತ್ತ ಪೊಲೀಸ್ ಸರ್ಪಗಾವಲು ಹಾಕಲಾಯಿತು. ಆರಕ್ಕೂ ಹೆಚ್ಚು ಕೆಎಸ್‌ಆರ್‌ಪಿ, ಸಿಎಆರ್ ತುಕಡಿಗಳನ್ನು ನಿಯೋಜನೆ ಮಾಡಲಾಯಿತು. ಎಂಟಕ್ಕೂ ಹೆಚ್ಚು ಪೊಲೀಸ್ ಇನ್ಸ್‌ಪೆಕ್ಟರ್‌ರಿಂದ ಭದ್ರತಾ ವ್ಯವಸ್ಥೆ ಮಾಡಲಾಯಿತು. ಆದರೆ ಅದಕ್ಕೂ ಮುನ್ನವೇ ಸ್ಟೇಟಸ್ ಹಾಕಿದ್ದ ಸತೀಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಆದರೆ ಇದೀಗ ಆತನಿಗೆ ಜಾಮೀನು ಸಿಕ್ಕಿ ಬಿಡುಗಡೆಯೂ ಆಗಿದೆ.



ಇನ್ನು ಪೊಲೀಸ್ ವಾಹನ ಮತ್ತು ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿದ್ದವರ ಬಂಧನಕ್ಕೆ ಪೊಲೀಸರು ಮುಂದಾಗಿದ್ದು, ಅದಕ್ಕಾಗಿ ನಾಲ್ಕು ವಿಶೇಷ ತಂಡ ರಚನೆ ಮಾಡಲಾಗಿದೆ. ಸಿಸಿ ಕ್ಯಾಮೆರಾ ಮತ್ತು ಕೆಲ ವೀಡಿಯೋ ಫುಟೇಜ್ ಆಧರಿಸಿ ದಾಂಧಲೆ ನಡೆಸಿದ್ದವರ ಪೈಕಿ ಕೇವಲ 16 ಮಂದಿಯನ್ನು ಮಾತ್ರ ಬಂಧಿಸಲಾಗಿದೆ. ಆದರೆ ಕಿಡಿ ಹೊತ್ತಿಸಿದ ಮುಫ್ತಿ ಮುಸಾಕ್ ಮಕ್ಬೂಲಿ ಎಂಬಾತ ನಾಪತ್ತೆಯಾಗಿದ್ದು ಆತನಿಗಾಗಿ ಹುಡುಕಾಟ ನಡೆಸಲಾಗಿದೆ.



ಈ ಘಟನೆಯ ಬಗ್ಗೆ ನೋಡಿದ್ದೇ ಆದರೆ ಇಲ್ಲಿ ಯಾರೂ ಏನೇ ಮಾಡಿದರೂ ಅದು ತಪ್ಪೇ... ಆದರೆ ಸರ್ಕಾರದ ಭಾಗವಾಗಿದ್ದವರು ಮಾತ್ರ ಇಲ್ಲಿ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದರು. ಒಂದು ಸಮುದಾಯ

☞10

## ಪೋಸ್ಟ್ ಹಾಕಿದ್ದ ಆರೋಪಿ ರಿಲೀಸ್

ಉದಯಗಿರಿ ಪೊಲೀಸ್ ಠಾಣೆ ಮೇಲಿನ ದಾಳಿ ಪ್ರಕರಣ ಸಂಬಂಧ ವಿವಾದಿತ ಪೋ ಮಾಡಿದ್ದ ಆರೋಪಿ ಸತೀಶ್‌ಗೆ ಎರಡನೇ ಅಪರ ಸಿವಿಲ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದ್ದು ಅದರಂತೆ ಫೆ.18ರಂದು ಜೈಲಿನಿಂದ ಬಿಡುಗಡೆಗೊಂಡಿದ್ದಾನೆ. ಈ ಹಿಂದೆಯೇ ವಾದ ವಿವಾದ ಆಲಿಸಿ ಫೆ.17ರ ಸೋಮವಾರಕ್ಕೆ ವಿಚಾರಣೆ ಮುಂದೂಡಿದ್ದ ನ್ಯಾಯಾಧೀಶೆ ಅಂದು ಜಾಮೀನು ಮಂಜೂರು ಮಾಡಿದ್ದಾರೆ. ಒಬ್ಬರ ಶೂರಿಟಿ ತೆಗೆದುಕೊಂಡು ಬಿಡುಗಡೆ ಮಾಡಲು ಸೂಚಿಸಿದ್ದು, ಈ ರೀತಿಯ ಅಪರಾಧಗಳಲ್ಲಿ ಮತ್ತೆ ಭಾಗಿಯಾಗಬಾರದು, ಪೊಲೀಸ್ ಠಾಣೆಗೆ ಹೋಗಿ ತನಿಖೆಗೆ ಸಹಕರಿಸಬೇಕು ಎಂದು ಷರತ್ತು ವಿಧಿಸಿದೆ. ಆರೋಪಿ ಸತೀಶ್ ಪರ ವಕೀಲ ಹ.ಮಾ. ಭಾಸ್ಕರ್, ಸರ್ಕಾರದ ಪರ ಸರ್ಕಾರಿ ಅಭಿಯೋಜಕಿ ಸವಿತಾ ವಾದ ಮಂಡನೆ ಮಾಡಿದ್ದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ವಕೀಲ ಹ.ಮಾ. ಭಾಸ್ಕರ್, ಇಂದು ಸತೀಶ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿದೆ. ಬಿಎನ್‌ಎಸ್ ಕಾಯ್ದೆಯಡಿ 299 ಅಕ್ರಾಕ್ಟ್ ಆಗಬೇಕು. ಅಂದರೆ ಅವಹೇಳನಕಾರಿಯಾಗಿ ಚಿತ್ರ ಪ್ರಕಟವಾಗಬೇಕು. ಈ ಪ್ರಕರಣದಲ್ಲಿ ಪೊಲೀಸರು ಆರೋಪಿಯ ಮೊಬೈಲ್ ಸೀಜ್ ಮಾಡಿರಲಿಲ್ಲ, ಯಾವ ಧರ್ಮಕ್ಕೆ ಅವಮಾನವಾಗಿದೆ ಎಂದು ದೂರು ಕೊಡಬೇಕಿತ್ತು. ಯಾರು ಸಹ ನಮ್ಮ ಧರ್ಮಕ್ಕೆ ಧಕ್ಕೆಯಾಗಿದೆ ಎಂದು ದೂರು ಕೊಟ್ಟಿಲ್ಲ, ಪೊಲೀಸರು ಸುಮೋಟೊ ಕೇಸ್ ದಾಖಲಿಸಿಕೊಂಡಿದ್ದರು. ಇದು ಸರಿಯಾದ ಕ್ರಮವಲ್ಲ, ಅಲ್ಲದೆ ಎಫ್‌ಐಆರ್ ನಲ್ಲಿ ಸಹ ಸಾಕಷ್ಟು ದೋಷಗಳಿವೆ. ಇದನ್ನೆಲ್ಲಾ ನ್ಯಾಯಾಲಯದ ಗಮನಕ್ಕೆ ತಂದ ಕಾರಣ ಜಾಮೀನು ಮಂಜೂರಾಗಿದೆ ಎಂದಿದ್ದಾರೆ. ಪೋಸ್ಟರ್ ಯಾರು ತಯಾರು ಮಾಡಿದ್ದು ಎಂಬುದರ ಬಗ್ಗೆಯೂ ತನಿಖೆಯಾಗಬೇಕು. ಸೂಕ್ತ ಸಾಕ್ಷಿಗಳನ್ನು ಪೊಲೀಸರು ಕೊಟ್ಟಿಲ್ಲ, ಹೀಗಾಗಿ ಜಾಮೀನು ಮಂಜೂರಾಗಿದ್ದಾಗಿ ತಿಳಿಸಿದ್ದಾರೆ. ಸದ್ಯ ಸುರೇಶ್ ಫೆ.18ರಂದು ಮಂಗಳವಾರ ಜೈಲಿನಿಂದ ಬಿಡುಗಡೆ ಗೊಂಡಿದ್ದಾನೆ.

# ಗಂಡನ ಪರಸ್ತ್ರೀ ಸಹವಾಸ; ಮಗು ಕೊಂದು ಸಾವಿಗೆ ಶರಣಾದ ಗ್ರಾಮ ಪಂಚಾಯತಿ ಅಧ್ಯಕ್ಷೆ!



ಪಾವಗಡ ತಾಲೂಕಿನ ಗ್ರಾಮ ಪಂಚಾಯಿತಿ ಅಧ್ಯಕ್ಷೆಯೊಬ್ಬರು ತಮ್ಮ ಚಿಕ್ಕ ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತಿಯ ಪರಸ್ತ್ರೀ ಸಂಪರ್ಕವೇ ಸಾವಿಗೆ ಕಾರಣ ಎಂದು ಡೆತ್ ನೋಟ್ನಲ್ಲಿ ಉಲ್ಲೇಖಿಸಲಾಗಿದೆ. ಬಾಗಲಗುಂಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪಾವಗಡ ತಾಲೂಕಿನಲ್ಲಿ ತನ್ನ ಗಂಡ ಪರಸ್ತ್ರೀ ಸಂಘ ಮಾಡಿಕೊಂಡು ಆಕೆಯೊಂದಿಗೆ ಅನೈತಿಕ ಸಂಬಂಧದಲ್ಲಿದ್ದಾನೆ ಎಂದು ಬೇಸತ್ತ ಗ್ರಾಮ ಪಂಚಾಯಿತಿ ಅಧ್ಯಕ್ಷೆ ತನ್ನ ಚಿಕ್ಕ ಮಗುವನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ನಡೆದಿದೆ.

ಬೆಂಗಳೂರಿನ ಬಾಗಲಗುಂಟೆಯಲ್ಲಿ ತಾಯಿಯೊಬ್ಬಳು ತನ್ನ ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ರಾಮಯ್ಯ ಲೇಔಟ್‌ನಲ್ಲಿ ಘಟನೆ ನಡೆದಿದೆ. ತನ್ನ ಚಿಕ್ಕ ಮಗಳನ್ನು ಕೊಲೆ ಮಾಡಿ ತಾನೂ ನೇಣು ಬಿಗಿದುಕೊಂಡಿದ್ದಾಳೆ. ಮೃತ ಮಗು ರೋಶಿಣಿ (5) ಹಾಗೂ ತಾಯಿ ಶ್ರುತಿ (33) ಮೃತ ದುರ್ದೈವಿಗಳು. ನಿನ್ನೆ ಸಂಜೆ 6ಗಂಟೆ ಸುಮಾರಿಗೆ ಮನೆಯಲ್ಲಿ ಮಗುವನ್ನ ಕೊಂದು ಸಾವಿಗೆ ಶರಣಾಗಿದ್ದಾರೆ. ಇನ್ನು ಈ ಮಹಿಳೆ ಶ್ರುತಿ ಪಾವಗಡ ತಾಲೂಕಿನ ಗ್ರಾಮವೊಂದರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆಗಿದ್ದಳು.



ಚಾರ್ಟೆಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಗೋಪಾಲಕೃಷ್ಣನನ್ನು ಕಳೆದ 10 ವರ್ಷದ ಹಿಂದೆ ಶ್ರುತಿ ಮದುವೆ ಮಾಡಿಕೊಂಡಿದ್ದರು. ಈ ದಂಪತಿಗೆ ಇಬ್ಬರು (ಒಂದು ಗಂಡು, ಒಂದು ಹೆಣ್ಣು) ಮಕ್ಕಳಿದ್ದಾರೆ. ದೊಡ್ಡ ಮಗ ಹೊರಗಡೆ ಆಟವಾಡುತ್ತಿದ್ದರೆ, ಗಂಡ ಮನೆಯಿಂದ ಕೆಲಸದ ನಿಮಿತ್ತ ಹೊರಗಡೆ ಹೋಗಿದ್ದನು. ಈ ವೇಳೆ ಮನೆಯಲ್ಲಿದ್ದ ಚಿಕ್ಕ ಮಗುವಿನ ಕತ್ತು ಹಿಸುಕು ಕೊಲೆ ಮಾಡಿ ತಾನೂ ನೇಣಿಗೆ ಶರಣಾಗಿದ್ದಾಳೆ. ಇನ್ನು ಆಟವಾಡಲು ಹೋಗಿದ್ದ ಮಗ ವಾಪಸ್ ಮನೆಗೆ ಬಂದಾಗ ತಾಯಿ ನೇಣಿನ ಕುಣಿಕೆಯಲ್ಲಿ ನೇತಾಡುವುದನ್ನು ಕಂಡು ಅಳುತ್ತಾ ನೆರೆಹೊರೆಯರನ್ನು ಕರೆದಿದ್ದಾನೆ. ಆಗ ಘಟನೆ ಬೆಳಕಿಗೆ ಬಂದಿದೆ.

ಇನ್ನು ಮಹಿಳೆಯ ಸಾವಿಗೆ ಕಾರಣ ಆಕೆಯ ಪತಿ ಗೋಪಾಲಕೃಷ್ಣ ಬೇರೊಬ್ಬ ಮಹಿಳೆ ಜೊತೆ ಸಂಪರ್ಕ ಹೊಂದಿದ್ದನಂತೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಬಾಗಲಗುಂಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಮೃತದೇಹಗಳನ್ನ ಮರಣೋತ್ತರ ಪರೀಕ್ಷೆಗಾಗಿ ರವಾನೆ ಮಾಡಿದ್ದಾರೆ. ಸದ್ಯ ಪತಿ ಗೋಪಾಲಕೃಷ್ಣನನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಈ ಘಟನೆ ಕುರಿತು ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೃತ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರುತಿ ಬರೆದಿಟ್ಟ ಡೆತ್ ನೋಟ್ ಪತ್ತೆಯಾಗಿದೆ. ಅದರಲ್ಲಿ ತನ್ನ ಗಂಡ ವಿವಾಹೇತರ ಸಂಬಂಧ ಹೊಂದಿದ್ದರ ಬಗ್ಗೆ ತಾನು ತುಂಬಾ ನೋವು ಅನುಭವಿಸಿದ್ದೇನೆ. ನಾನು ಇದ್ದರೂ ಮತ್ತೊಬಾಕೆ ಜೊತೆ ಸಂಬಂಧ ಇಟ್ಟುಕೊಂಡಿರುವುದೇ ನನ್ನ ಸಾವಿಗೆ ಕಾರಣ ಎಂದು ಉಲ್ಲೇಖ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಗಳು ರೋಶಿಣಿ ಮತ್ತು ತಾಯಿ ಶ್ರುತಿ ಮರಣೋತ್ತರ ಪರೀಕ್ಷೆ ಮಾಡಲಾಗುತ್ತಿದೆ. ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಕೇಸ್ ದಾಖಲು ಮಾಡಿಕೊಂಡಿದ್ದಾರೆ. ಇದೀಗ ಮೃತ ದೇಹಗಳನ್ನು ಕುಟುಂಬಸ್ಥರು ತುಮಕೂರಿನ ಶಿರಾಗೆ ತೆಗೆದುಕೊಂಡು ಹೋದರು. ☯

# 14 ವರ್ಷಗಳ ಹಿಂದೆ ಕೊಲೆ ಮಾಡಿ ತಪ್ಪಿಸಿಕೊಂಡಿದ್ದ ಹಂತಕ ಅರೆಸ್ಟ್!



ಆರೋಪಿ ಜಾನಿ

ಅದು ಮೀಸೆ ಚಿಗುರುವ ವಯಸ್ಸಿನ ದ್ವೇಷ.. ಕ್ಷುಲ್ಲಕ ವಿಚಾರದ ಜಗಳ ಹೊಡೆದಾಟದಿಂದ ಶುರುವಾಗಿ ಕೊಲೆಯಲ್ಲಿ ಅಂತ್ಯವಾಗಿತ್ತು. ಹಾಗಂತ ಇಲ್ಲಿ ಕೊಲೆಯಾದವನು ಮಸಣ ಸೇರಿದರೇ ಕೊಲೆಗಡುಕ ಮಾತ್ರ ಪೊಲೀಸರಿಗೆ ಸಿಕ್ಕಿರಲಿಲ್ಲ. ಹುಚ್ಚು ವಯಸ್ಸಿನ ಹುಚ್ಚಾಟದಲ್ಲಿ ಮಾಡಿದ ಕೃತ್ಯಕ್ಕೆ ಯಾರ ಕೈಗೂ ಸಿಗದೆ 14 ವರ್ಷ ನಾನಾ ರೀತಿ ತಲೆಮರೆಸಿಕೊಂಡಿದ್ದ. ಆದರೆ ಖಾಕಿ ಮಾತ್ರ ಇವನ ಬೆನ್ನು ಬಿಡದೆ ಹುಡುಕಿದ್ದು, ಕೊನೆಗೆ ಆತನ ಬಂಧಿಸಿದ್ದಾರೆ.



ಹತ್ಯೆಯಾಗಿದ್ದ ಚೇತನ್

ಅದು ಇವತ್ತಿನ ಮಾತಲ್ಲ ಬಿಡಿ... 2011ರ ಆಗಸ್ಟ್ 22ರ ಸಮಯ. ಅಂದರೆ 14 ವರ್ಷಗಳ ಹಿಂದಿನ ಕಥೆ. ಆರ್.ಟಿ. ನಗರದ ಕೆಂಪೇಗೌಡ ಬಡವಾಣೆಯ ನಿವಾಸಿ ಕದಿರೇಶ್ ಎಂಬಾತನ ಮಗ ಚೇತನ್ ಬೀದಿ ಹೆಣವಾಗಿದ್ದ. ಅವತ್ತಿನ ರಾತ್ರಿ ಮಾರಕಾಸ್ತ್ರಗಳ ಸಮೇತ ಬಂದ ಯುವಕರ ಗ್ಯಾಂಗ್ ಒಂದು ಮಾರಕಾಸ್ತ್ರಗಳಿಂದ ದಾಳಿ ಮಾಡಿ ಚೇತನ್ ಎಂಬಾತನ ಹತ್ಯೆ ಮಾಡಿತ್ತು. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ರಾಜು ಎಂಬಾತನ ಬಂಧಿಸಿತ್ತು. ಆದರೆ ಕೊಲೆಗೆ ಕಾರಣವಾದ ಹಾಗೂ ಹತ್ಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತೊಬ್ಬ ಆರೋಪಿ ಮಾತ್ರ ತಲೆಮರೆಸಿಕೊಂಡಿದ್ದ. ನಾನಾ ಕಡೆ ಹುಡುಕಿದರೂ ಪೊಲೀಸರ ಕೈಗೆ ಸಿಗದ ಆತ ಎಸ್ಕೇಪ್ ಆಗಿದ್ದ.

ಒಂದಲ್ಲಾ... ಎರಡಲ್ಲಾ... ಬರೊಬ್ಬರಿ 14 ವರ್ಷ ತಲೆಮರೆಸಿಕೊಂಡಿದ್ದ ಆ ಆಸಾಮಿ ಕೊನೆಗೂ ಪೊಲೀಸರಿಗೆ ಸಿಕ್ಕಿ ಬಿದಿದ್ದಾನೆ. ಇವನೇ ನೋಡಿ ಆತ... ಹೆಸರು ಜಾನ್. ತನ್ನ 19ನೇ ವಯಸ್ಸಿಗೆ ಮಚ್ಚಿಡಿದು ಹಲ್ಲೆ ಮಾಡಿದ ಈತ ಯಾರ ಕೈಗೂ ಸಿಗದಂತೆ ಓಡಾಡಿಕೊಂಡಿದ್ದು ಎಲ್ಲವೂ ಮುಗಿದೊಯ್ತು ಅಂದುಕೊಳ್ಳುವಷ್ಟರಲ್ಲೇ, ಕೊನೆಗೂ ಪೊಲೀಸರಿಗೆ ಸಿಕ್ಕ ಅದೊಂದು ಕ್ಲ್ಯೂ ಮೇಲೆ ಲಾಕ್ ಆದವನು.

ಮೂಲತಃ ಆಂಧ್ರದವನಾದ ಈ ಜಾನ್, ಈ ಹಿಂದೆ ಬಂಧಿಸಲ್ಪಟ್ಟಿದ್ದ, ರಾಜು ಎಲ್ಲರೂ ಜೊತೆಗಾರರಂತೆ... ಆ ಸಂದರ್ಭದಲ್ಲಿ ಇವರಿಗಿನ್ನು ಮಿಸೆ ಚಿಗುರುವ ವಯಸ್ಸು. ದೊಡ್ಡವರು ಹೇಳಿಕೊಟ್ಟ ದಾರಿಯಲ್ಲಿ ಬೆಳೆಯ ಬದಲು ಗಲಾಟೆ, ಹೊಡೆದಾಟ ಅಂತ ಆಗಲೇ ಅಡ್ಡದಾರಿ ಹಿಡಿದಿದ್ದರು.

**14 ವರ್ಷಗಳ ಹಿಂದೆ ಆರ್.ಟಿ. ನಗರದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಜಾನ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಕ್ಷುಲ್ಲಕ ಕಾರಣಕ್ಕೆ ನಡೆದ ಜಗಳ ಕೊಲೆಯಲ್ಲಿ ಅಂತ್ಯಗೊಂಡಿದ್ದು, ಆರೋಪಿ ತಲೆಮರೆಸಿಕೊಂಡಿದ್ದ.**

ಈ ನಡುವೆ ಇದೇ ರೀತಿ ಅಪರಾಧ ಹಿನ್ನಲೆ ಇದ್ದ ಚೇತನ್ ಜೊತೆ ಜಗಳ ಮಾಡಿಕೊಂಡಿದ್ದರು. ಕೊನೆಗೆ ಅದೇ ಕಾರಣಕ್ಕೆ 2011ರ ಆಗಸ್ಟ್ 22ರ ರಾತ್ರಿ ಆರ್.ಟಿ. ನಗರದ ಕೆಂಪೇಗೌಡ ಬಡವಾಣೆಯಲ್ಲಿ ಹತ್ಯೆ ಮಾಡಿ ಎಸ್ಕೇಪ್ ಆಗಿದ್ದರು. ಈ ನಡುವೆ ರಾಜ ಲಾಕ್ ಆಗಿ ಜೈಲು ಸೇರಿದ್ದ. ಬಿಡುಗಡೆಯಾದ ಬಳಿಕವೂ ಅದೇ ದಾರಿ ಹಿಡಿದು ಪೊಲೀಸರಿಗೆ ಸಿಕ್ಕಿ ಬಿಳುತಿದ್ದ. ಆದರೆ ಜಾನ್ ಮಾತ್ರ ಯಾರ ಕೈಗೂ ಸಿಕ್ಕಿರಲಿಲ್ಲ. ಆದರೆ ಆರ್.ಟಿ.ನಗರ ಪೊಲೀಸರು ಮಾತ್ರ ಆತನ ಹುಡುಕಾಟ ನಿಲ್ಲಿಸಿರಲಿಲ್ಲ, ಇದೇ ರೀತಿ ಹುಡುಕಾಟದ ನಡುವೆ ಸಿಕ್ಕ ಅದೊಂದು ಕ್ಲ್ಯೂ ಜಾನಿ ಹೆಜ್ಜೆ ಗುರುತು ಬಿಚ್ಚಿಟ್ಟಿತ್ತು.

ಕೃತ್ಯದ ಬಳಿಕ ತನ್ನೂರಾದ ಆಂಧ್ರಾಗೆ ತೆರಳಿ ತಲೆಮರೆಸಿಕೊಂಡ ಈತ ನಂತರ ಸೈಲೆಂಟ್ ಆಗಿ ವಾಪಾಸ್ ಆಗಿದ್ದ. ವೈಯಾಲಿಕಾವಲ್, ಮಲ್ಲೇಶ್ವರಂ ಸುತ್ತ ಇರುವ ಹೋಟೆಲ್‌ಗಳಲ್ಲಿ ಕೆಲಸ ಮಾಡುತಿದ್ದ. ಜೊತೆಗೆ ತಾನು ಮಾಡಿಕೊಂಡಿದ್ದ ಮನೆಗೆ ಅಡುಗೆ ಮಾಡಲು ಸಿಲಿಂಡರ್ ಬೇಕು ಅಂತ ತಂದೆಯ ಆಧಾರ್ ನಂಬರ್‌ನಲ್ಲಿ ಸಿಲಿಂಡರ್ ಪಡೆದಿದ್ದ. ಅಲ್ಲೇ ನೋಡಿ ತಗಲಾಕಿಕೊಂಡಿದ್ದು. ನಿರಂತರ ಹುಡುಕಾಟದ ನಡುವೆ ಪೊಷಕರು ಆತನ ಬಗ್ಗೆ ನೀಡದ ಮಾಹಿತಿಯೊಂದು ಪೊಲೀಸರಿಗೆ ಸಿಕ್ಕಿತ್ತು.

ಆ ಬಳಿಕ ಮಲ್ಲೇಶ್ವರಂನ ಹೋಟೆಲ್ ಒಂದರಲ್ಲಿ ಕೆಲಸ ಮಾಡುತಿದ್ದ ಜಾನಿಯನ್ನು ಆರ್.ಟಿ. ನಗರ ಪೊಲೀಸರು ಬಂಧಿಸಿ ಕರೆತಂದಿದ್ದಾರೆ. ಕೊಲೆ ಮಾಡಿ ಎಸ್ಕೇಪ್ ಆದೆ ಅಂತ 14 ವರ್ಷ ತಲೆಮರೆಸಿಕೊಂಡಿದ್ದ ಐನಾತಿ ಹಂತಕನಿಗೆ ಖಾಕಿ ಕೋಳ ತೊಡಿಸಿದೆ. ಎಲ್ಲವೂ ಮುಗಿದೊಯ್ತು ಅಂತ ನಿಟ್ಟುಸಿರುಬಿಟ್ಟಿದ್ದ ಜಾನಿ ಈಗ ಜೈಲು ಸೇರಿದ್ದಾನೆ. ☯

# ಜಮೀನು ಸಿಗದ ದ್ವೇಷ!

ದಾಯಾದಿಗಳ ಕಲಹಕ್ಕೆ ಬಡ ರೈತನ ಜಮೀನು ಜಗಳದ ನಡುವೆ ಲೀಸ್ ಪಡೆದು ಉಳುಮೆ ಮಾಡುತ್ತಿದ್ದ ಬಡ ರೈತ ಬೆಳೆ ಹಾನಿಯಿಂದ ಸಾಲಗಾರನಾಗಿದ್ದಾನೆ.

ಗಂಡ ಹೆಂಡತಿ ಜಗಳದ ನಡುವೆ ಕೂಸು ಬಡವಾಯ್ತು ಅನ್ನೋ ಹಳೆಯ ಗಾದೆ ಮಾತಿದೆ. ಆದ್ರೆ ರಾಯಚೂರಿನಲ್ಲಿ ದಾಯಾದಿಗಳ ಜಮೀನು ಜಗಳದ ನಡುವೆ ಲೀಸ್ ಪಡೆದು ಉಳುಮೆ ಮಾಡುತ್ತಿದ್ದ ಬಡ ರೈತ ಬೆಳೆ ಹಾನಿಯಿಂದ ಸಾಲಗಾರನಾಗಿದ್ದಾನೆ. ಲಕ್ಷಾಂತರ ರೂಪಾಯಿ ಬೆಳೆ ನಾಶವಾಗಿದ್ದಕ್ಕೆ ಕೈ ಸುಟ್ಟುಕೊಂಡು ಕಂಗಾಲಾಗಿದ್ದಾನೆ. ಈ ಘಟನೆ ನಡೆದಿದ್ದು, ರಾಯಚೂರು ಜಿಲ್ಲೆ ಸಿರವಾರ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ನಡೆದಿದೆ. ಕಳೆದ 10 ವರ್ಷದಿಂದ 9 ಎಕರೆ 30 ಗುಂಟೆ ಜಮೀನನ್ನ ಲೀಸ್ ಪಡೆದು ಉಳುಮೆ ಮಾಡುತ್ತಿದ್ದ ರೈತ ವಿರುಪಾಕ್ಷಪ್ಪ ಜಮೀನು ಮಾಲೀಕರ ದಾಯಾದಿ ಕಲಹಕ್ಕೆ ತನ್ನ ಲಕ್ಷಾಂತರ ರೂಪಾಯಿ ಬೆಳೆಯನ್ನು ಕಳೆದುಕೊಂಡಿದ್ದಾನೆ. ಜಮೀನು ವಿವಾದ ಹಿನ್ನೆಲೆ ದಾಯಾದಿಗಳ ಕಲಹ ಕಳೆದ ಎರಡು ವರ್ಷಗಳಿಂದ ಬೆಳೆಯನ್ನ ಹಾಳು ಮಾಡುತ್ತಲೇ ಬಂದಿದ್ದಾರೆ.



ಈ ವರ್ಷ ಭರ್ಜರಿಯಾಗಿ ಬೆಳೆದಿದ್ದ ಕಾಬೂಲ್ ಕಡಲೆ ಬೆಳೆಗೆ ರಾತ್ರೋರಾತ್ರಿ ಗ್ಲೈಫೋಸೇಟ್ ಕಳೆನಾಶಕ ಸಿಂಪಡಿಸಿದ್ದರಿಂದ ಸುಮಾರು 10 ಲಕ್ಷ ರೂಪಾಯಿ ಕಾಬೂಲ್ ಕಡಲೆ ಬೆಳೆ ಸಂಪೂರ್ಣ ಹಾಳಾಗಿದೆ. ಉಮಾದೇವಿ ಎನ್ನುವವರ ಹೆಸರಿನಲ್ಲಿರುವ ಜಮೀನನ್ನ ಅವರ ಮಗ ವಿರೂಪಾಕ್ಷಿ ನೋಡಿಕೊಳ್ಳುತ್ತಿದ್ದು, ವಿರುಪಾಕ್ಷಪ್ಪ ಎನ್ನುವ ರೈತನಿಗೆ ಎಕರೆಗೆ 20 ಸಾವಿರದಂತೆ ಲೀಸ್ ಗೆ ನೀಡಲಾಗಿದೆ. ಆದ್ರೆ ವಿರೂಪಾಕ್ಷಿಯ ಚಿಕ್ಕಪ್ಪ ಹಾಗೂ ಚಿಕ್ಕಪ್ಪನ ಮಕ್ಕಳು ಆಸ್ತಿ ವಿವಾದಕ್ಕೆ ಜಮೀನಿನಲ್ಲಿ ಬೆಳೆದ ಬೆಳೆಗೆ ರಾತ್ರೋ ರಾತ್ರಿ ಕಳೆನಾಶಕ ಔಷಧಿ ಸಿಂಪಡಿಸಿದ್ದಾರೆ. ಇದರಿಂದ ಗೊಬ್ಬರ ಎಣ್ಣೆ ಬೀಜ ಕೂಲಿ ಆಳುಗಳಿಗಾಗಿ ನಾಲ್ಕುವರೆ ಲಕ್ಷ ಖರ್ಚು ಬಂಡವಾಳ ಹಾಕಿ ರೈತ ವಿರೂಪಾಕ್ಷಿ ಕಂಗಾಲಾಗಿದ್ದಾನೆ.



### ಸಹೋದರ ಕಿತ್ತಾಟದಲ್ಲಿ ಭೂಮಿ ಲೀಸ್ ಪಡೆದ ರೈತ ಸಾಲಗಾರ

ಈ ವರ್ಷ ಉತ್ತಮ ಮಳೆಯಾಗಿತ್ತು. ಕಪ್ಪು ಮಣ್ಣಿನಲ್ಲಿ ಭರ್ಜರಿಯಾಗಿ ಕಾಬೂಲ್ ಕಡಲೆ ಬೆಳೆಯ ಬಹುದು ಅಂತ ರೈತ ವಿರೂಪಾಕ್ಷಿ ಸಾಲ- ಸೂಲ ಮಾಡಿ ಜಮೀನಿನಲ್ಲಿ ಕಾಬೂಲ್ ಕಡಲೆ ಹಾಕಿದ್ದ, ಬೆಳೆಯೂ ಸಹ ಉತ್ತಮವಾಗಿ ಬಂದಿತ್ತು. ಕಡಲೆ ಕಾಯಿ ಕಟ್ಟಿಕೊಂಡು ಇಡೀ ಜಮೀನು ಹಚ್ಚಹಸಿರಿನಿಂದ ಕಂಗೊಳಿಸುತ್ತಿತ್ತು. ಆದ್ರೆ ಜಮೀನಿನ ಮಾಲೀಕ ವಿರೂಪಾಕ್ಷಿನ ಸಂಬಂಧಿಕರು ಏಕಾಏಕಿ ರಾತ್ರಿ ವೇಳೆ ಜಮೀನಿಗೆ ನುಗ್ಗಿ ಇಡೀ ಜಮೀನಿನ ತುಂಬಾ ಕಳೆನಾಶಕ ಔಷಧಿ ಸಿಂಪಡಿಸಿದ್ದಾರೆ. ಇದರಿಂದಾಗಿ ಇಡೀ ಜಮೀನು ಹಳದಿ ಬಣ್ಣಕ್ಕೆ ತಿರುಗಿ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ.




ಕಾಡ್ಗಿಚ್ಚು ತಪ್ಪಿಸಲು ಅರಣ್ಯ ಇಲಾಖೆಯಿಂದ ಫೈರ್‌ಲೈನ್: ಮುಂದಿನ 3 ತಿಂಗಳು ಬೆಂಕಿ ತಡೆಯೋದು ದೊಡ್ಡ ಟಾಸ್ಕ್!

ಇದರಿಂದಾಗಿ ನೊಂದ ಜಮೀನಿನ ಮಾಲೀಕ ವಿರೂಪಾಕ್ಷಿ ತನ್ನ ಚಿಕ್ಕಪ್ಪ ರಾಜಶೇಖರ ಹಾಗೂ ಚಿಕ್ಕಪ್ಪನ ಮಕ್ಕಳಾದ ಮಹೇಶ್, ಪ್ರವೀಣ್ ವಿರುದ್ಧ ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಆ ಬಳಿಕ ಜಮೀನಿಗೆ ಭೇಟಿ ನೀಡಿದ ರಾಯಚೂರು ಕೃಷಿ ವಿವಿ ತಜ್ಞರ ತಂಡ ಜಮೀನಿನಲ್ಲಿನ ಬೆಳೆ ಪರೀಕ್ಷೆ ನಡೆಸಿ ಕಳೆನಾಶಕ ಸಿಂಪಡಣೆಯಿಂದ ಬೆಳೆ ಹಾನಿಯಾಗಿರುವ ಬಗ್ಗೆ ವರದಿ ನೀಡಿದ್ದಾರೆ. ಆದ್ರೂ ಆರೋಪಿಗಳ ವಿರುದ್ದ ಇದುವರೆಗೂ ಯಾವುದೇ ಕ್ರಮವಾಗಿಲ್ಲ, ಬೆಳೆನಾಶ ಮಾಡಿರುವುದನ್ನು ಒಪ್ಪಿಕೊಂಡರು ಕ್ರಮವಿಲ್ಲ, ಬೆಳೆಹಾನಿ ಪರಿಹಾರವನ್ನೂ ನೀಡುತ್ತಿಲ್ಲ, ತಪ್ಪಿತಸ್ಥರಿಂದ ಬೆಳೆ ಪರಿಹಾರ ಕೊಡಿಸಬೇಕು ಅಂತ ರೈತ ವಿರೂಪಾಕ್ಷಿ ಆಗ್ರಹಿಸಿದ್ದಾರೆ. ಒಟ್ಟಾರೆ ದಾಯಾದಿಗಳ ಕಲಹದಿಂದಾಗಿ ಕೈಗೆ ಬಂದ ತುತ್ತುಬಾಯಿಗೆ ಬರದಂತೆ ಆಗಿದೆ.

**-ವೀರನಗೌಡ**

6 ☜

ವನ್ನು ಓಲೈಸುವ ಹೇಳಿಕೆ ನೀಡಿದರು. ಯಾರಿಗೂ ಪೆಟ್ಟು ತಿಂದ ಪೊಲೀಸರು ಕಾಣಿಸಲಿಲ್ಲ, ಅಷ್ಟೇ ಅಲ್ಲ ಯಾರೂ ಕೂಡ ಪೊಲೀಸರ ಮೇಲೆ ಕಲ್ಲು ಹೊಡೆದವರನ್ನು ಒದ್ದು ಒಳಗೆ ಹಾಕಿ ಎಂದು ಹೇಳಲೇ ಇಲ್ಲ, ಬದಲಿಗೆ ಇದು ಬಿಜೆಪಿ ಆರ್‌ಎಸ್‌ಎಸ್‌ನವರು ಮಾಡಿದ್ದು ಹೀಗೆ ಬೇರೆ ಬೇರೆ ವ್ಯಾಖ್ಯಾನ ನೀಡಿದರು. ಬಲವಾಗಿ ವಿರೋಧಿಸುವ ಧೈರ್ಯವನ್ನು ಆಡಳಿತರೂಢರು ಮಾಡಲೇ ಇಲ್ಲ, ಬದಲಿಗೆ ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ವಕ್ತಾರ ಎಂ.ಲಕ್ಷ್ಮಣ್, ಎಂಎಲ್‌ಸಿ ಬಿ.ಕೆ. ಹರಿಪ್ರಸಾದ್ ಕಲ್ಲು ಹೊಡೆದವರು ಆರ್‌ಎಸ್‌ಎಸ್‌ನವರು ಎಂದು ದೂರಿದರು.

ಪೊಲೀಸರೇ ಸರಿಯಿಲ್ಲ ಎಂಬಂತೆ ಸಚಿವರೊಬ್ಬರು ಮಾತನಾಡಿದರೆ, ಮತ್ತೊಬ್ಬ ಸಚಿವರ ಕಲ್ಲು ಹೊಡೆದವರು ಮೈನರ್ ಎಂದುಬಿಟ್ಟರು. ಯಾರ ಬಾಯಲ್ಲೂ ಕಿಡಿಗೇಡಿಗಳು ಯಾರೇ ಆಗಲಿ ಕಾನೂನು ಮೀರಿ ಹೋದವರನ್ನು ಬಂಧಿಸಿ ಎನ್ನಲಿಲ್ಲ, ಹೋಗಲಿ ಕಿಡಿಗೇಡಿಗಳಿಂದ ಏಟು ತಿಂದ ಪೊಲೀಸರಿಗೆ ಮತ್ತು ಅವರ ಕುಟುಂಬ ಸಾಂತ್ವನ ಹೇಳುವ ಕೆಲಸ ಮಾಡಲಿಲ್ಲ, ಈ ನಡುವೆ ಪೊಲೀಸ್ ಠಾಣೆ ಮೇಲೆ ದಾಳಿ ಹಿನ್ನೆಲೆ ಮಾರನೆಯ ದಿನ ಮಂಗಳವಾರ ಉದಯಗಿರಿ ಪೊಲೀಸ್ ಠಾಣೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಆಗಮಿಸಿ ಪೊಲೀಸರಿಗೆ ನೈತಿಕ ಸ್ಥೈರ್ಯ ಕೊಡಲು ಆಗಮಿಸಿದರಾದರೂ ಎಡಿಜಿಪಿ ಠಾಣೆಗೆ ಬಂದಿರುವ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಗೆ ಬಂದ ಪ್ರತಾಪ್ ಸಿಂಹ ಅವರನ್ನು ಪೊಲೀಸರು ವಾಪಸ್ ಕಳುಹಿಸಲಾಯಿತು.

ಇದಾದ ನಂತರ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಬಿಜೆಪಿ ನಿಯೋಗದೊಂದಿಗೆ ಭೇಟಿ ನೀಡಿದ ವಿಪಕ್ಷ ನಾಯಕ ಆರ್. ಅಶೋಕ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಮುತ್ತುರಾಜ್ ಹಾಗೂ ಜಾಹ್ನವಿ ಸೇರಿದಂತೆ ಹಿರಿಯ ಅಧಿಕಾರಿಗಳು ಅಶೋಕ್ ಅವರಿಗೆ ಮಾಹಿತಿ ನೀಡಿದರು.



ಇಷ್ಟೆಲ್ಲ ಆಗುವ ಹೊತ್ತಿಗೆ ಈ ಘಟನೆ ರಾಜಕೀಯ ಬಣ್ಣ ಪಡೆದುಕೊಳ್ಳಲಾರಂಭಿಸಿತು. ಇದನ್ನು ರಾಜಕೀಯವಾಗಿ ಬಳಸಿಕೊಳ್ಳಲು ಕೆಲವರು ಮುಂದಾದರು. ವಿವಾದಿತ ವಿಚಾರವನ್ನು ಪೋಸ್ಟ್ ಮಾಡಿದ್ದ ಆರೋಪಿ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಘಟನೆ ಮಾರನೆಯ ದಿನ (ಫೆ.11ಮಂಗಳವಾರ) ಮಧ್ಯಾಹ್ನ ಉದಯಗಿರಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ ಅವರು, ಪೋಸ್ಟರ್‌ನಲ್ಲಿ ನಮ್ಮ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿಗೆ ಅವಮಾನ ಮಾಡಲಾಗಿದೆ. ವ್ಯಂಗ್ಯವಾಗಿ, ಅಶ್ಲೀಲವಾಗಿ ರಾಹುಲ್ ಗಾಂಧಿಯನ್ನು ಬಿಂಬಿಸಲಾಗಿದೆ. ಪೋಸ್ಟ್ ಮಾಡಿರುವವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಿ ಎಂದು ಲಿಖಿತ ದೂರು ನೀಡಿದರು.




ಇನ್ನೊಂದೆಡೆ ಘಟನೆಗೆ ಸಂಬಂಧಪಟ್ಟಂತೆ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ, ಉದಯಗಿರಿ ಪೊಲೀಸ್ ಠಾಣೆಗೆ ತೆರಳಿ ಪರಿಸ್ಥಿತಿ ಅವಲೋಕಿಸಿದ್ದಲ್ಲದೇ, ಠಾಣೆಯಲ್ಲಿ ಎಲ್ಲಾ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಪರಿಸ್ಥಿತಿ ನಿಯಂತ್ರಿಸಲು, ದಾಂಧಲೆ ಉಂಟುಮಾಡಿದ ಕಿಡಿಗೇಡಿಗಳು, ಅವರಿಗೆ ಪ್ರಚೋದನೆ ನೀಡಿರುವವರ ಬಗ್ಗೆ ಮಾಹಿತಿ ಕಲೆಹಾಕಿ ಬಂಧಿಸುವಂತೆ ಅಗತ್ಯ ಸಲಹೆ ಮತ್ತು ಸೂಚನೆಯನ್ನು ಅಧಿಕಾರಿಗಳಿಗೆ ನೀಡಿದರು.

ಠಾಣೆ ಭೇಟಿ ನೀಡಿ ಮಾಹಿತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಇದಕ್ಕೆ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ನಡೆದಿರುವ ಕಲ್ಲು ತೂರಾಟ ಪ್ರಕರಣವೇ ಸಾಕ್ಷಿಯಾಗಿದೆ. ಘಟನೆ ವೇಳೆ ಹಿರಿಯ ಪೊಲೀಸ್ ಅಧಿಕಾರಿಗಳ ಮೇಲೆ ದಾಳಿ ನಡೆದಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಆಡಳಿತ ಪಕ್ಷದ ಶಾಸಕರು, ಸಚಿವರೇ ಬೇಸರ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ರಾಜ್ಯ ಸರ್ಕಾರದ ಸಚಿವರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪೊಲೀಸ್ ಇಲಾಖೆಯ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ನಡೆಯುತ್ತಿದೆ. ಮೈಸೂರಿನ ಘಟನೆ ತಲೆತಗ್ಗಿಸುವ ಘಟನೆಯಾಗಿದೆ ಎಂದರು.

ಇನ್ನೊಂದೆಡೆ ಸರ್ಕಾರದ ಭಾಗವಾಗಿರುವ ಸಹಕಾರ ಸಚಿವ ಕೆ.ಎನ್.ರಾಜಣ್ಣ ಕಿಡಿಕಾ ಮೈಸೂರು ಉದಯಗಿರಿಯಲ್ಲಿ ನಡೆದಿರುವ ಕಲ್ಲುತೂರಾಟ ಪ್ರಕರಣದಲ್ಲಿ ಪೊಲೀಸರು ಕರ್ತವ್ಯಲೋಪ ಮಾಡಿದ್ದಾರೆ. ನಮ್ಮ ಪೊಲೀಸರಿಗೆ ಏನಾಗಿದೆ? ಕನಿಷ್ಠ ಸಾಮಾನ್ಯ ಪ್ರಜ್ಞೆ ಬೇಡವೇ?, ಯಾರೋ ಆರ್‌ಎಸ್‌ಎಸ್ ವ್ಯಕ್ತಿ ಧಾರ್ಮಿಕ ನಿಂದನೆಯ ಕೃತ್ಯವೆಸಗಿದ್ದಾನೆ. ಆತನ ಮೇಲೆ ಪ್ರಕರಣ ದಾಖಲಾಗಿ ಬಂಧಿಸಲಾಗಿದೆ. ಆರೋಪಿಯನ್ನು ಮುಸ್ಲಿಂ ಜನಸಂಖ್ಯೆ ಶೇ.99ರಷ್ಟಿರುವ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಇರಿಸಲಾಗಿದೆ. ಸಹಜವಾಗಿಯೇ ಜನ ಒಟ್ಟಾಗಿ ಸೇರಿದ್ದಾರೆ, ಗಲಾಟೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸರಿಗೆ ಬುದ್ಧಿ ಬೇಡವೇ? ಥೂ? ಆಡಳಿತ ನಡೆಸುವುದು ಸಚಿವರ ಜವಾಬ್ದಾರಿಯಷ್ಟೇ ಅಲ್ಲ, ಅಧಿಕಾರಿಗಳಿಗೂ ಹೊಣೆಗಾರಿಕೆ ಇದೆ. ಸ್ಥಳೀಯವಾಗಿ ಕೆಲಸ ಮಾಡುವ ಪೊಲೀಸರಿಗೆ ತಲೆಯಲ್ಲಿ ಬುದ್ಧಿ ಬೇಡವೇ? ರಸ್ತೆಯಲ್ಲಿ ಹೋಗುವ ಕೆಲಸಕ್ಕೆ ಬಾರದ ಅನಾಮಧೇಯನಿಗಿರುವ ಸಾಮಾನ್ಯ ಜ್ಞಾನ ದೊಡ್ಡ ಬ್ಯಾಡ್ಜ್‌ಗಳನ್ನು ಹಾಕಿಕೊಂಡು ತಿರುಗುವ ಅಧಿಕಾರಿಗಳಿಗೆ ಇಲ್ಲವೇ?, ಬಂಧನದ ನಂತರ ನಡೆದ ಗಲಭೆ ಪ್ರಕರಣಗಳಿಗೆ ಸ್ಥಳೀಯ ಪೊಲೀಸರೇ ಕಾರಣ ಎಂದು ತರಾಟೆಗೆ ತೆಗೆದುಕೊಂಡರು.

ಗೃಹಸಚಿವ ಡಾ. ಜಿ. ಪರಮೇಶ್ವರ್ ಮಾತ್ರ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ನುಗ್ಗಿ ದಾಂಧಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿರುವುದಾಗಿ ಹೇಳಿದರು. ವ್ಯಕ್ತಿಯೊಬ್ಬ ಸಾಮಾಜಿಕ ಜಾಲತಾಣದಲ್ಲಿ ಒಂದು ಸಮುದಾಯವನ್ನು ನಿಂದಿಸಿ, ಅವಹೇಳನಕಾರಿ ಪೋಸ್ಟ್ ಹಾಕಿದ್ದ. ಈತನನ್ನು ಪೊಲೀಸರು ಬಂಧಿಸಿ ಕಾನೂನು ಕ್ರಮ ತೆಗೆದುಕೊಂಡಿದ್ದಾರೆ. ಈ ವ್ಯಕ್ತಿಯನ್ನು ತಮ್ಮ ವಶಕ್ಕೆ ನೀಡಿ ನಾವು ಆತನಿಗೆ ಬುದ್ಧಿ ಕಲಿಸುತ್ತೇವೆ ಎಂದು ಒಂದು ಸಮುದಾಯದ ಜನರು ಉದಯಗಿರಿ ಪೊಲೀಸ್ ಠಾಣೆ ಮುಂದೆ ಗಲಾಟೆ ನಡೆಸಿದ್ದಾರೆ ಎಂಬ ಮಾಹಿತಿ ನೀಡಿದರು.

ಪೊಲೀಸರು ಮಾಡಿರುವ ಎಫ್‌ಐಆರ್‌ನಲ್ಲಿ ಸಾವಿರಕ್ಕೂ ಹೆಚ್ಚುಮಂದಿ ಕಲ್ಲು ಎಸೆದಿದ್ದಾಗಿ ದಾಖಲಿಸಲಾಗಿದೆ. ಆದರೆ ಪೊಲೀಸರಿಗೆ ಇಲ್ಲಿಯವರೆಗೆ ಕೇವಲ 16 ಮಂದಿಯನ್ನಷ್ಟೆ ಬಂಧಿಸಲು ಸಾಧ್ಯವಾಗಿದೆ. ಉಳಿದಂತೆ ಹುಡುಕಾಟ ಮುಂದುವರೆದಿದೆ. ಇಲ್ಲಿ ಪೊಲೀಸರ ಮೇಲೆ ಕಲ್ಲು ಎಸೆದಿರುವುದು, ಹಾನಿಯಾಗಿರುವುದು ಸರ್ಕಾರಿ ಆಸ್ತಿ ಹೀಗಿರುವಾಗಿ ಪೊಲೀಸರಿಗೆ ಭದ್ರತೆ ಇಲ್ಲಾಂದ್ರೆ ಹೇಗೆ ತಪ್ಪು ಮಾಡಿದವರಿಗೆ ಬಿಸಿ ಮುಟ್ಟಿಸಿದರೆ ಕೇವಲ ಮತಬ್ಯಾಂಕ್‌ಗಾಗಿ ರಾಜಕೀಯ ಮಾಡುವುದೆಷ್ಟು ಸರಿ ಜನ ಪ್ರಶ್ನೆ ಮಾಡುತ್ತಿದ್ದಾರೆ. ಘಟನೆ ಬಳಿಕ ಉದಯಗಿರಿ ಸಬ್‌ಇನ್ಸ್‌ಪೆಕ್ಟರ್ ರೂಪೇಶ್ ಅವರನ್ನು ನಗರ ಪೊಲೀಸ್ ಆಯುಕ್ತರ ಕಚೇರಿಯ ಆಟೋಮೇಷನ್ ಸೆಂಟರ್‌ಗೆ ವರ್ಗಾವಣೆ ಮಾಡಲಾಗಿದೆ. ಅವರು ಅವತ್ತು ಘಟನೆ ನಡೆದ ದಿನ ಗಲಭೆ ತಡೆಯುವಲ್ಲಿ ನಿರ್ಲಕ್ಷ್ಯ ಧೋರಣೆ ತಾಳಿದ್ದಾರೆ ಎನ್ನುವುದು ಅವರ ಮೇಲಿರುವ ಆರೋಪವಾಗಿದೆ. ಮುಂದೆ ಏನಾಗುತ್ತದೆಯೋ ಕಾದು ನೋಡಬೇಕಿದೆ.

☯

# ಭಾಗಪ್ಪ ಹರಿಜನ ಹತ್ಯೆ ಮಾಡಿದ ಆರೋಪಿಗಳು ಅರೆಸ್ಟ್!

ವಿಜಯಪುರ


✍ ರಾಜೀವ್ ಬೈರಿ

ಆತ ಭೀಮಾತೀರದ ನಟೋರಿಯಸ್ ಹಂತಕ. ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಕ್ರಿಮಿನಲ್ ಲೋಕದ ದೊರೆಯಾಗಿ ಮೆರೆಯುತ್ತಿದ್ದ. ಭೀಮಾತೀರ ರಕ್ತ ಚರಿತ್ರೆಯಲ್ಲಿ ಕೇಳಿ ಬರುವ ಹೆಸರುಗಳಲ್ಲಿ ಈತನ ಹೆಸರು ಪ್ರಮುಖವಾಗಿರುತ್ತಿತ್ತು. ಒಂದು ಬಾರಿ ನಾಲ್ಕು ಗುಂಡು ತಗುಲಿ ಆತ ಅದೃಷ್ಟವಶಾತ್ ಪಾರಾಗಿದ್ದ. ಆತ ಐದು ವರ್ಷಗಳ ಬಳಿಕ ಮತ್ತೊಮ್ಮೆ ಹಂತಕರ ದಾಳಿಗೆ ಒಳಗಾಗಿ ಉಸಿರು ಚೆಲ್ಲಿದ್ದಾನೆ. ಭೀಮಾತೀರದ ರಕ್ತ ಚರಿತ್ರೆಯಲ್ಲಿ ಮತ್ತೊಂದು ಅಧ್ಯಾಯ ಸೇರ್ಪಡೆಯಾಗಿದೆ. ಒಂದು ಕೊಲೆ ಎರಡು ಜಿಲ್ಲೆಯನ್ನು ಬೆಚ್ಚಿ ಬೀಳಿಸಿದೆ.



ಭೀಮಾತೀರದ ಹಂತಕ, ರೌಡಿಶೀಟರ್, ಕುಖ್ಯಾತ ನಟೋರಿಯಸ್ ಎನಿಸಿಕೊಂಡಿದ್ದ ಬಾಗಪ್ಪ ಹರಿಜನನ(50) ಭೀಕರ ಕೊಲೆಯಾಗಿದೆ. ವಿಜಯಪುರ ನಗರದ ರೇಡಿಯೋ ಕೇಂದ್ರದ ಬಳಿ ಬಾಗಪ್ಪನನ್ನು ಕೊಚ್ಚಿ ಕೊಲೆ ಮಾಡಲಾಗಿದೆ. ಕಳೆದ ಹಲವು ದಶಕಗಳಿಂದ ಭೀಮಾತೀರದ ಹಂತಕರ ಹೆಸರಿನಲ್ಲಿ ಸಂಚಲನ ಸೃಷ್ಟಿಸಿದ್ದ ಬಾಗಪ್ಪ ಹರಿಜನ ಇಂದು ಬೀದಿ ಹೆಣವಾಗಿದ್ದಾನೆ. ಹಲವಾರು ಕೊಲೆ ಹಾಗೂ ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಬಾಗಪ್ಪನ ಮೇಲೆ ಅಂದು ರಾತ್ರಿ ಅಟ್ಯಾಕ್ ನಡೆದಿದ್ದು, ಆತನ ಮುಖ, ಕೈ, ದೇಹವನ್ನು ಕೊಚ್ಚಿ ಕೊಲೆ ಮಾಡಲಾಗಿದೆ. ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದು, ಕೊಲೆ ಯಾರು ಮಾಡಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದ್ದರು. ಇನ್ನೂ ಬಾಗಪ್ಪನ ಹಿನ್ನೆಲೆಯನ್ನು ಕೇಳಿದ್ರೆ ನೀವು ಬೆಚ್ಚಿ ಬಿಳ್ತಿರಿ...

ಮೂಲತಃ ಬಾಗಪ್ಪ ಹರಿಜನ ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ಬ್ಯಾಡಗಿಹಾಳ ಗ್ರಾಮದವನಾಗಿದ್ದಾನೆ. ಮೊದಲಿನಿಂದಲೂ ಭೀಮಾತೀರದ ಹಂತಕ ಚಂದಪ್ಪ ಹರಿಜನ ನಂಟಿನಲ್ಲೇ ಬೆಳೆದ ಬಾಗಪ್ಪ ಸಹ ಅದೇ ಹಾದಿ ಹಿಡಿದು ಹಂತಕ ಚಂದಪ್ಪನ ಸಹಚರನಾಗಿದ್ದ. ಚಂದಪ್ಪನ ಜೊತೆಗೆ ಸೇರಿ ಹಲವಾರು ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪ ಈತನ ಮೇಲಿತ್ತು.



ಬಂಧಿತ ಆರೋಪಿಗಳು

ಬಾಗಪ್ಪನ ಮೇಲಿದ್ದ 10 ಪ್ರಕರಣಗಳನ್ನು ನೋಡೊದಾದ್ರೆ ಕೊಲೆ, ಕೊಲೆಯತ್ನ, ಸುಲಿಗೆ, ದರೋಡೆ, ಗುಂಡು ಹಾರಿಸಿದ ಪ್ರಕರಣ, ಬೆದರಿಕೆ ಸೇರಿ ಹಲವು ಪ್ರಕರಣಗಳು ಇವೆ.

### ರವಿ ಮೇಲಿನಕೇರಿ ಹತ್ಯೆಯೇ ಬಾಗಪ್ಪ ಹರಿಜನ ಕೊಲೆಗೆ ಕಾರಣ

ಪ್ರಕರಣದ ಬೆನ್ನತ್ತಿದ ಪೊಲೀಸರು ಇತ್ತೀಚೆಗೆ ವಿಜಯಪುರ ನಗರದಲ್ಲಿ ರವಿ ಮೇಲಿನಕೇರಿ ಎಂಬುವವರಿಗೆ ತುಳಸಿರಾಮ ಹರಿಜನ ಹಾಗೂ ಆತನ ಸಹಚರರಾದ ಅಲೆಕ್ಸ್ ಗೊಲ್ಲರ, ಷಣ್ಮುಖ ನಡುವಿನಕೇರಿ, ಪ್ರಕಾಶ ಗೊಲ್ಲರ, ಮುರುಗೇಶ ಉಳ್ಳಾಗಡ್ಡಿ, ರಾಜೇಸಾಬ ರುದ್ರವಾಡಿ ಇವರು ಸೇರಿಕೊಂಡು ಕೊಲೆ ಮಾಡಿದ್ದರು. ಇನ್ನೂ ಬಾಗಪ್ಪ ಹರಿಜನ ಹಾಗೂ ರವಿ ಮೇಲಿನಕೇರಿ ಇವರು ಸಂಬಂಧಿಕರಾಗಿದ್ದರು. ಇವರಿಬ್ಬರ ನಡುವೆ ಕೆಲವು ವರ್ಷಗಳಿಂದ ಹಣಕಾಸಿನ ವ್ಯವಹಾರವಿದ್ದು, ಇಬ್ಬರೂ ಸೇರಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು.



ರವಿ ಮೇಲಿನಕೇರಿ ತಮ್ಮ ಪ್ರಕಾಶ ಮೇಲಿನಕೇರಿ ಬಳಿ ಬಾಗಪ್ಪ ಹರಿಜನ, ನಿಮ್ಮ ಅಣ್ಣ ನನ್ನ ಹೆಸರು ಹೇಳಿ ಹಣ, ಆಸ್ತಿ ಮತ್ತು ವಾಹನ ಎಲ್ಲವನ್ನು ಮಾಡಿಕೊಂಡಿರುತ್ತಾನೆ. ಅವೆಲ್ಲವನ್ನು ನನಗೆ ಬಿಟ್ಟು ಕೊಡಬೇಕು ಅಂತಾ ಒತ್ತಡ ಹಾಕುತ್ತಿದ್ದ ಎನ್ನಲಾಗಿದೆ. ಹಲವಾರು ಬಾರಿ ಬೆದರಿಕೆ ಸಹ ಹಾಕಿದ್ದನಂತೆ. ಇತ್ತೀಚೆಗೆ ಬಾಗಪ್ಪ, ಪ್ರಕಾಶ ಮೇಲಿನಕೇರಿ ನೀವು ಆಸ್ತಿ ಬಿಟ್ಟುಕೊಡಬೇಕು. ಇಲ್ಲದಿದ್ದರೆ 10 ಕೋಟಿ ಹಣ ಕೊಡಬೇಕು. ಅದೂ ಆಗದಿದ್ದರೆ ನಿಮ್ಮ ಅಣ್ಣನ ಹೆಂಡತಿಯನ್ನು ನನ್ನ ಹತ್ತಿರ ಕಳುಹಿಸು ಎಂದು ಅಣ್ಣನ ಹೆಂಡತಿಯ ಕುರಿತಾಗಿ ಅವಾಚ್ಯ ಪದ ಬಳಕೆ ಮಾಡಿ ಮಾತನಾಡಿದ್ದಲ್ಲದೇ ನಿಮ್ಮ ಅಣ್ಣನಿಗೆ ಹೇಗೆ ಹೊಡೆದಿರುತ್ತೇನೋ, ಅದೇ ತರಹ ನಿನಗೂ ಹೊಡೆಯುತ್ತೇನೆ ಅಂತಾ ಧಮಕಿ ಹಾಕಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆಗ ಪ್ರಕಾಶ ಮೇಲಿನಕೇರಿ ಈತನಿಗೆ ತನ್ನ ಅಣ್ಣನ ಕೊಲೆ ಭಾಗಪ್ಪ ಹರಿಜನ ಈತನೇ ಮಾಡಿಸಿದ್ದಾನೆ ಎಂದು ಖಚಿತವಾಗಿದ್ದರಿಂದ ಬಾಗಪ್ಪ ಹರಿಜನನನ್ನು ಮುಗಿಸಿ ಬಿಡಬೇಕು ಅಂತಾ ಪ್ರಕಾಶ ಮೇಲಿನಕೇರಿ ತನ್ನ ಸಂಬಂಧಿಕ ಹಾಗೂ ಸ್ನೇಹಿತರೊಂದಿಗೆ ಸಂಚು ಮಾಡಿ ದಿನಾಂಕ 11 ರಂದು ಭಾಗಪ್ಪ ಹರಿಜನ, ತನ್ನ ಮನೆಯ ಹೊರಗಡೆ ವಾಕಿಂಗ್ ಮಾಡುತ್ತಿದ್ದಾಗ ಆಟೋ ಹಾಗೂ ಬೈಕ್‌ನಲ್ಲಿ ಬಂದು ಪಿಸ್ತೂಲಿನಿಂದ ಗುಂಡು ಹಾರಿಸಿ, ಕೊಡಲಿ, ಮಚ್ಚಿನಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದರು.

ಈ ಬಗ್ಗೆ ಮೃತನ ಮಗಳಾದ ಗಂಗೂಬಾಯಿ ಭಾಗಪ್ಪ ಹರಿಜನ, ಸಾ: ಬಬಲಾದಿ ತಾ: ಇಂಡಿ ರವರು ನೀಡಿದ ದೂರಿನ ಮೇರೆಗೆ ಗಾಂಧಿಚೌಕ ಪೊಲೀಸ್ ಠಾಣೆ ಗುನ್ನೆ ನಂ: 32/2025 ಕಲಂ: 189(2), 191(2), 191(3), 352, 103, 190 ಬಿಎನ್ ಎಸ್ ಆ್ಯಕ್ಟ್-2023 ಮತ್ತು 25(ಎ) ಭಾರತೀಯ ಆಯುಧ ಕಾಯ್ದೆ ಅಡಿ ಪ್ರಕರಣ ದಾಖಲಾಗಿರುತ್ತದೆ. ಮೃತ ಭಾಗಪ್ಪ ಹುಚ್ಚಪ್ಪ ಹರಿಜನ ಈತನ ಮೇಲೆ 10 ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ಅಫ್ಜಲ್ ಪೂರ ಪೊಲೀಸ್ ಠಾಣೆಯಲ್ಲಿ 01 ಕೊಲೆ ಪ್ರಕರಣ ಸೇರಿದಂತೆ. ಒಟ್ಟು 06 ಕೊಲೆ ಪ್ರಕರಣಗಳು ದಾಖಲಾಗಿರುತ್ತವೆ.

### ಆರೋಪಿತರ ಬಂಧನ

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರಾದ; 1) ಪ್ರಕಾಶ ಪಿಂಟು ಲಕ್ಷ್ಮಣ ಮೇಲಿನಕೇರಿ, 26 ವರ್ಷ, ಸಾ: ಅಗರಖೇಡ, ತಾ: ಇಂಡಿ. 2) ರಾಹುಲ ಭೀಮಾಶಂಕರ ತಳಕೇರಿ, 20 ವರ್ಷ, ಸಾ: ಹೋರ್ತಿ, ತಾ: ಇಂಡಿ. 3) ಸುದೀಪ ತಾಯಿ: ರೇಣುಕಾ ಕಾಂಬಳೆ, 20 ವರ್ಷ, ಸಾ: ಅಗರಖೇಡ, ತಾ: ಇಂಡಿ. 4) ಮಣಿಕಂಠ ಗದಿಗೆಪ್ಪ ಶಂಕ್ರಪ್ಪ ಬೆನಕೊಪ್ಪ, 27 ವರ್ಷ, ಸಾ: ಬಸವೇಶ್ವರ ಆಶ್ರಯ ಕಾಲನಿ, ಬೈಲಹೊಂಗಲ, ಜಿ: ಬೆಳಗಾವಿ. ಇವರನ್ನು ಬಂಧಿಸಲಾಗಿರುತ್ತದೆ. ಆರೋಪಿತರಿಂದ ಕೃತ್ಯಕ್ಕೆ ಬಳಸಲಾದ ಆಯುಧ ಹಾಗೂ ವಾಹನಗಳನ್ನು ಜಪ್ತಿ ಮಾಡುವುದು ಹಾಗೂ ಇನ್ನಿತರ ತನಿಖಾ ಕಾರ್ಯ ಪ್ರಗತಿಯಲ್ಲಿರುತ್ತದೆ. ☯

---

3 ☞

ಪ್ರೀತಿಸುತ್ತಿದ್ದಳು. ಈ ಹಿಂದೆಯೂ ಆಕೆ ಆ ಯುವಕನೊಂದಿಗೆ ಓಡಿ ಹೋಗಿದ್ದಳು.

ಆಗ ಸಂತಪೂರ ಪೊಲೀಸ್ ಠಾಣೆಯಲ್ಲಿ ಯುವತಿ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿತ್ತು. ವೈಜ್ಞಾನಿಕ ತನಿಖೆಯಿಂದ ಇವರಿಬ್ಬರು ಹೈದರಾಬಾದ್‌ನಲ್ಲಿ ಇರುವುದಾಗಿ ಪತ್ತೆ ಮಾಡಿದರು. ಆನಂತರ ಮೋನಿಕಾ ತಂದೆ ತಾಯಿಯೊಂದಿಗೆ ವಾಸಿಸುತ್ತಿದ್ದರೂ ಸಹ ಆ ಯುವಕನೊಂದಿಗೆ ಕದ್ದುಮುಚ್ಚಿ ಬೆಕ್ಕಿನ ಕಣ್ಣಿನ ಮೋನಿಕಾ ಪ್ರೀತಿಸುವುದು ನಡೆಸುತ್ತಿದ್ದಳು.

ಪರಾರಿಯಾಗಲು ಪ್ರಯತ್ನಿಸುತ್ತಿದ್ದ ಆರೋಪಿ ತಂದೆಯನ್ನು ಅಂದೇ ಸಂಜೆ ಸಂತಪೂರ ಬಸ್ ನಿಲ್ದಾಣದಲ್ಲಿ ಸಿಪಿಐ ರಘುವೀರ್ ಸಿಂಗ್ ಮತ್ತು ಅವರ ತಂಡ ಬಂಧಿಸಿದ್ದಾರೆ. ☯



ಡಿವೈಎಸ್ಪಿ ಶಿವಾನಂದ್ ಪವಾಡ ಶೆಟ್ಟಿ



ಸಿಪಿಐ ರಘುವೀರ್ ಸಿಂಗ್ ಠಾಕೂರ್



ಪಿಎಸ್ಐ ನಂದಕುಮಾರ

---

# ಹಣದ ವಿಚಾರವಾಗಿ ಪ್ರಾಣ ಸ್ನೇಹಿತನನ್ನೇ ಪೆಟ್ರೋಲ್ ಸುರಿದು ಸುಟ್ಟು ಕೊಂದ ಪಾಪಿ!

4 ☞

ತಳವಾರ ಈತನನ್ನು ಪೆಟ್ರೋಲ್ ಸುರಿದು ಹತ್ಯೆ ಮಾಡಿರುವುದಾಗಿ ಒಪ್ಪಿಕೊಂಡಿದ್ದ ತದನಂತರ ಪಿಎಸ್ಐ ಪೂಜಾರಿ ಅವರು ಕೃತ್ಯ ನಡೆದ ಸ್ಥಳಕ್ಕೆ ಬಂದು ಜಾಗ ಮತ್ತು ಬಸವರಾಜನ ಶವವನ್ನು ವೀಕ್ಷಿಸಿ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಜಮಖಂಡಿ ಗ್ರಾಮೀಣ ಠಾಣಾ ಸಿಪಿಐ ಮಲ್ಲಪ್ಪ ಮಡ್ಡಿ, ಜಮಖಂಡಿ ಡಿವೈಎಸ್ಪಿ ಈ. ಶಾಂತವೀರ, ಬಾಗಲಕೋಟ ಎಸ್ಪಿ ಅಮರನಾಥ ರೆಡ್ಡಿರವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಹತ್ಯೆ ನಡೆದ ಜಾಗ ಮತ್ತು ಶವದ ಪಂಚನಾಮೆ ನಡೆಸಿದರು. ನಂತರ ಮೃತನ ಸಂಬಂಧಿಕರಾದ ಸಂಗಪ್ಪ ತಳವಾರ ನೇರವಾಗಿ ಜಮಖಂಡಿ ಗ್ರಾಮೀಣ ಪೊಲೀಸ್ ಠಾಣೆ ತೆರಳಿ ಪಿಎಸ್ಐ ಜಿ.ಎಂ. ಪೂಜಾರಿರವರಿಗೆ ದೂರು ಸಲ್ಲಿಸಿದರು. ದೂರು ದಾಖಲಿಸಿಕೊಂಡ ಕ.ಖ.ಖ ರವರ ತಮ್ಮ ಠಾಣಾ ಸಿ.ಆರ್. ನಂ. ಬಿಎನ್ಎಸ್ 0017/2025 2023(ವಿ/ಎಸ್ 103)(1) ಎಸ್‌ಸಿ/ಎಸ್‌ಟಿ ಆ್ಯಕ್ಟ್ 2015 ವಿ/ಎಸ್3 (2)(ವಿಎ) ನೆದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಸದರಿ ಆರೋಪಿತನಾದ ಮಹಾನಿಂಗ ಸಿದರಾಯ ಬಿದರಿ ಸಾ|| ಹನಗಂಡಿ ಜಿ|| ಬಾಗಲಕೋಟ ತಾ|| ರಬಕವಿ-ಬನಹಟ್ಟಿನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ☯

## ಕಚಗುಳಿ

# ಮೈಡಿಯರ್ ರಂಜಿತ

ಶ್ರೀಮತಿ ರಂಜಿತ ವಾಸುದೇವನ್!

ಬೆಂಗಳೂರಿನ ಸಾಮಾನ್ಯ ಬಡಾವಣೆಯಲ್ಲಿ ಕಡಿಮೆ ಬಾಡಿಗೆಯ ಮನೆಯಲ್ಲಿ ವಾಸ ಮಾಡುತ್ತಿರುವ, ಮಧ್ಯಮ ವರ್ಗದವರಿಗಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿರುವ ಆರ್ಥಿಕ ಪರಿಸ್ಥಿತಿಯಲ್ಲಿರುವ ಕುಟುಂಬದವಳು.

ಗಂಡ ವಾಸುದೇವನ್. ತಮಿಳುನಾಡಿನ ಮೂಲದ ಇವನು ಬೆಂಗಳೂರಿಗೆ ಬಂದು ನೆಲೆಸಿ ಹತ್ತು ವರ್ಷಗಳಾಗಿದೆ. ಪ್ರೈವೇಟ್ ಸ್ಕೂಲ್‌ನಲ್ಲಿ ಟೀಚರ್ ಆಗಿರುವ ಇವನನ್ನು ಅದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ರಂಜಿತ ಎಂಬ ಬೆಂಗಳೂರಿನ ಹೆಣ್ಣು, ಇವನ ಬಾಹ್ಯರೂಪದ ಆಕರ್ಷಣೆಗೆ ಬೆರಗಾಗಿದ್ದಳು ಮತ್ತು ಅವನ ಗುಣ, ಸ್ವಭಾವ, ಶಿಸ್ತು ಜೀವನ ಇಷ್ಟವಾಗಿದ್ದರಿಂದ ಲವ್ ಮಾಡಿ ಮದುವೆ ಆಗಿದ್ದಾಳೆ. ಇವರಿಬ್ಬರಿಂದ ಸಂಬಳ ಕೇವಲ ಇಪ್ಪತ್ತೆರಡು ಸಾವಿರ ಬರುತ್ತದೆ. ಆದರೆ ಪ್ರೀತಿಸಿ ಮದುವೆ ಆಗಿದ್ದರಿಂದ ಪ್ರಾರಂಭದ ಒಂದು ವರ್ಷ ಈ ಬಡತನ, ಮಿತವಾದ ಜೀವನ ಗಮನಕ್ಕೆ ಬಂದಿರಲಿಲ್ಲ.

ಆದರೆ... ಆದರೆ ಕ್ರಮೇಣ, ತನ್ನ ಸಂಬಂಧಿಕರ ಮತ್ತು ಗೆಳತಿಯರ ಶ್ರೀಮಂತಿಕೆಯ ವೈಭವದ ಬದುಕನ್ನು ಕಂಡು ಅವಳಿಗೆ ತನ್ನ ಹೀನಾಯ ಆರ್ಥಿಕ ಪರಿಸ್ಥಿತಿ ಬಗ್ಗೆ ಮತ್ತು ಸಂಸಾರ ಸಹಜವಾದ ಆಸೆಗಳು, ವೈಭವದ ಬದುಕಿನ ಬಗ್ಗೆ ಪ್ರಚೋದನೆ ಉಂಟಾಯಿತು. ಈ ಕಾರಣದಿಂದಲೇ ಏನೋ ಸಂಸಾರ ಜೀವನದಲ್ಲಿ ಬೇಸರ, ಅಸಮಾಧಾನ, ಆಗಾಗ ಜಗಳ ಉಂಟಾಗುತ್ತಿತ್ತು. ಅವಳು ಗಂಡನ ಜೊತೆ ಜಗಳ ಆಡುತ್ತಿದ್ದಳು ಮತ್ತು ಕಡಿಮೆ ಸಂಬಳವಿರುವ ಈ ಕೆಲಸ ಬಿಟ್ಟು ಲಕ್ಷಾಂತರ ರೂಪಾಯಿ ಲಾಭ ಬರುವ ಬಿಜಿನೆಸ್ ಮಾಡಿ ಎಂದು ಒತ್ತಾಯ ಮಾಡುತ್ತಿದ್ದಳು. ಆದರೆ ಪ್ರಯೋಜನ ಆಗಲಿಲ್ಲ.

ಗಂಡ ಹೇಳಿದ್ದೇನು? ನನಗೆ ವ್ಯವಹಾರ ಜ್ಞಾನ ಇಲ್ಲ. ಈಗ ಇರುವ ಕೆಲಸ ಬಿಡಲಾರೆ ಎಂದು ಸ್ಪಷ್ಟವಾಗಿ ಹೇಳಿದ್ದನು. ಆದರೆ ರಂಜಿತ ಈ ವಿಚಾರವಾಗಿ ಎರಡು ತಿಂಗಳುಗಳ ಕಾಲ ಪ್ರತಿನಿತ್ಯ ಜಗಳ ಆಡಿದ್ದರೂ ಪ್ರಯೋಜನ ಆಗಿರಲಿಲ್ಲ.

ದಾಂಪತ್ಯ ಬದುಕು ಕಂಡಿತು. ಸಂಸಾರದ ನೆಮ್ಮದಿ ಹಾಳಾಯಿತು. ಇದಕ್ಕೆ ಅಂದರೆ, ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿಯುವಂತೆ ಗೆಳತಿಯರಲ್ಲಿ, ಸಂಬಂಧಿಕರಲ್ಲಿ ಕೆಲವರು ಮಾತಾಡಿದ್ದರು.

''ಏ ರಂಜಿತ... ನೀನು ಎಂತಹ ಚೆಲುವೆ. ನಿನ್ನ ಸೌಂದರ್ಯದ ಬಗ್ಗೆ ಅರಿವು ನಿನಗೆ ಇದ್ಯಾ ? ಸಿನಿಮಾ ಹೀರೋಯಿನ್‌ಗಳು ಮೇಕಪ್ ಮತ್ತು ಗ್ಲಾಮರಸ್ ಡ್ರೆಸ್‌ಗಳಲ್ಲಿ ಮಿಂಚುತ್ತಾರೆ. ಆದರೆ ನೀನು ಸಹಜವಾಗಿ, ತುಂಬಾ ನ್ಯಾಚುರಲ್ ಆಗಿ ಬ್ಯುಟಿಫುಲ್ ಆಗಿದ್ದೀಯ.

ನೀನು ಸೌಂದರ್ಯದೇವತೆ. ನೀನು ತಪ್ಪುಮಾಡಿದೆ. ಆಗ ನಿನಗೆ ಬುದ್ಧಿ ಇರಲಿಲ್ವ? ಪ್ರೈವೇಟ್ ಸ್ಕೂಲ್ ಟೀಚರ್ ಲವ್ ಮಾಡಿ ಮದುವೆ ಮಾಡಿಕೊಂಡಿದ್ದೀಯಲ್ಲ ಬುದ್ಧಿ ಇದ್ಯಾ ನಿನಗೆ? ಛೇ... ಛೇ... ನಿನ್ನಂತ ಚೆಲುವೆನ ಕೋಟಿಗಳ ಶ್ರೀಮಂತ ಮೆಚ್ಚಿ ಮದುವೆ ಮಾಡಿಕೊಳ್ಳುತ್ತಿದ್ದ. ನೀನು ಮಹಾರಾಣಿಯಂತೆ ಬಹು ವೈಭವದಿಂದ ಬದುಕಬಹುದಿತ್ತು.

ನಿಜ... ಇದು ನಿಜ! ಅವಳು ಕನ್ನಡಿ ಮುಂದೆ ನಿಂತು ತಲೆ ಬಾಚಿಕೊಳ್ಳುವಾಗಲೆಲ್ಲಾ ತನ್ನ ಸೌಂದರ್ಯ ನೋಡುತ್ತಾ ಮೈಮರೆತು ಬಿಡುತ್ತಿದ್ದಳು. ನಿಜ... ನಾನು ಚೆಲುವೆ! ನಾನು... ನಾನು ಲವ್ ವ್ಯಾಮೋಹಕ್ಕೆ ಒಳಗಾಗಿ ಬೇಗ ಮದುವೆ ಆಗಬಾರದಿತ್ತು. ನಾನು ತಪ್ಪು ಮಾಡಿದೆ. ಯಾರನ್ನಾದರೂ ಹಿಡಿದು ಪ್ರಯತ್ನ ಮಾಡಿದರೆ ಸಿನಿಮಾ ಹೀರೋಯಿನ್ ಆಗಬಹುದಿತ್ತು. ಕಾಲ ಯಾವಾಗಲು ಒಂದೇ ರೀತಿ ಇರುವುದಿಲ್ಲ. ರಂಜಿತಾಳ ಬದುಕಲ್ಲಿ ಬದುಕಿರುವತನಕ ಮರೆಯಲಾರದಂತ ಘಟನೆ ನಡೆಯಿತು. ಅದು ಏನು ಸಾಮಾನ್ಯ ಆಗಿರಲಿಲ್ಲ.

●●●

ಅವಳು ಶಾಲೆಗೆ ಹೊರಡಲು ರೆಡಿಯಾಗುತ್ತಿರುವಾಗ, ಕೋರಿಯರ್ ಪಾರ್ಸಲ್ ಬಂದಿತು. ಅವಳಿಗೆ ಆಶ್ಚರ್ಯವಾಗಿದೆ. ಸೈನ್ ಮಾಡಿ ತಗೊಂಡು ಬಾಕ್ಸ್ ಓಪನ್ ಮಾಡಿದಾಗ ಮೈ ರೋಮಾಂಚನಗೊಂಡಿತು. ಕಣ್ಣುಗಳು ಮಿನುಗಿದವು. ಅವಳು ನಗುತ್ತಿದ್ದಾಳೆ. ಅದರಲ್ಲಿ ಇರೋದು ಏನು? ತುಂಬಾ ಬೆಲೆಬಾಳುವ ಮೊಬೈಲ್ ಹ್ಯಾಂಡ್ ಸೆಟ್...!

ಮತ್ತೊಂದು ಬಾಕ್ಸ್‌ನಲ್ಲಿ ಏನಿದೆ? ಒಂದು ಲಕ್ಷ ರೂಪಾಯಿ ಮೊತ್ತದ ಚೆಕ್ ಇದೆ...! ಅವಳು ಸಂತೋಷ, ಆಶ್ಚರ್ಯದಿಂದ ಫ್ರಂ ಅಡ್ರೆಸ್ ನೋಡಿದಳು.

ಪವನ್‌ರಾಜ್...! ವಿಳಾಸ ನೋಡಿದಾಗ ಅವನ್ಯಾರು ಎಂದು ಅವಳಿಗೆ ಗೊತ್ತಾಯಿತು. ಇವಳ ಮನೆ ಇರುವ ಬೀದಿಯಲ್ಲಿ ಇದೆ ಶ್ರೀಮಂತಿಕೆಯ ಬಂಗಲೆ...!

ಅವಳಿಗೆ ಗಾಬರಿ, ಆಶ್ಚರ್ಯ ಮತ್ತು ಒಂದು ರೀತಿ ಅನುಮಾನ ಕಾಡಲಾರಂಭಿಸಿತು. ಇದೇ ಬೀದಿಯಲ್ಲಿರುವ ಪವನ್‌ರಾಜ್ ಯಾಕೆ ಈ ಗಿಫ್ಟ್ ಬಾಕ್ಸ್ ಅನ್ನು ಕೋರಿಯರ್ ಮೂಲಕ ಕಳಿಸಿದ್ದಾರೆ. ಮೊಬೈಲ್ ಬೆಲೆ ಮುವತ್ತು ಸಾವಿರ. ಒಂದು ಲಕ್ಷದ ಚೆಕ್! ಆ ಚೆಕ್ ಇವಳ ಹೆಸರಲ್ಲಿದೆ.

ಪವನ್‌ರಾಜ್ ಯಾರು?

ರಿಯಲ್ ಎಸ್ಟೇಟ್ ಮತ್ತು ವಿಪರೀತ ಕಮೀಷನ್ ಬರುವ ಲಾಭದಾಯಕ ವ್ಯವಹಾರಗಳನ್ನು ಮಾಡಿರುವ, ಈಗಲೂ ಹತ್ತು ಹಲವಾರು ವ್ಯವಹಾರ ಮಾಡುತ್ತಿರುವ ಶ್ರೀಮಂತ. ಪ್ರಾಯ ಮುವತ್ತೈದು. ಆರೋಗ್ಯವಾಗಿದ್ದಾರೆ ಮತ್ತು ಬಲು ಗಟ್ಟುಮುಟ್ಟಾದ ಶರೀರದವರು.

ಅವಳಿಗೆ ಇತ್ತೀಚೆಗೆ ಗೊತ್ತಾಗಿತ್ತು. ಆ ಶ್ರೀಮಂತನ ಹೆಂಡತಿ ಎರಡು ತಿಂಗಳ ಹಿಂದೆ ತೀವ್ರ ಹೃದಯಾಘಾತದಿಂದ ಸತ್ತಿದ್ದರು. ಹೆಂಡತಿ ರೂಪವತಿ ಆಗಿರಲಿಲ್ಲ. ಅವಳ ತಂದೆಯ ಶ್ರೀಮಂತಿಕೆಯ ಕಾರಣದಿಂದ ಮದುವೆ ಆಗಿದ್ದರು. ಅವಳ ತಂದೆ ಬಂಡವಾಳ ಹಾಕಿದ್ದರಿಂದ, ಬಿಸಿನೆಜ್‌ನಲ್ಲಿ ಸಹಾಯ ಮಾಡಿದ್ದರಿಂದ ಪವನ್‌ರಾಜ್ ಎಂದು ಶ್ರೀಮಂತರಲ್ಲಿ ಒಬ್ಬರಾಗಿದ್ದಾರೆ.

ಓಕೆ ಎಲ್ಲಾ ಸರಿ. ಆದರೆ ಹೀಗೇಕೆ ಮಾಡಿದ್ದಾರೆ? ನನಗೆ ಒಂದು ಲಕ್ಷ ಮತ್ತು ಬೆಲೆಬಾಳುವ ಮೊಬೈಲ್ ಕೊಡಲು ಕಾರಣ ಏನು?

ಹೊಸ ಮೊಬೈಲ್‌ನಲ್ಲಿ ಕೇಳಿ ಬರಲಾರಂಭಿಸಿತು ಮ್ಯೂಸಿಕಲ್ ಸೌಂಡ್. ಪವನ್‌ರಾಜ್ ಕಾಲಿಂಗ್! ಅಂದರೆ... ಒಂದು ವರ್ಷದ ಕರೆನ್ಸಿ ಮತ್ತು ಇವರ ಫೋನ್ ನಂಬರ್ ಮತ್ತು ಹೆಸರನ್ನು ಸೇವ್ ಮಾಡಿ ಫೋನ್ ಮಾಡಿದ್ದರು.

ಅವಳು ಗಾಬರಿಯಾಗಿದ್ದಾಳೆ. ಅವಳ ಕೈಯಲ್ಲಿ ಚಿತ್ತಾಕರ್ಷಕ ಮೊಬೈಲ್‌ನಲ್ಲಿ ಲವ್ ಸಾಂಗ್‌ನ ರಿಂಗ್ ಟೋನ್ ಬರುತ್ತಿದೆ. ಗಂಡ ಮನೆಯಲ್ಲಿ ಇರಲಿಲ್ಲವಾದ್ದರಿಂದ ಗಾಬರಿ, ಉದ್ವೇಗದಿಂದಲೇ ಫೋನ್ ಅಟೆಂಡ್ ಮಾಡಿದಳು.

ಅವಳು ಕಂಪಿಸುವ ಧ್ವನಿಯಲ್ಲಿ ''ಹಲೋ'' ಎಂದಾಗ ಪವನ್‌ರಾಜ್‌ನ ಗಡುಸು ಧ್ವನಿ ಕೇಳಿ ಬಂದಿತು. ''ವಿಶ್ ಯೂ ಹ್ಯಾಪಿ ಮೆನಿ, ಮೆನಿ ರಿಟರ್ನ್ಸ್ ಆಫ್ ದಿ ಡೇ.''

ಅವಳು ರೋಮಾಂಚನಗೊಂಡಳು. ಇವತ್ತು ನನ್ನ ಬರ್ತ್‌ಡೇ. ಅವಳು ಮರೆತಿದ್ದಳು. ಲವ್ ಮಾಡಿ ಮದುವೆ ಮಾಡಿಕೊಂಡಿದ್ದ ಗಂಡ ಇವಳಿಗೆ ವಿಶ್ ಮಾಡಿರಲಿಲ್ಲ. ಒಂದು ಮೊಳ ಮಲ್ಲಿಗೆ ಹೂವನ್ನು ತಂದುಕೊಟ್ಟಿರಲಿಲ್ಲ. ಅವಳು ''ನನ್ನ ಬರ್ತ್‌ಡೇ ಸಂಗತಿ ನಿಮಗೆ ಹೇಗೆ ಗೊತ್ತಾಯಿತು?''

ಅವನು ನಗುತ್ತಾ ''ನಮಗೆ ಯಾರ ಬಗ್ಗೆ ಆಸಕ್ತಿ ಇರುತ್ತದೋ ಅವರ ಬಗ್ಗೆ ಎಲ್ಲಾ... ಎಲ್ಲಾ ತಿಳಿದುಕೊಳ್ಳುತ್ತೇನೆ'' ಎಂದನು.

ಅವಳ ಮುಖ ಕೆಂಪಾಯಿತು. ಮೈ ಸಣ್ಣಗೆ ನಡುಗಿತು. ಅವಳು ಮಾತಾಡಲಿಲ್ಲ.

''ರಂಜಿತ ನಿನಗೆ ಮಿಸ್ ಇಂಡಿಯಾ ಆಗಲು ಅರ್ಹತೆ ಇದೆ. ನಿನ್ನ ಸೌಂದರ್ಯ ಭಾರತದಲ್ಲಿ ಪ್ರಕಾಶಿಸಿ ಎಲ್ಲರ ಗಮನ ಸೆಳೆಯಬೇಕು. ನೀನು ಅಪರೂಪದ ಚೆಲುವೆ.''

ಅವಳು ಈ ಹೊಗಳಿಕೆಯಿಂದ ಉಬ್ಬಿ ಹೋಗುತ್ತಿದ್ದಾಳೆ. ಅವಳು ಈಗ ಅಂದರೆ, ಈ ಫೋನ್ ಕಾಲ್ ಬಂದಾಗ ಕನ್ನಡಿಯ ಎದುರಿಗೆ ನಿಂತಿದ್ದಳು. ತನ್ನ ಸೌಂದರ್ಯ ನೋಡಿಕೊಳ್ಳುತ್ತಾ ಅಥವಾ ಹೊಗಳಿಕೆ ಮಾತುಗಳನ್ನು ಕೇಳುತ್ತಿದ್ದಾಳೆ. ನಿಜ ನಾನು ಸೌಂದರ್ಯವತಿ.

''ರಂಜಿತ... ನಿನ್ನ ಸೌಂದರ್ಯ ಕಾಡು ಗುಲಾಬಿ ರೀತಿ ಗೌಪ್ಯವಾಗಿರಬಾರದು. ನನ್ನ ಆಸೆ, ಉದ್ದೇಶ ಏನು ಗೊತ್ತೆ ? ನಿನ್ನ ಸೌಂದರ್ಯನ ಇಡೀ ಕರ್ನಾಟಕದ ತುಂಬಾ ಪ್ರಚಾರ ಆಗುವಂತೆ ಮಾಡಬೇಕು.''

ಅವಳ ಮುಖ ಅರಳುತ್ತಿದೆ. ಕಣ್ಣುಗಳು ಮಿನುಗುತ್ತಿದೆ.

''ರಂಜಿತ... ಇವತ್ತಿಗೆ ಇಷ್ಟು ಸಾಕು. ಈಗಲೇ ಬ್ಯಾಂಕ್‌ಗೆ ಹೋಗಿ ಆ ಚೆಕ್ ಹಣ ಡ್ರಾ ಮಾಡು. ನನಗೊಂದು ಆಸೆ ಇದೆ.''

''ಏನದು ಹೇಳಿ.''

''ನಿನ್ನ ಬರ್ತ್‌ಡೇನಾ... ನಾನು ತುಂಬಾ ಗ್ರಾಂಡ್ ಆಗಿ ಸಲಬರೇಟ್ ಮಾಡಬೇಕಾ. ನನಗೆ ಈ ನಗರದಲ್ಲಿ ಹಲವಾರು ಬಂಗಲೆಗಳಿವೆ. ಅವುಗಳಲ್ಲಿ ಒಂದು ಬಂಗಲೆಯಲ್ಲಿ ಬರ್ತ್‌ಡೇ ಫಂಕ್ಷನ್‌ಗೆ ರೆಡಿ ಮಾಡ್ತೀನಿ.''

ಅವಳು ಗಾಬರಿಯಿಂದ ''ಬೇಡ... ಬೇಡ'' ಎಂದಳು.

''ಯಾಕೆ ರಂಜಿತಾ?''

''ಎಲ್ಲರೂ ಬಂದಿರುತ್ತಾರೆ. ನನ್ನ ಗಂಡನಿಗೆ ಗೊತ್ತಾದರೆ ರೇಗಾಡುತ್ತಾರೆ. ಬೇರೆ ರೀತಿ ತಪ್ಪು ಕಲ್ಪನೆಗಳಿಗೆ ಅವಕಾಶ ಆಗುತ್ತೆ.''

''ನಿನಗೆ ಗಂಡನಿಗೆ ಆಗಲಿ, ಬೇರೆ ಯಾರಿಗೇ ಆಗಲಿ ಗೊತ್ತಾಗುವುದಿಲ್ಲ. ನಾನು ಬೇರೆ ಯಾರನ್ನೂ ಆಹ್ವಾನಿಸೋಲ್ಲ. ತುಂಬಾ ಬೆಲೆಬಾಳುವ ಚಿನ್ನದ ಆಭರಣಗಳು ಮತ್ತು ಎರಡು ಲಕ್ಷ ರೂಪಾಯಿ ನಗದು ಬರ್ತ್‌ಡೇ ಗಿಫ್ಟ್ ಆಗಿ ಕೊಟ್ಟು, ಕೇಕ್ ಕಟ್ ಮಾಡಿಸಿ ಸಲಬರೇಟ್ ಮಾಡ್ತೀನಿ. ಸಂಜೆ ಬರುತ್ತೀಯ ತಾನೆ?''

ಚಿನ್ನದ ಆಭರಣಗಳು. ಎರಡು ಲಕ್ಷ ಹಣ. ಅವಳು ಪರವಶಗೊಂಡಿದ್ದಾಳೆ. ಅವಳು ಈಗ ತಡಬಡಿಸುತ್ತಾ ''ನನ್ನ ಗಂಡ ಅವರ ತಾತ ಇರುವ ಹಳ್ಳಿಗೆ ಹೋಗಬೇಕು ಅಂತ ಹೇಳಿದ್ರು. ಅವರು ಹೋದರೆ ಬರ್ತೀನಿ. ಇಲ್ಲದಿದ್ದರೆ ಇನ್ನೊಂದು ದಿವಸ ಮಾಡಿದರಾಯಿತು.''

''ಆಗಲಿ ರಂಜಿತ. ನಿನ್ನ ಗಂಡ ಇಲ್ಲದಿರುವಾಗ ಆಗಾಗ ಫೋನ್ ಮಾಡುತ್ತೀಯ ತಾನೆ?''

ಅವಳು ಕೂಡಲೇ ಉತ್ತರಿಸಲಿಲ್ಲ.

''ಹಲೋ... ಹಲೋ ರಂಜಿತ...''

ಅವಳು ಮೆಲ್ಲಗೆ ''ಆಗಲಿ'' ಎಂದಳು.

●●●

ಅವಳಿಗೆ ಗಂಡನಿಂದ ಫೋನ್ ಕಾಲ್ ಬಂದಿತು. ''ಹಳ್ಳಿಯಲ್ಲಿ ಜಮೀನಿನ ವಿಚಾರವಾಗಿ ಗಲಾಟೆ ಆಗುತ್ತಿದೆ. ತಾತನಿಗೆ ಆರೋಗ್ಯ ಸರಿ ಇಲ್ಲ. ನಾನು ಇವತ್ತೇ ಹಳ್ಳಿಗೆ ಹೊರಡ್ತೀನಿ.''

ಅವಳಿಗೆ ಪುಳುಕ ಉಂಟಾಯಿತು. ಮಧ್ಯಾಹ್ನ ನಾಲ್ಕು ಗಂಟೆ. ಗಂಡ ಅಗತ್ಯವಾದ ಲಗೇಜ್ ಪ್ಯಾಕ್ ಮಾಡಿಕೊಂಡು ''ನಾನು ಬರೋದು ಎರಡು ದಿವಸ ಆಗುತ್ತೆ. ನೀನೊಬ್ಬಳೇ ಇರಬೇಡ. ಮಾಲೀಕರ ಮಗಳು ರೇವತಿ ಇದ್ದಾಳೆ. ಅವಳನ್ನು ಕರೆದು ನಿನ್ನ ಜೊತೆ ಮಲಗಿಸಿಕೊಂಡು ನೆಮ್ಮದಿಯಿಂದ ನಿದ್ದೆ ಮಾಡು. ನಾನು ಆಗಾಗ ಫೋನ್ ಮಾಡುತ್ತಿರುತ್ತೀನಿ'' ಎಂದು ಹೇಳಿ ಆಟೋ ಹತ್ತಿ ಹೊರಟನು. ಅವಳಿಗೆ ನಿದ್ದೆ ಬರಲಿಲ್ಲ. ಗಂಡ ಊರಲ್ಲಿ ಇಲ್ಲ. ಇವತ್ತೇ ನನ್ನ ಬರ್ತ್‌ಡೇ. ಸಲಬರೇಟ್ ಮಾಡಿ ಎಂದು ಹೇಳಬೇಕು ಅಂತ ಅಂದುಕೊಂಡಳು. ಆದರೆ ನಾಚಿಕೆ ಮತ್ತು ಏರೊಂದು ರೀತಿ ಭಯ ಉಂಟಾಯಿತು.

ಸಂಜೆ ಐದು ಗಂಟೆ. ಫೋನ್ ಕಾಲ್ ಬಂದಿತು. ಪವನ್‌ರಾಜ್ ಕಾಲಿಂಗ್! ಅವನು ಗಿಫ್ಟ್ ಆಗಿ ಕಳಿಸಿರುವ ಹೊಸ ಮೊಬೈಲ್‌ಗೆ ಫೋನ್ ಮಾಡಿ ''ರಂಜಿತ... ನಿನ್ನ ಗಂಡ ಮಧ್ಯಾಹ್ನ ನಾಲ್ಕು ಗಂಟೆಗೆ ಲಗೇಜ್ ಸಮೇತ ಹಳ್ಳಿಗೆ ಹೋಗಿದ್ದಾರೆ. ನೀನು ಇವತ್ತು ಫ್ರೀಯಾಗಿದ್ದೀಯ ಅಲ್ವ?''

''ನಾನು ಫ್ರೀಯಾಗಿದ್ದೀನಿ. ಆದರೆ ನಿಮಗೆ ಹೇಗೆ ಈ ಸಂಗತಿ ಗೊತ್ತಾಯ್ತು ?''

ಅವನು ನಗುತ್ತಾ ''ನಿನ್ನ ಬಗ್ಗೆ ಆಸಕ್ತಿ ಇದೆ. ಹಾಗಾಗಿ ನಿನ್ನ ವಿಚಾರವಾಗಿ ಎಲ್ಲವನ್ನೂ ಕುಳಿತಿರುವ ಜಾಗದಿಂದಲೇ ತಿಳಿದುಕೊಳ್ತೀನಿ.''

ಅವಳು ಗಲಿಬಿಲಿಗೊಂಡಿದ್ದಾಳೆ. ಆಸಕ್ತಿ ಅಂದರೇನು? ನನ್ನ ಮೇಲೆ ಆಸೆನಾ? ಅವಳು ಚಡಪಡಿಸುತ್ತಿದ್ದಾಳೆ.

''ಏ ರಂಜಿತ... ನೀನು ನಿನ್ನ ಹತ್ತಿರ ಇರುವ ಸೀರೆಗಳಲ್ಲಿ ನಿನಗೆ ತುಂಬಾ ಚೆನ್ನಾಗಿ ಕಾಣುವುದನ್ನು ಉಟ್ಟುಕೊಂಡು, ನ್ಯಾಚುರಲ್ ಆಗಿ ನಿನ್ನ ಸೌಂದರ್ಯಕ್ಕೆ ಮೆರಗು ಬರುವ ರೀತಿ ಮೇಕಪ್ ಮಾಡಿಕೊಂಡು ರೆಡಿಯಾಗಿರಬೇಕು.''

ಅವಳು ಗಾಬರಿಯಾದಳು. ಆದರೂ ಯಾಕೋ ಏನೋ ಚಿನ್ನದ ಆಭರಣಗಳು ಮತ್ತು ಇನ್ನಿತರ ವಿಶೇಷವಾದ ಗಿಫ್ಟ್‌ಗಳ ಜೊತೆಗೆ ಎರಡು ಲಕ್ಷ ಕ್ಯಾಶ್ ಕೊಡ್ತೀನಿ ಅಂತ ಹೇಳಿದ್ದಾರೆ. ಅವಳು ಇದರ ಆಕರ್ಷಣೆಯಿಂದಲೇ ಏನೋ ಒಪ್ಪಿಗೆ ನೀಡಿದಳು.

●●●

ನಗರದ ಹೊರವಲಯದಲ್ಲಿರುವ ಮಿನಿ ಬಂಗಲೆಯ ಸುತ್ತಲು ಎತ್ತರವಾದ ಕಾಂಪೌಂಡ್ ಗೋಡೆ ಇದೆ. ಮುಂಭಾಗದಲ್ಲಿ ರೋಸ್ ಗಾರ್ಡನ್ ಇದೆ. ಹಿಂಭಾಗದಲ್ಲಿ ಸ್ವಿಮ್ಮಿಂಗ್ ಪೂಲ್ ಇದೆ. ಬಲಭಾಗದ ಕಾರ್ನರ್‌ನಲ್ಲಿ ಕಾರು ಪಾರ್ಕಿಂಗ್ ಮಾಡಲು ಜಾಗವಿದೆ. ಅಲ್ಲಿ ಸ್ಯಾಂಟ್ರೋ ಡಿಲಕ್ಸ್ ಕಾರ್ ನಿಂತಿದೆ. ಅವಳು ಕಾರಿನಿಂದ ಇಳಿದಳು. ಅವಳನ್ನು ಕರೆದುಕೊಂಡು ಬರಲು ಶ್ರೀಮಂತ ಪವನ್‌ರಾಜ್ ವ್ಯವಸ್ಥೆ ಮಾಡಿದ್ದನು. ಬಂಗಲೆಯ ಸೌಂದರ್ಯ ನೋಡಿ ಬೆರಗಾಗುತ್ತಾ ಹೆಜ್ಜೆ ಹಾಕುತ್ತಿದ್ದಾಳೆ. ಅಲ್ಲಿ ಯಾರೊಬ್ಬರೂ ಇರಲಿಲ್ಲ. ಅವಳು ಸುತ್ತಲು ನೋಡುತ್ತಿರುವಾಗ ಮೇಲಿಂದ ಕನಕಾಂಬರ, ಪಾರಿಜಾತ, ಮಲ್ಲಿಗೆ ಬಿಡಿ ಹೂವು ಇವಳ ತಲೆಯ ಮೇಲೆ ಬಿದ್ದು ಇಡೀ ಶರೀರವನ್ನು ಸ್ಪರ್ಶಿಸುತ್ತಾ ನೆಲದ ಮೇಲೆ ಬೀಳುತ್ತಾ ಇವಳನ್ನು ಸ್ವಾಗತಿಸಿತು. ಅವಳು ಪುಳುಕಗೊಂಡಳು. ಮಹಡಿಯ ರೂಮಿನಿಂದ ಇಳಿದು ಬಂದ ಶ್ರೀಮಂತ ಪವನ್‌ರಾಜ್ ಹೂವಿನ ಬೊಕೆ ಕೊಡುತ್ತಾ ''ಹುಟ್ಟುಹಬ್ಬದ ಸುಂದರವಾದ ತಳಿರು ಬೆರಳುಗಳನ್ನು ಸವರುತ್ತಾ, ಮೃದುವಾಗಿ ಅದುಮುತ್ತಾ ಬೇರೊಂದು ರೂಮಿಗೆ ಕರೆತಂದನು.

ಇಡೀ ರೂಮನ್ನು ಅಲಂಕರಿಸಲಾಗಿದೆ. ಟೇಬಲ್ ಮೇಲೆ ಬರ್ತ್‌ಡೇ ಕೇಕ್ ಇದೆ. ಅದರ ಮೇಲೆ ಅವಳ ಹೆಸರನ್ನು ಮೂಡಿಸಲಾಗಿದೆ. ಮೊದಲು ಅವಳನ್ನು ತಬ್ಬಿಕೊಂಡು ಟೇಬಲ್ ಹತ್ತಿರ ಕರೆತಂದು ಮೊದಲೇ ರೆಡಿ ಮಾಡಿದ್ದ ದೀಪಗಳನ್ನು ಹತ್ತಿಸಿದನು. ಅವಳ ಕೈ ಹಿಡಿದು ಉಂಗುರ ತೊಡಿಸಿದನು. ಬೆಲೆಬಾಳುವ ನೆಕ್‌ಲೆಸ್ ಹಾಕುತ್ತಾ ಅವಳ ಕತ್ತಿನ ಭಾಗವನ್ನೆಲ್ಲಾ ಸವರಿದನು. ಅವಳು ಚಡಪಡಿಸುತ್ತಿರುವಾಗಲೇ ಎರಡು ಲಕ್ಷ ರೂಪಾಯಿ ನಗದು ಕೊಡುತ್ತಾ ಅವಳಿಗೆ ಮತ್ತೊಮ್ಮೆ ವಿಶ್ ಮಾಡಿ ಸರ್ರನೆ ಬಾಗಿ ಅವಳ ಕೆನ್ನೆಗೆ ಮುತ್ತು ಕೊಟ್ಟನು. ಅವಳು ವಿರೋಧಿಸಲಿಲ್ಲ. ಆದರೆ ತೀರ್ಮಾನ ಮಾಡಿದ್ದಳು. ಇನ್ನು ಬೇರೆ ಶೃಂಗಾರದಾಟಗಳಿಗೆ ಅವಕಾಶ ಕೊಡಬಾರದು...! ಗ್ರಾಂಡ್ ಡಿನ್ನರ್ ಪ್ರಾರಂಭವಾಯಿತು. ಈ ರಸಿಕ ಶ್ರೀಮಂತ ಊಟ ಮಾಡುತ್ತಲೇ ಅವಳ ಮೈ ತುಂಬಾ ಕೈ ಆಡಿಸಿದ್ದನು ಮತ್ತು ಮುಖದ ಭಾಗವನ್ನು ಸವರಿದನು. ಅವಳಿಗೆ ಕುಡಿಯಲು ಬಾದಾಮಿ ಹಾಲು ಕೊಡಲಾಯಿತು. ಕೆಲವು ಕ್ಷಣಗಳ ನಂತರ ಅವಳಿಗೆ ಮಾದಕತೆಯ ಅಮಲು ವುಂಟಾಯಿತು. ಅವಳನ್ನು ಎತ್ತಿಕೊಂಡು ಬೆಡ್‌ರೂಮಿನಲ್ಲಿ ಬೆಳಗಿನತನಕ ಸುಖ ಅನುವಿಸಿದನು.

ಬೆಳಗಾದ ಮೇಲೆ ಎಚ್ಚರವಾಯಿತು. ತಾನು ಶೀಲ ಕಳೆದುಕೊಂಡಿರೋದು ಅರಿವಾಯಿತು. ಹಣ, ಚಿನ್ನದ ಆಭರಣಗಳು ಅಲ್ಲಿ ಇರಲಿಲ್ಲ. ಡ್ರೆಸ್ ಮಾಡಿಕೊಂಡು ರೆಡಿಯಾದಾಗ ಸೆಕ್ಯುರಿಟಿಯವನು ಬಂದು ''ನಿಮ್ಮನ್ನ ಮನೆಗೆ ತಲುಪಿಸಲು ಸಾಹೇಬರು ಹೇಳಿದ್ದಾರೆ'' ಎಂದನು.

●●●

ಮನೆಗೆ ಬಂದಿದ್ದಾಳೆ. ಕಂಬನಿ ಮಿಡಿಯುತ್ತಾ ಪಶ್ಚಾತ್ತಾಪ ಪಡುತ್ತಿರುವಾಗ ಫೋನ್ ಕಾಲ್ ಬಂದಿತು. ''ರಂಜಿತ ನಿನಗೆ ಕೊರಿಯರ್‌ನಲ್ಲಿ ಕಳಿಸಿದ್ದ ಚಿನ್ನದ ಉಂಗುರ, ನೆಕ್‌ಲೇಸ್, ಒಂದು ಲಕ್ಷ ಹಣವನ್ನು ಈಗ ಬರಲಿರುವ ಸೆಕ್ಯುರಿಟಿಯವನಿಗೆ ಕೊಡಬೇಕು. ಇಲ್ಲದಿದ್ದರೆ ಸೆಕ್ಸ್ ದೃಶ್ಯದ ವೀಡಿಯೋ ಕ್ಲಿಪ್ ನಿನ್ನ ಗಂಡನಿಗೆ ತಲುಪುತ್ತದೆ.'' ಶಾಕ್... ಗ್ರೇಟ್ ಶಾಕ್! ಅವಳು ತತ್ತರಿಸುತ್ತಿದ್ದಾಳೆ.

5 ☜

ಮಗ ಬ್ಲಿಂಕ್ ಇಟ್ ಕಂಪನಿಯಲ್ಲಿ ಡೆಲಿವರಿ ಕೆಲಸ ಮಾಡುತ್ತಿರುವ ವಿನೋದ್ ಅಲಿಯಾಸ್ ವಿನೋತ್ ಉರುಫ್ ಜೋಶ್ವ (19), ಜ್ಯೋತಿನಗರ, ರೆಡ್ಡಿಪಾಳ್ಯ, ಹೆಚ್‌ಎಎಲ್ ಆಸ್ಪತ್ರೆ ಹಿಂಭಾಗ ವಾಸ ಇರುವ ಫಿರೋಜ್ ರವರ ಆಟೋ ಡ್ರೈವರ್ ರಿಯಾನ್ (19), ಸುಧಾಮನಗರ, ಶ್ರೀ ಮುತ್ತುಮಾರಿಯಮ್ಮ ದೇವಸ್ಥಾನ ಹತ್ತಿರ ವಾಸ ಇರುವ ಲೇಟ್ ಸೈಮನ್‌ರವರ ಮಗ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುವ ಪ್ರವೀಣ್‌ಕುಮಾರ್ (19)ರವರನ್ನು ಬಂಧಿಸಿ ಅವರ ಬಳಿ ಇದ್ದ ಆಯುಧಗಳನ್ನು ಮತ್ತು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ಬಂಧಿತರನ್ನು ಕೂಲಂಕುಶವಾಗಿ ವಿಚಾರಣೆ ಮಾಡಲಾಗಿ ಇತ್ತೀಚಿಗೆ ಕೋಲಾರ ನಗರದ ಪ್ರಮುಖ ರಸ್ತೆಗಳಲ್ಲಿನ 10ರಿಂದ 20 ಅಂಗಡಿಗಳ ರೋಲಿಂಗ್ ಶಟರ್ ಡೋರ್‌ಗಳನ್ನು ಹೊಡೆದು ಹಣ ದೋಚಿದ್ದು ನಾವೇ ಎಂದು ಒಪ್ಪಿಕೊಂಡಿರುವುದಲ್ಲದೆ ತಲೆಮರೆಸಿಕೊಂಡಿರುವ ಉಳಿದ ಆರೋಪಿಗಳ ಬಗ್ಗೆ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ಕೆಜಿಎಫ್‌ನಲ್ಲಿರುವ ಪದವೀಕ್ಷಣಾಲಯದಲ್ಲಿ ದಾಖಲಿಸಿ ಇನ್ನುಳಿದ ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

### ಮಾಸ್ಟರ್ ಮೈಂಡ್ ರೋಹಿತ್ ಗಿರಿ ಬಂಧನ

ಮಂಕಿ ಕ್ಯಾಪ್ ಕಳ್ಳರ ಗ್ಯಾಂಗ್‌ನ ಮಾಸ್ಟರ್ ಮೈಂಡ್, ಕಿಂಗ್‌ಪಿನ್ ಆದ ನೇಪಾಳದ ರೋಹಿತ್ ಗಿರಿ ಮತ್ತು ಈತನ ಬಲಗೈ ಬಂಟ ದಾದಾಪೀರ್‌ನ ಬಗ್ಗೆ ಬಂಧಿತರು ನೀಡಿದ ಮಾಹಿತಿ ಆಧಾರದ ಮೇಲೆ ದಾದಾಪೀರ್‌ನ ಪ್ರೇಯಸಿಯೊಬ್ಬಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ ಅವಳು ನೀಡಿದ ಸುಳಿವಿನ ಮೇರೆಗೆ ಬೆಂಗಳೂರಿನ ತಿಪ್ಪಸಂದ್ರ, ಇಂದಿರಾ ಕ್ಯಾಂಟಿನ ಹತ್ತಿರ ವಾಸವಾಗಿರುವ ಧನರಾಜ್, ಗಿರಿರವರ ಮಗ ರೋಹಿತ್ ಗಿರಿ ಅಲಿಯಾಸ್ ನೇಪಾಳಿ (22) ಹಾಗೂ ರಾಯಚೂರು ಜಿಲ್ಲೆ ಮಸ್ಕಿ ತಾಲ್ಲೂಕು, ಹುಲ್ಲೂರು ಗ್ರಾಮದ ವಾಸಿ ರಂಜನ್‌ಸಾಬ್ ರವರ ಮಗ ಬೆಂಗಳೂರಿನ ಮುರುಗೇಶ್‌ಪಾಳ್ಯದಲ್ಲಿ ಮೆಕ್ಯಾನಿಕ್ ಕೆಲಸ ಮಾಡಿಕೊಂಡಿರುವ ದಾದಾಪೀರ್ (19) ಇವರಿಬ್ಬರನ್ನು ಫೆಬ್ರವರಿ 7ರಂದು ಬೆಳಗಿನ ಜಾವ ರಾಯಚೂರು ಜಿಲ್ಲೆ ಸಿಂದನೂರಿನ ಬಸ್ ನಿಲ್ದಾಣದ ಪಕ್ಕದಲ್ಲಿ ಪಿಐ ಎಂ. ಸದಾನಂದರವರ ನೇತೃತ್ವದ ಕ್ರೈಂ ತಂಡವು ಬಂಧಿಸಿ ಕೋಲಾರ ನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ, ರೋಹಿತ್ ಗಿರಿಯಾದ ನಾನು ಮೂಲತಃ ನೇಪಾಳದವನು. ಬಡ ಕುಟುಂಬದಿಂದ ಬಂದಿದ್ದು, ಕಷ್ಟದಲ್ಲಿಯೇ ಬಾಲ್ಯವನ್ನು ಕಳೆದು, ಪ್ರೌಢ ವ್ಯವಸ್ಥೆಗೆ ಬರುವ ಮೊದಲೇ 17ನೇ ವಯಸ್ಸಿಗೆ ಕಳ್ಳತನ ಮಾಡುವುದನ್ನು ಕಲಿತೆನು. ಮೊದಲಿಗೆ ಕಳ್ಳತನ ಮಾಡಲು ಹೋದಾಗ ನನ್ನನ್ನು ಗುರುತು ಹಚ್ಚಿಬಿಡುತ್ತಾರೆಂದು ಮುಖಕ್ಕೆ ಕಪ್ಪು ಬಟ್ಟೆಯಿಂದ ಕವರ್ ಮಾಡಿಕೊಂಡು ಹೋಗಿ ಕಳ್ಳತನ ಮಾಡಿಕೊಂಡು ಬಂದೆನು. ನಂತರ ಮಂಕಿ ಕ್ಯಾಪ್ ಹಾಕಿಕೊಳ್ಳುವುದನ್ನು ರೂಢಿ ಮಾಡಿಕೊಂಡೆನು. ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ ನಾನು ಒಂದು ದಿನ ಬೈಕ್‌ವೊಂದನ್ನು ಕದ್ದು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಚೆನ್ನಾಗಿ ಮಜಾ ಮಾಡಿಕೊಂಡಿದ್ದೆನು. ಬೈಕ್ ಕಳೆದುಕೊಂಡಿದ್ದ ಮಾಲಿಕರು ಠಾಣೆಯಲ್ಲಿ ದೂರು ನೀಡಿರುವ ವಿಷಯ ಗೊತ್ತಾಗಿ ಭಯದಿಂದ ನೇಪಾಳ ಬಿಟ್ಟು ಭಾರತದ ದಕ್ಷಿಣದ ಕಡೆಗೆ ಬಂದು ಆಂಧ್ರ ಮತ್ತು ತಮಿಳುನಾಡಿನಲ್ಲಿ ಸುತ್ತಾಡಿಕೊಂಡು ಕೊನೆಗೆ ಬೆಂಗಳೂರಿಗೆ ಬಂದು ತಿಪ್ಪಸಂದ್ರದಲ್ಲಿ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದೆನು. ನನ್ನ ಬಳಿ ಇದ್ದ ಬೈಕ್ ರಿಪೇರಿಗೆಂದು ಮುರುಗೇಶ್ ಪಾಳ್ಯದ ಗ್ಯಾರೇಜ್‌ಗೆ ಹೋಗಿದ್ದಾಗ ಮೊದಲಿಗೆ ಪರಿಚಯವಾಗಿದ್ದು ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ರಾಯಚೂರಿನ ದಾದಾಪೀರ್, ಆಗ ಅವನಿಗೆ 14 ವರ್ಷವಾಗಿತ್ತು. ದಿನಗಳು ಕಳೆಯುವಂತೆ ನಾವಿಬ್ಬರು ಒಳ್ಳೆಯ ಸ್ನೇಹಿತರಾಗಿದ್ದು, ಗ್ಯಾರೇಜ್‌ನಲ್ಲಿ ವಾರವೆಲ್ಲ ಕೆಲಸ ಮಾಡಿದರೆ ಮಾಲೀಕರು 500-1000 ಕೊಡುತ್ತಾನೆ. ಆದರೆ ನಾವ ಸ್ವಂತವಾಗಿ ದುಡಿದರೆ ಸಾವಿರಾರು ಸಂಪಾದನೆ ಮಾಡಬಹುದು. ಅದು ನೀನು ದಿನದ 24 ಗಂಟೆ ಕಾಲ ಕೆಲಸ ಮಾಡಬೇಕಾಗಿಲ್ಲ. ಈಗ ಮಾಡುತ್ತಿರುವ ಕೆಲಸದ ಜೊತೆಗೆ ರಾತ್ರಿ ಹೊತ್ತು 2-3 ಗಂಟೆ ಮಾತ್ರ ಕೆಲಸ ಎಂದು ಹೇಳಿ ಅವನನ್ನು ಜೊತೆಗೆ ಸೇರಿಸಿಕೊಂಡು ಬೆಂಗಳೂರಿನ ಪಾರ್ಕಿಂಗ್ ಸ್ಥಳಗಳಲ್ಲಿ ನಿಲ್ಲಿಸಿರುವ ಬೈಕ್‌ಗಳನ್ನು ಕದ್ದು ನಂಬರ್ ಪ್ಲೇಟ್‌ಗಳನ್ನು ಬದಲಿಸಿ ಮಾರಾಟ ಮಾಡುತ್ತಿದ್ದೆವು. ಬೈಕ್ ಕದಿಯಲು ಹೋದಾಗ ಮಂಕಿ ಕ್ಯಾಪ್ ಹಾಕಿಕೊಂಡು ಬೈಕ್‌ಗಳನ್ನು ಕದ್ದುಕೊಂಡು ಹೋಗುತ್ತಿದ್ದರಿಂದ



ಆರೋಪಿಗಳನ್ನು ಬಂಧಿಸಿರುವುದು

ಎಲ್ಲಿಯೂ ನಮ್ಮ ಮುಖಚಹರೆ ಗುರುತು ಸಿಗದ ಕಾರಣ ಯಾರ ಕೈಗೂ ಸಿಗದೆ ನಮ್ಮ ಕಸುಬನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೆವು. ಕದ್ದ ಬೈಕ್‌ಗಳನ್ನು ಮಾರಾಟ ಮಾಡುವುದು ಕಷ್ಟವಾದಾಗ ಬೈಕ್‌ಗಳ ಬಿಡಿ ಭಾಗಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡುತ್ತಿದ್ದೆವು. ನಂತರದ ದಿನಗಳಲ್ಲಿ ಬೈಕ್‌ಗಳನ್ನು ಕದಿಯುವುದನ್ನು ಬಿಟ್ಟು ಬೇರೆ ಕಳ್ಳತನದ ಮಾರ್ಗವನ್ನು ಕಂಡುಕೊಂಡೆವು. ಅದೇ ರಾತ್ರಿ ಹೊತ್ತು ಮುಚ್ಚಿರುವ ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದು ಹಣವನ್ನು ಕಳುವು ಮಾಡಿಕೊಂಡು ಹೋಗುತ್ತಿದ್ದೆವು. ವರ್ಷಗಳು ಕಳೆಯುತ್ತಿದ್ದಂತೆ ನಮ್ಮ ಜೊತೆಗೆ ಬೆಂಗಳೂರಿನ ಸುಧಾಮನಗರದ ವಿನೋದ್, ಪ್ರವೀಣ್‌ಕುಮಾರ್‌ಕುಮಾರ್, ಜ್ಯೋತಿನಗರದ ರಿಯಾನ್‌ರವರನ್ನು ಸೇರಿಸಿಕೊಂಡು ನಮ್ಮ ಕಾರ್ಯಾಚರಣೆಯನ್ನು ಬೇರೆ ಊರುಗಳಿಗೆ ವಿಸ್ತರಿಸಿಕೊಂಡೆವು. ಒಮ್ಮೆ ಒಂದೂರಿಗೆ ಕಾಲಿಟ್ಟರೆ ಹಗಲುಹೊತ್ತು ಅಲ್ಲಿನ ಅಂಗಡಿಗಳನ್ನು ಗುರುತಿಸಿ ರಾತ್ರಿ 2 ಗಂಟೆಯಿಂದ 3 ಗಂಟೆಯ ಒಳಗೆ ಒಳಗೆ ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದು ಅಂಗಡಿ ಒಳಕ್ಕೆ ನುಗ್ಗಿ ಕೇವಲ ನಗದು ಬಿಟ್ಟರೆ ಬೇರೆ ಏನನ್ನು ಮುಟ್ಟುತ್ತಿರಲಿಲ್ಲ. ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಹಾರೆಯಿಂದ ಮುರಿದು, ಡೋರ್‌ಅನ್ನು ಸ್ವ


ಕದ್ದ ಮೂರು ಬೈಕ್‌ಗಳು ಹಾಗೂ ಬಂಧಿತ ಆರೋಪಿಗಳೊಂದಿಗೆ ಪೊಲೀಸ್ ತನಿಖಾ ತಂಡ

ಮೇಲೆ ಎತ್ತಿ ಆ ಸಣ್ಣ ಜಾಗದಲ್ಲಿ ಒಳಗೆ ಹೋಗಿ ಕಳ್ಳತನ ಮಾಡಿಕೊಂಡು ಹೊರ ಬರುವಾಗ ಕಷ್ಟಪಟ್ಟು ಹೊರ ಬರುತ್ತಿದ್ದೆವು. ಕಾರಣ ಡೋರ್ ಮುರಿದಿರುವ ಜಾಗ ಚಿಕ್ಕದಾಗಿದ್ದು ದಪ್ಪಗಿರುವವರು ಒಳಗೆ ಮತ್ತು ಹೊರಗೆ ಬರುವುದು ಕಷ್ಟವಾಗುತ್ತಿತ್ತು. ಆಗ ದಾದಾಪೀರ್ ರಾಯಚೂರು ಕಡೆಯಿಂದ ಇಬ್ಬರು ಅಪ್ರಾಪ್ತ ಹುಡುಗರನ್ನು ಕರೆದುಕೊಂಡು ಬಂದನು. ನಂತರ ಕಳ್ಳತನಕ್ಕೆ ಹೋದಾಗ ಅವರಿಬ್ಬರನ್ನು ಅಂಗಡಿ ಒಳಗೆ ನುಗ್ಗಿಸಿ ಹಣವನ್ನು ಕಳುವು ಮಾಡಿಸುತ್ತಿದ್ದೆವು. ಒಂದು ಸಾರಿ ಕಳ್ಳತನ ಮಾಡಿ ಜೇಬು ತುಂಬ ಕಾಸು ಸಿಕ್ಕಿದರೆ ಸಾಕು ಅದು ಖಾಲಿಯಾಗುವತನಕ ಮೋಜು ಮಸ್ತಿ ಮಾಡಿಕೊಂಡಿದ್ದು, ಜೇಬು ಖಾಲಿಯಾದ ನಂತರ ಹೊಸ ಊರುಗಳನ್ನು ಆಯ್ಕೆ ಮಾಡಿಕೊಂಡು ಹೋಗುತ್ತಿದ್ದೆವು. ನಾವು ಕಳ್ಳಥನಕ್ಕೆ ಯಾವುದೇ ಊರಿಗೆ ಹೋದರೂ ಕಳ್ಳತನ ಮುಗಿಸಿಕೊಂಡು ಮನೆಗಳನ್ನು ಸೇರಿಕೊಳ್ಳುತ್ತಿದ್ದೆವು. ಆದರೆ ಮುಂದಿನ ಕಳ್ಳತನದ ಪ್ಲಾನ್ ಹಾಗೂ ಕುಡಿತ ಮೋಜು ಮಸ್ತಿಯನ್ನು ಬೆಂಗಳೂರಿನ ಸುಧಾಮನಗರದಲ್ಲಿನ ಸ್ಮಶಾನ ಎಕರೆಗಟ್ಟಲೆ ಇದ್ದು ದಟ್ಟ ಕಾಡಿನಂತಿರುವ ಜಾಗವನ್ನು ತಮ್ಮ ಅಡ್ಡೆಯನ್ನಾಗಿ ಮಾಡಿಕೊಂಡಿದ್ದೆವು. ಅಲ್ಲಿಯೇ ಡಾಬಾದ ಮಾದರಿಯಲ್ಲಿ ಸಿದ್ದಪಡಿಸಿಕೊಂಡಿದ್ದು ಅಡ್ಡೆಯಲ್ಲಿರುವ ನಮ್ಮ ಸುಳಿವು ಯಾರಿಗೂ ಸುಳಿವು ಸಿಗದಂತೆ ಖಾಲಿ ಬೀರ್ ಬಾಟಲಿಗಳಿಂದ ಸಿಂಗಾರ ಮಾಡಿಕೊಂಡಿದ್ದು, ಅಡ್ಡೆಯ ಒಳಗೆ ಯಾರಾದರು ಅಪರಿಚಿತ ವ್ಯಕ್ತಿಗಳು ಒಳಗೆ ಬರಲು ಯತ್ನಿಸಿದರೆ ಅದರ ಶಬ್ದಗಳಿಂದ ಎಚ್ಚೆತ್ತುಕೊಳ್ಳುತ್ತಿದ್ದೆವು ಹಾಗೂ ಮುನ್ನೆಚ್ಚರಿಕೆಗಾಗಿ ಸಿದ್ದಪಡಿಸಿಕೊಂಡಿದ್ದೆವು. ಯಾರಿಗೂ ಅನುಮಾನ ಬಾರದ ರೀತಿಯಲ್ಲಿ ನಿತ್ಯ ನಮ್ಮ ಕೆಲಸಗಳನ್ನು ಮಾಡಿಕೊಂಡಿದ್ದು, ರಾತ್ರಿ ಹೊತ್ತು ಕಳ್ಳತನ ಮಾಡಿಕೊಂಡು ವಾಪಸು ಬರುವಾಗ ಅಪ್ರಾಪ್ತ ಬಾಲಕರನ್ನು ಮನೆಯಲ್ಲಿ ಬಿಟ್ಟು ನಾವುಗಳು ಅಡ್ಡೆಗೆ ಬಂದು ಸೇರಿಕೊಂಡು ಮದ್ಯ ಸೇವನೆ, ಗಾಂಜಾ ಸೇವನೆ ಮತ್ತು ಮಾಂಸಹಾರದ ಪಾರ್ಟಿ ಮಾಡಿಕೊಂಡು ವಿಲಾಸಿ ಜೀವನವನ್ನು ನಡೆಸುತ್ತಿದ್ದೆವು. ಇದರ ಜೊತೆಗೆ ಊರ ಹೊರಗಿನ ಹೈವೇಗಳಲ್ಲಿ ಬೈಕ್ ವೀಲಿಂಗ್ ಮಾಡುತ್ತಾ ಕಾಲ ಕಳೆಯುತ್ತಿದ್ದೆವು.

### 1 ಸಾವಿರಕ್ಕೂ ಹೆಚ್ಚು ಅಂಗಡಿಗಳ ಲೂಟಿ

ಕರ್ನಾಟಕಕ್ಕೆ ಕಾಲಿಟ್ಟ ಮೇಲೆ ಬೈಕ್ ಕಳ್ಳತನ ಬಿಟ್ಟು ಅಂಗಡಿಗಳ ರೋಲಿಂಗ್ ಶಟರ್ ಹೊಡೆದು ಹಣ ಕಳ್ಳತನ ಮಾಡಲು ಪ್ರಾರಂಭಿಸಿದ ಮೇಲೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಪೆರೇಸಂದ್ರ, ಚಿಂತಾಮಣಿ ಟೌನ್, ತುಮಕೂರು ನಗರ, ನೆಲಮಂಗಲ, ದೇವನಹಳ್ಳಿ, ರಾಮನಗರ ಹಾಗೂ ರಾಜ್ಯದ ಇನ್ನು ಹಲವು ಕಡೆ ಸೇರಿದಂತೆ ಕಳೆದ ಐದು ವರ್ಷದಲ್ಲಿ ಕನಿಷ್ಠವೆಂದರೂ 1 ಸಾವಿರಕ್ಕೂ ಹೆಚ್ಚು ಅಂಗಡಿಗಳ ರೋಲಿಂಗ್ ಶಟರ್‌ಗಳನ್ನು ಮುರಿದಿದ್ದೇವೆ. ಆದರೆ ಲೆಕ್ಕಕ್ಕೆ ಸಿಗದಷ್ಟು ಕಳ್ಳತನ ಮಾಡಿದ್ದರೂ ಅಧಿಕೃತವಾಗಿ ರಾಜ್ಯದ ನಾನಾ ಭಾಗಗಳಲ್ಲಿನ ಪೊಲೀಸ್ ಠಾಣೆಗಳಲ್ಲಿ 25 ಕೇಸುಗಳು ಮಾತ್ರ ದಾಖಲಾಗಿರುವ ಬಗ್ಗೆ ನಮಗೆ ಮಾಹಿತಿ ಇದೆ. ನಾವು ಇದುವರೆಗೂ ಯಾವ ಜಿಲ್ಲೆಯ ಪೊಲೀಸರ ಕೈಗೆ ಸಿಕ್ಕಿಹಾಕಿಕೊಳ್ಳದೆ ಚಳ್ಳೇಹಣ್ಣು ತಿನ್ನಿಸಿಕೊಂಡು ಬಂದಿದ್ದೆವು. ಕೋಲಾರ ನಗರಕ್ಕೆ ಎಂಟ್ರಿ ಕೊಟ್ಟ ನಮ್ಮ ತಂಡವು ಡಿಸೆಂಬರ್ 17 ಮತ್ತು ಜನವರಿ 17ರಂದು ರಾತ್ರಿ ಟೇಕಲ್ ರಸ್ತೆಯಲ್ಲಿರುವ ಮೆಡಿಕಲ್ ಸ್ಟೋರ್, ಸಲೂನ್ ಶಾಪ್, ದಿನಸಿ ಅಂಗಡಿಗಳು ಮತ್ತು ಎಂ.ಬಿ. ರಸ್ತೆಯಲ್ಲಿನ ಆಧೀಶ್ವರ ಮಾರ್ಕೆಟಿಂಗ್, ಅಪೋಲೋ ಮೆಡಿಕಲ್ಸ್ ಸೇರಿದಂತೆ 2ಕ್ಕೂ ಹೆಚ್ಚು ಅಂಗಡಿಗಳ ಶಟರ್‌ಗಳನ್ನು ಮುರಿದು ಸಾವಿರಾರು ರೂ.ಗಳನ್ನು ದೋಚಿ ಪರಾರಿಯಾಗಿದ್ದೆವು. ನಮ್ಮ ಗ್ಯಾಂಗ್‌ನ ಐವರು ಫೆಬ್ರವರಿ 7ರಂದು ಮತ್ತೆ ಮೂರನೇ ಬಾರಿಗೆ ಕೋಲಾರ ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 75ರ ರಸ್ತೆಯಲ್ಲಿ ದರೋಡೆಗಾಗಿ ಸ್ಕೆಚ್ ಹಾಕುತ್ತಿದ್ದಾಗ ನಿಮ್ಮಗಳ ಕೈಗೆ ತಗಲಾಕಿಕೊಂಡ ನಮ್ಮ ಗ್ಯಾಂಗ್‌ನ ವಿಷಯ ಬಯಲಾಗಿದ್ದರಿಂದ ನೀವು ತೋಡಿದ ಖೆಡ್ಡಾಕ್ಕೆ ಬಿದ್ದುಬಿಟ್ಟೆವು ಎಂದು ಹೇಳಿದನು. ಕಿಂಗ್‌ಪಿನ್ ರೋಹಿತ್ ಗಿರಿ ಮತ್ತು ಬಲಗೈ ಬಂಟ ದಾದಾಪೀರ್‌ನಿಂದ ಹೇಳಿಕೆ ಪಡೆದ ನಂತರ ಅವರನ್ನು ಕಳ್ಳತನ ಮಾಡಿದ ಅಂಗಡಿಗಳ ಬಳಿ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಅವರು ಕೃತ್ಯಕ್ಕೆ ಬಳಸುತ್ತಿದ್ದ ಆಯುಧಗಳು, ಜರ್ಕಿನ್, ಮಂಕಿ ಕ್ಯಾಪ್‌ಗಳು ಮತ್ತು ಕೃತ್ಯಕ್ಕೆ ಬಳಸಿದ್ದ ಮೂರು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯವನ್ನು ಎಸ್ಪಿ ಬಿ. ನಿಖಿಲ್‌ರವರು ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿ ತಂಡಕ್ಕೆ ಬಹುಮಾನವನ್ನು ನೀಡಿದ್ದಾರೆ.


ಪೊಲೀಸ್ ತನಿಖಾ ತಂಡದವರು

☯

# ಸೂರಿ ನಿರ್ದೇಶನದ ಕಾಗೆ ಬಂಗಾರ ಯುವ ರಾಜಕುಮಾರ್ ನಾಯಕ



ಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ ಮತ್ತು ಭೋಗೇಂದ್ರ ಅವರ ಜಯಣ್ಣ ಫಿಲಂಸ್ ಮತ್ತು ಕಾರ್ತಿಕ್‌ಗೌಡ ಮತ್ತು ಯೋಗಿ ಜಿ. ರಾಜ್ ನೇತೃತ್ವದ ಕೆಆರ್‌ಜಿ ಸ್ಟುಡಿಯೋಸ್ ಮೂಲಕ ಈಗಾಗಲೇ ಎಕ್ಕ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ, ಈಗ ಇದೇ ನಿರ್ಮಾಣ ಸಂಸ್ಥೆಗಳು ಸೂರಿ ನಿರ್ದೇಶನದ ಕಾಗೆ ಬಂಗಾರ ಚಿತ್ರಕ ಬಂಡವಾಳ ಹೂಡಲಿವೆ. ಈ ಚಿತ್ರದಲ್ಲಿ ಯುವರಾಜ್ ಕುಮಾರ್ ನಾಯಕನಾಗಿ ನಟಿಸಲಿದ್ದಾರೆ. ಕೆಂಡಸಂಪಿಗೆ ತೆರೆಕಂಡ ದಿನದಿಂದಲೂ ನಿರ್ದೇಶಕ ಸೂರಿ ಅವರ ನಿರ್ದೇಶನದ 'ಕಾಗೆ ಬಂಗಾರ' ಚಿತ್ರ ಯವ ಸೆಟ್ಟೇರುತ್ತೆ ಎಂಬ ಕತೂಹಲವಿತ್ತು. ಅದಕ್ಕೆ ಇಲ್ಲಿವರೆಗೆ ಚಾಲನೆ ಸಿಕ್ಕಿರಲಿಲ್ಲ, ಇದೀಗ ಕಾಗೆ ಬಂಗಾರ ಚಿತ್ರ ಮತ್ತೊಮ್ಮೆ ಸುದ್ದಿಯಾಗುತ್ತಿದೆ. ಆರಂಭದಲ್ಲಿ ಈ ಚಿತ್ರದ ನಾಯಕನಾಗಿ ವಿರಾಟ್ ಆಯ್ಕೆಯಾಗಿದ್ದರು. ಆದರೆ, ಇದೀಗ ವಿರಾಟ್ ಬದಲಿಗೆ ಯುವ ರಾಜಕುಮಾರ್ ನಾಯಕನಾಗಿ ನಟಿಸಲಿದ್ದಾರೆ.

ಕಾಗೆ ಬಂಗಾರ ಚಿತ್ರದಲ್ಲಿ ಕೆಂಡಸಂಪಿಗೆ ಮತ್ತು ಪಾಪ್‌ಕಾರ್ನ್ ಮಂಕಿ ಟೈಗರ್ ಸಿನಿಮಾದ ಪಾತ್ರಗಳನ್ನು ಒಟ್ಟಿಗೆ ಕಾಣಿಸಿಕೊಳ್ಳಲಿವೆ, ಈ ಬಗ್ಗೆ ಮಾತನಾಡಿರುವ ಸೂರಿ, ಈ ಮೊದಲು ವಿರಾಟ್ ಅವರು ಈ ಚಿತ್ರದಲ್ಲಿ ನಟಿಸುವುದೆಂದು ನಿರ್ಧಾರವಾಗಿತ್ತು, ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ, ಅವರ ರಾಯಲ್ ಸಿನಿಮಾ ಪ್ರಚಾರದ ಸಮಯದಲ್ಲಿ ಅವರ ಸಂದರ್ಶನಗಳನ್ನು ನೋಡಿದ ನಂತರ ನಾನು ಅವರೊಂದಿಗೆ ಮಾತನಾಡಿದೆ. ಮುಂದೆ ಅವರೊಂದಿಗೆ ಒಂದು ಚಿತ್ರ ಮಾಡುತ್ತೇನೆ' ಎಂದು ಹೇಳಿದರು. ಕಾಗೆ ಬಂಗಾರ ಚಿತ್ರದ ಪಾತ್ರಕ್ಕೆ ಯುವ ರಾಜಕುಮಾರ್ ಸೂಕ್ತವಾಗಿದ್ದಾರೆ. ಯುವ ಅವರ ನಟನೆಯಲ್ಲಿ ಜವಾಬ್ದಾರಿ ಇದೆ. ನಾನು ಅವರನ್ನು ವ್ಯಕ್ತಿಯಾಗಿ ಬದಲಾಯಿಸಲು ಸಾಧ್ಯವಿಲ್ಲ, ಆದರೆ ನಾನು ಅವರನ್ನು ಕಾಗೆ ಬಂಗಾರ ಚಿತ್ರದ ಪಾತ್ರಕ್ಕೆ ತಕ್ಕಂತೆ ರೂಪಿಸಬಲ್ಲೆ, ನಾನು ದೊಡ್ಮನೆ ಕುಟುಂಬದ ಪ್ರತಿಯೊಬ್ಬ ನಟರೊಂದಿಗೆ ಕೆಲಸ ಮಾಡುವುದನ್ನು ಆನಂದಿಸುತ್ತೇನೆ. ನಾನು ಯುವ ರಾಜಕುಮಾರ್ ಅವರೊಂದಿಗೆ ಮತ್ತೊಂದು ಪಾಜೆಕ್ಟ್‌ನಲ್ಲಿ ಕೆಲಸ ಮಾಡಬೇಕಾಗಿತ್ತು. ಆದರೆ, ಅದು ಹೊಂದಿಕೆ ಯಾಗಲಿಲ್ಲ, ಈಗ, ನಾವಿಬ್ಬರೂ ಕಾಗೆ ಬಂಗಾರ ಚಿತ್ರದ ಮೂಲಕ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ಕೆಂಡಸಂಪಿಗೆ ಮತ್ತು ಪಾಪ್‌ಕಾರ್ನ್ ಮಂಕಿ ಟೈಗರ್ ಚಿತ್ರದ ಪಾತ್ರಗಳು ಕಾಗೆ ಬಂಗಾರ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತವೆ. ವಿಭಿನ್ನ ಪ್ರಪಂಚಗಳನ್ನು ಒಂದುಗೂಡಿಸುತ್ತದೆ. ಕಾಗೆ ಬಂಗಾರ ಎಂಬ ಶೀರ್ಷಿಕೆಯೇ ಜನರನ್ನು ರೋಮಾಂಚನಗೊಳಿಸಿದೆ ಎಂದು ನಿರ್ದೇಶಕ ಸೂರಿ ಅವರು ಹೇಳಿದರು. ಇನ್ನು ಈ ಚಿತ್ರಕ್ಕೆ ಸುರೇಂದ್ರನಾಥ್ ಅವರು ಕಥೆ ಬರೆದಿದ್ದು, ಅಮ್ರಿ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದಾರೆ. ಚರಣ್‌ರಾಜ್ ಅವರು ಸಂಗೀತ ಸಂಯೋಜಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಅಲ್ಲದೆ ಶೇಖರ್‌ಚಂದ್ರ ಛಾಯಾಗ್ರಹಣ ನಿಭಾಯಿಸಲಿದ್ದಾರೆ.

# ಮನೆ ತುಂಬ ಹೆಣ್ಣು ಮಕ್ಕಳೇ ತುಂಬಿದ್ದಾರೆ; ವಂಶೋದ್ಧಾರಕ ಬೇಕಿತ್ತು: ನಟ ಚಿರಂಜೀವಿ ಹೇಳಿಕೆಗೆ ಆಕ್ರೋಶ!

ಮನೆಯ ತುಂಬ ಹೆಣ್ಣು ಮಕ್ಕಳೇ ತುಂಬಿದ್ದು, ನಮ್ಮ ವಂಶವನ್ನು ಉದ್ಧಾರ ಮಾಡಲು ಮನೆಗೊಬ್ಬ ಮೊಮ್ಮಗ ಬೇಕಿತ್ತು ಎಂದಿರುವ ಮೆಗಾಸ್ಟಾರ್ ಚಿರಂಜೀವಿ ಹೇಳಿಕೆ ಇದೀಗ ವಿವಾದ ಸೃಷ್ಟಿಸಿದೆ.



ಇತ್ತೀಚೆಗೆ ನಡೆದ ಬ್ರಹ್ಮ ಆನಂದಂ ಚಿತ್ರದ ಪ್ರೀ ರಿಲೀಸ್ ಕಾರ್ಯಕ್ರಮದಲ್ಲಿ ನಟ ಚಿರಂಜೀವಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ್ದ ಅವರು, ನನ್ನ ಮನೆಯಲ್ಲಿ ಹೆಣ್ಣು ಮಕ್ಕಳೇ ತುಂಬಿದ್ದಾರೆ. ಹೀಗಾಗಿ ನನಗೆ ಮನೆಯಲ್ಲಿ ರುವಂತೆ ಭಾಸವಾಗುವುದಿಲ್ಲ, ಬದಲಿಗೆ ಮಹಿಳಾ ಹಾಸ್ಟೆಲ್‌ನಲ್ಲಿ ವಾಸಿಸುತ್ತಿರುವಂತೆ ಮತ್ತು ನಾನು ವಾರ್ಡನ್ ಆಗಿರುವಂತೆ ಭಾಸವಾಗುತ್ತದೆ. ನಮ್ಮ ಕುಟುಂಬದ ವಂಶವನ್ನು ಮುಂದುವರಿಸಲು ಮೊಮ್ಮಗನು ಬೇಕೆಂದು ನಾನು ಬಯಸುತ್ತೇನೆ ಎಂದಿದ್ದಾರೆ.

'ಮನೆಯಲ್ಲಿ ಇರುವಾಗ ಮೊಮ್ಮಕ್ಕಳು ಸುತ್ತುವರೆದಿರುವಂತೆ ಭಾಸವಾಗುವುದಿಲ್ಲ, ನನ್ನ ಸುತ್ತಲೂ ಹೆಂಗಸರೇ ಸುತ್ತುವರೆದಿರುವುದರಿಂದ ನಾನು ಲೇಡೀಸ್ ಹಾಸ್ಟೆಲ್ ವಾರ್ಡನ್ ಎಂದು ಅನಿಸುತ್ತದೆ. ನಮ್ಮ ವಂಶವು ಮುಂದುವರಿಯಲು ಈ ಬಾರಿಯಾದರೂ (ರಾಮ್) ಚರಣ್‌ಗೆ ಗಂಡು ಮಗುವಾಗಲಿ ಎಂದು ನಾನು ಹಾರೈಸುತ್ತಲೇ ಇದ್ದೇನೆ, ಆದರೆ ಅವನಿಗೂ ಹೆಣ್ಣು ಮಗುವಾಯಿತು' ಎಂದಿದ್ದಾರೆ.

ನನ್ನ ಮಗ ರಾಮ್ ಚರಣ್‌ಗೆ ಮತ್ತೊಂದು ಹೆಣ್ಣು ಮಗು ಹುಟ್ಟಬಹುದು ಎಂಬ ಭಯವಿದೆ. ಅವನಿಗೆ ಮತ್ತೆ ಹೆಣ್ಣು ಮಗುವಾದರೆ ಎಂದು ನಾನು ಹೆದರುತ್ತೇನೆ ಎಂದು ಚಿರಂಜೀವಿ ತಿಳಿಸಿದ್ದಾರೆ. ರಾಮ್ ಚರಣ್ ಮತ್ತು ಪತ್ನಿ ಉಪಾಸನಾ ದಂಪತಿಗೆ 2023ರ ಜೂನ್‌ನಲ್ಲಿ ಕ್ಲಿನ್ ಕಾರಾ ಎಂಬ ಹೆಣ್ಣು ಮಗು ಜನಿಸಿತು.

# ವಿದ್ಯಾಗಣೇಶ ಊರಿನ ಹಿತಕ್ಕಾಗಿ ಪ್ರೇಮಿಗಳಿಬ್ಬರ ಹೋರಾಟ

ಉತ್ತರ ಕರ್ನಾಟಕ ಸೊಗಡಿನ ಸಾಕಷ್ಟು ಚಲನಚಿತ್ರಗಳು ಈಗಾಗಲೇ ನಿರ್ಮಾಣವಾಗಿ ಕನ್ನಡ ಸಿನಿರಸಿಕರನ್ನು ರಂಜಿಸಿವೆ, ಇದಗ ಅದೇ ಸೊಗಡಿನ ಮತ್ತೊಂದು ಚಿತ್ರ ತೆರೆಗೆ ಬರಲು ಸಿದ್ದವಾಗಿದೆ ಆ ಚಿತ್ರದ ಹೆಸರು ವಿದ್ಯಾಗಣೇಶ. ಉಮೇಶ್‌ಚಂದ್ರ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಸುಲಕ್ಷಾ ಕೈರಾ ಹಾಗೂ ಮಲ್ಲು ಜಮಖಂಡಿ ನಾಯಕ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಪ್ರತಿಭೆ ಮಲ್ಲು ಜಮಖಂಡಿ ಅವರು ಈಗಾಗಲೇ ನನ್ನಾಕಿ ಎಂಬ ಚಿತ್ರದಲ್ಲಿ ನಟಿಸಿ ಗುರುತಿಸಿಕೊಂಡವರು, ಮಲ್ಲು ನಾಯಕನಾಗಿ ಅಭಿನಯಿಸಿರುವ ಎರಡನೇ ಚಿತ್ರ ವಿದ್ಯಾಗಣೇಶ. ಹಳ್ಳಿ ಫ್ಲೇವರ್‌ನಲ್ಲಿ ಮೂಡಿಬಂದಿರುವ ಪ್ರೇಮಕಥೆಯ ಜತೆಗೆ ವಿದ್ಯಾವಂತ ಯುವತಿಯೊಬ್ಬಳು ಊರಿನ ಹಿತಕ್ಕಾಗಿ ಹೋರಾಡುವ ಕಥಾಹಂದರ ಒಳಗೊಂಡ ಈ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿ ಅತಿಹೆಚ್ಚು ವೀಕ್ಷಣೆಯಾಗಿದೆ, ಲವ್ ಜತೆಗೆ ಸೋಷಿಯಲ್ ಡ್ರಾಮಾ ಕಥಾಹಂದರ ಒಳಗೊಂಡ ವಿದ್ಯಾಗಣೇಶ ಚಿತ್ರವು ಫೆಬ್ರವರಿ 21ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರುತ್ತಿದೆ. ಉತ್ತರ ಕರ್ನಾಟಕದ ಭಾಷಾ ಹಾಗೂ ಸಂಸ್ಕೃತಿಯ ಛಾಯೆ ಒಂಗೊಂಡಿರುವ ಈ ಚಿತ್ರದಲ್ಲಿ ಹುಡುಗ, ಹುಡುಗಿಯ ಪ್ರೇಮಕಥೆಯಲ್ಲಿ ರಾಜಕೀಯ ಪ್ರವೇಶವಾದಾಗ ಏನೇನೆಲ್ಲಾ ಆಗುತ್ತದೆ ಎಂಬುದನ್ನು ನಿರೂಪಿಸಲಾಗಿದೆ, ಉಮೇಶ್ ಚಂದ್ರ ಅವರು ವಿದ್ಯಾಗಣೇಶ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಹಿರಿಯನಟ ತಬಲಾನಾಣಿ ಅವರು ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ, ತಬಲಾನಾಣಿ ಅವರ ಸ್ನೇಹಿತ ನಾಗೇಶ ಈ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ,



ಚಿತ್ರದ ಕುರಿತಂತೆ ನಿರ್ದೇಶಕ ಉಮೇಶ್ ಚಂದ್ರ ಮಾತನಾಡುತ್ತ ವಿದ್ಯಾ ಗಣೇಶ ನಾಯಕಿ ಪ್ರಧಾನ ಕಾನ್ಸೆಪ್ಟ್ ಒಳಗೊಂಡ ಚಿತ್ರವಾಗಿದೆ. ಲವ್ ಸ್ಟೋರಿಯಲ್ಲಿ ರಾಜಕೀಯ ಎಂಟ್ರಿ ಆಗಿ ಏನೆಲ್ಲಾ ಆಗುತ್ತೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇವೆ, ಇಡೀ ಚಿತ್ರದ ಕಥೆ ಒಂದು ಹಳ್ಳಿಯಲ್ಲಿ ನಡೆಯುತ್ತದೆ. ಈ ಚಿತ್ರದ ನಾಯಕಿಯ ಹೆಸರು ವಿದ್ಯಾ, ಆಕೆ ಒಬ್ಬ ಟೀಚರ್, ಮುಗ್ಧ ಹಳ್ಳಿಯ ಜನರನ್ನು ವಂಚಿಸುತ್ತಿದ್ದ ಊರ ರಾಜಕಾರಣಿಗಳ ವಿರುದ್ಧ ಆ ಟೀಚರ್ ನಿಂತಾಗ ಏನೆಲ್ಲ ಆಗುತ್ತದೆ, ಗ್ರಾಮದ ಹಿತರಕ್ಷಣಗಾಗಿ ಆಕೆ ನಡೆಸುವ ಹೋರಾಟಕ್ಕೆ ಅವಳ ಪ್ರೇಮಿ ಗಣೇಶ ಹೇಗೆ ಸಾಥ್ ಕೊಟ್ಟು ಜತೆ ನಿಲ್ಲುತ್ತಾನೆ, ಕೊನೆಗೆ ಅವರಿಬ್ಬರ ಹೊರಾಟಕ್ಕೆ ಜಯ ಸಿಗುತ್ತಾ ಇಲ್ಲವಾ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇನೆ. ವಿದ್ಯಾಗಣೇಶ ಚಿತ್ರಕ್ಕೆ ಬೀದರ್, ಜಮಖಂಡಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 25 ದಿನಗಳ ಕಾಲ ಶೂಟಿಂಗ್ ಮಾಡಿದ್ದೇವೆ, ನಿನ್ನೆಯಷ್ಟೇ ಈ ಚಿತ್ರಕ್ಕಾಗಿ ಕವಿರಾಜ್ ಅವರು ಬರೆದಿರುವ ಏನೋ ನಿನ್ ಗುಂಗೆ ನಂಗೆ... ಎಂಬ ಉತ್ತರ ಕರ್ನಾಟಕದ ಶೈಲಿಯ ಹಾಡೊಂದನ್ನು ಬಿಡುಗಡೆ ಮಾಡಲಾಗಿದೆ. ಅನುರಾಧಾ ಭಟ್ ಹಾಗೂ ಅನಿಲ್ ಸಿಜೆ ಅವರೇ ಈ ಹಾಡಿಗೆ ದನಿಯಾಗಿದ್ದಾರೆ ಎಂದು ಹೇಳಿದರು.

ನಾಯಕ ಮಲ್ಲು ಜಮಖಂಡಿ ಮಾತನಾಡಿ, ನನ್ನಾಕಿ ಆದ ಮೇಲೆ ಇದು ನನ್ನ ಎರಡನೇ ಸಿನಿಮಾ. ನಾವೆಲ್ಲಾ ಫ್ಯಾಮಿಲಿ ಥರ ಒಂದಾಗಿ ಈ ಸಿನಿಮಾ ನಿರ್ಮಾಣ ಮಾಡಿದ್ದೇವೆ. ಈ ಚತ್ರದಲ್ಲಿ ನಾನು ಒಬ್ಬ ಮಿಡಲ್ ಕ್ಲಾಸ್ ಹುಡುಗನ ಪಾತ್ರವನ್ನು ನಿರ್ವಹಿಸಿದ್ದೇನೆ, ಅನ್ಯಾಯದ ವಿರುದ್ದ ನಿಲ್ಲುವ ವಿದ್ಯಾವಂತ ಹುಡುಗಿಯನ್ನು ಲವ್ ಮಾಡಿದ ನಂತರ ಕಥೆ ಮುಂದೆ ಏನೇನೆಲ್ಲ ತಿರುವು ಪಡೆದು ಕೊಳ್ಳುತ್ತದೆ,ಕೊನೆಗೆ ನಮ್ಮ ಹೋರಾಟಕ್ಕೆ ಯಾವರೀತಿ ಬೆಂಬಲ ಸಿಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ ಎಂದು ವಿವರಿಸಿದರು.

ಈ ಚಿತ್ರದಲ್ಲಿ ನಾಯಕಿಯಾಗಿ ಸುಲಕ್ಷಾ ಕೈರಾ ಕಾಣಿಸಿಕೊಂಡಿದ್ದಾರೆ, ಈಕೆಯ ಪಾತ್ರದ ಸುತ್ತ ಇಡೀ ಚಿತ್ರದ ಕಥಹಂದರ ಸಾಗುತ್ತದೆ. ಈ ಚಿತ್ರವನ್ನು ಚೇತನ್ ಅವರು ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು ಅದರಲ್ಲಿ ಒಂದು ಉತ್ತರ ಕರ್ನಾಟಕ ಶೈಲಿಯ ಭಜನಾಪದ ಹಾಗೂ ವೀರಗಾಸೆ ಪದವೂ ಇದೆ, ಅನಿಲ್ ಸಿ.ಜೆ ಸಂಗೀತ ಸಂಯೋಜನೆ ಮಡಿದ್ದಾರೆ. ಶೇಖರ್ ಚಂದ್ರ ಅವರ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ವಿ.ನಾಗೇಂದ್ರ ಪ್ರಸಾದ್, ಕವಿರಾಜ್ ಅವರ ಸಾಹಿತ್ಯವಿದೆ. ಉಳಿದ ಪಾತ್ರಗಳಲ್ಲಿ ಸುಚೇಂದ್ರ ಪ್ರಸಾದ್, ರಮೇಶ್ ಭಟ್, ದಾವಲ್ ತಾಳೋಕೋಟೆ, ಕಾಕ್ರೋಚ್ ಸುಧೀ ಸೇರಿದಂತೆ ಹಲವಾರು ರಂಗಭೂಮಿ ಕಲಾವಿದರುಗಳು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ,

# ಚೇಷ್ಟೆ ಬಿಟ್ಟು ಮೆಚ್ಯುರಿಟಿ ಪಡೆದ ಸಿದ್ಲಿಂಗು-2



ಹನ್ನೆರಡು ವರ್ಷಗಳ ಹಿಂದೆ ಯೋಗಿ, ರಮ್ಯಾ ಅಭಿನಯದಲ್ಲಿ ಸಿದ್ಲಿಂಗು ತೆರೆಕಂಡಿತ್ತು, ಕಿರುತೆರೆ ಯಿಂದ ಬಂದ ವಿಜಯಪ್ರಸಾದ್ ಮೊದಲಬಾರಿಗೆ ನಿರ್ದೇಶಿಸಿದ ಚಿತ್ರ ವಿದು. ಇದೀಗ ಅದರ ಮುಂದುವರಿದ ಭಾಗವಾಗಿ ಸಿದ್ಲಿಂಗು-2 ತೆರೆಕಂಡಿದೆ. ಸಿದ್ಲಿಂಗು ಚಿತ್ರದ ಕಥೆ ನಡೆಯುವುದೇ ನಾಯಕ ಕಾರೊಂದನ್ನು ಖರೀದಿ ಮಾಡುವುದರ ಬಗ್ಗೆ, ಚಿತ್ರದ ಕೊನೆಯಲ್ಲಿ ಆ ಕಾರು ಜೊತೆಗೆ ಸಿದ್ಲಿಂಗುವಿನ ಪ್ರೇಯಸಿ ಮಂಗಳಾ ಟೀಚರ್(ರಮ್ಯಾ) ಇಬ್ಬರೂ ಸಿಗುವುದಿಲ್ಲ, ಇದೀಗ ಅದರ ಮುಂದುವರಿದ ಭಾಗವಾಗಿ ಶುಕ್ರವಾರ ತೆರೆಕಂಡ ಸಿದ್ಲಿಂಗು-2 ಚಿತ್ರದಲ್ಲಿ ಸಿದ್ಲಿಂಗು(ಯೋಗಿ) ಪಾತ್ರ ಮುಂದುವರೆಯುತ್ತದೆ, ತನ್ನವರನ್ನೆಲ್ಲ ಕಳೆದುಕೊಂಡು ಬೇಸರದಲ್ಲಿದ್ದ ಸಿದ್ಲಿಂಗುವಿಗೆ ಈಸಲ ಹೊಸ ಒಡನಾಡಿಯಾಗಿ ನಿವೇದಿತಾ(ಸೋನುಗೌಡ) ಸಿಗುತ್ತಾಳೆ. ಆತನ ಕಾರಿನ ಕನವರಿಕೆ ಹಾಗೇ ಇರುತ್ತದೆ, ಆ ಹಳೇಕಾರು ಪುನಃ ಸಿದ್ಲಿಂಗುಗೆ ಸಿಗುತ್ತಾ, ಅದನ್ನು ಪಡೆಯಲು ಸಿದ್ಲಿಂಗು ಈಸಲ ಏನನೆಲ್ಲಾ ಸರ್ಕಸ್ ಮಾಡುತ್ತಾನೆ ಎಂಬುದನ್ನು ಸಿದ್ಲಿಂಗು-2 ಚಿತ್ರದಲ್ಲಿ ನಿರ್ದೇಶಕ ವಿಜಯಪ್ರಸಾದ್ ಹೇಳಲು ಪ್ರಯತ್ನಿಸಿದ್ದಾರೆ.

ನಿರ್ದೇಶಕ ವಿಜಯಪ್ರಸಾದ್ ತಮ್ಮ ಹಿಂದಿನ ಚಿತ್ರಗಳಲ್ಲಿದ್ದ ಚೇಷ್ಟೆ, ಡಬಲ್ ಮೀನಿಂಗ್ ಡೈಲಾಗ್‌ಗಳಿಗೆ ಈ ಚಿತ್ರದಲ್ಲಿ ಸಂಪೂರ್ಣ ಕಡಿವಾಣ ಹಾಕಿದ್ದಾರೆ. ಈ ಸಲ ಕ್ಲೀನ್ ಅಂಡ್ ನೀಟ್ ಸಿನಿಮಾ ನೀಡಬೇಕೆಂಬ ಉದ್ದೇಶದಿಂದ ಜಾಗ್ರತೆ ಯಿಂದ ಡೈಲಾಗ್‌ಗಳನ್ನು ಬರೆದಿದ್ದಾರೆ. ಆರ್ಮುಗಂ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಸಿದ್ಲಿಂಗುಗೆ ಸರ್ಕಾರಿ ಶಾಲೆಯಲ್ಲಿ ಟೀಚರ್ ಆಗಿ ಕೆಲಸ ಮಾಡೋ ನಿವೇದಿತಾ ಪರಿಚಯವಾಗಿ, ಇಬ್ಬರಲ್ಲೂ ಆತ್ಮೀಯತೆ ಬೆಳೆಯುತ್ತದೆ, ಆತನ ಹಿಂದಿನ ಕಥೆ ಕೇಳಿದ ನಿವೇದಿತಾ ಆತನ ಬಾಳಲ್ಲಿ ಹೊಸ ದೀಪ ಹಚ್ಚಲು ಮುಂದಾಗುತ್ತಾಳೆ, ಸಿದ್ಲಿಂಗು ಪಾಲಿಗೆ ನಿವೇದಿತಾಳೇ ಮಂಗಳಾ ಆಗುತ್ತಾಳೆ, ಸ್ಮಶಾನದಲ್ಲಿ ಗುಂಡಿ ತೋಡುವ ಸೀತಮ್ಮನ ಪಾತ್ರದಲ್ಲಿ ನಟಿ ಪದ್ಮಜಾರಾವ್ ವೀಕ್ಷಕರ ಮನದಲ್ಲಿ ಅಚ್ಚಳಿಯದೆ ನೆಲೆಸುತ್ತಾರೆ.

'ಎಲ್ಲೆಲ್ಲೋ ಓಡುವ ಮನಸೇ..' ಯಂತಹ ಮನಸ್ಸನ್ನು ತಟ್ಟುವಂತಹ ಹಾಡನ್ನು ನೀಡಿದ್ದ ಅನೂಪ್ ಸೀಳಿನ್ ಈ ಸಲ ಅಂಥ ಯಾವುದೇ ಹಾಡು ಕೊಟ್ಟಿಲ್ಲ. ಹಿನ್ನೆಲೆ ಸಂಗೀತ ಚಿತ್ರದ ಓಟಕ್ಕೆ ಪೂರಕವಾಗಿದೆ. ಸಿದ್ಲಿಂಗು ಸಿನಿಮಾದಲ್ಲಿ ಹರೆಯದ ಯುವಕನಾಗಿ ಒಂಚೂರು ತರಲೆ, ಚೇಷ್ಟೆ ಮಾಡುತ್ತಾ, ತುಸು ಪೋಲಿ ಮಾತುಗಳನ್ನಾಡುತ್ತಾ, ಎಮೋಷನಲ್ ಆಗಿಯೂ ಕಾಡುತ್ತಾ ಯೋಗಿ ಇಷ್ಟವಾಗಿದ್ದರು. ಈ ಬಾರಿ ಅವರ ಪಾತ್ರದಲ್ಲಿ ಮೆಚ್ಯೂರಿಟಿ ಎದ್ದು ಕಾಣುತ್ತದೆ, ಪೋಲಿ ಮಾತುಗಳಿಗೆ ಬ್ರೇಕ್ ಬಿದ್ದಿದೆ. ಕ್ಯಾಮೆರಾ ವರ್ಕ್ ಬ್ಯೂಟಿಫುಲ್ ಆಗಿದೆ, ನಿವೇದಿತಾ ಟೀಚರ್ ಪಾತ್ರದಲ್ಲಿ ಸೋನುಗೌಡ ಇಷ್ಟವಾಗುತ್ತಾರೆ, ನಿರ್ದೇಶಕ ವಿಜಯಪ್ರಸಾದ್ ಕೂಡ ಸಿನಿಮಾದಲ್ಲಿದ್ದಾರೆ. ಅವರ ಪಾತ್ರ ಸ್ಪೆಷಲ್ ಆಗಿದೆ. ಶ್ರೀಹರಿ, ರಾಜು ಶೇರಿಗಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ☯

# ನಾನು ಹೈದರಾಬಾದ್‌ನವಳು ಎಂದು ಹೆಮ್ಮೆಯಿಂದ ಹೇಳಿದ ರಶ್ಮಿಕಾ ಮಂದಣ್ಣ, ಕೆರಳಿ ಕೆಂಡವಾದ ಕನ್ನಡಿಗರು!

ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿದ - ಇದು ತೀರಾ ಓಲ್ಡ್ ಗಾದೆ. ಆದರೆ ಈ ರಶ್ಮಿಕಾ ಮಂದಣ್ಣ ಅವರಂತಾ ನಟಿಯರು ಈ ಮಾತನ್ನು ಇವತ್ತಿಗೂ ಜೀವಂತವಾಗಿಟ್ಟಿದ್ದಾರೆ. ಇದಕ್ಕೆ ರಶ್ಮಿಕಾ ಮಂದಣ್ಣ ಮೊನ್ನೆ ಮಾತನಾಡಿದ ಮಾತೇ ಸಾಕ್ಷಿ.

ಹೌದು, ಎಲ್ಲರಿಗೆ ಗೊತ್ತಿರುವಂತೆ ರಶ್ಮಿಕಾ ಮಂದಣ್ಣ ಅವರ ವೃತ್ತಿ ಜೀವನಕ್ಕೆ ಮೊದಲು ಅಡಿಪಾಯ ಹಾಕಿದ್ದೇ ಕನ್ನಡ ಚಿತ್ರರಂಗ. ಕಿರಿಕ್ ಪಾರ್ಟಿ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಪಡೆದು ರಾತ್ರೋ ರಾತ್ರಿ ಸ್ಟಾರ್ ಆದ ನಟಿ ರಶ್ಮಿಕಾ ಮಂದಣ್ಣ, ಅಭಿನಯಿಸಿದ ಚೊಚ್ಚಲ ಚಿತ್ರವನ್ನೇ ಟ್ರಂಪ್ ಕಾರ್ಡಾಗಿ ಇಟ್ಟುಕೊಂಡು ತೆಲುಗು ಚಿತ್ರರಂಗವನ್ನು ಪ್ರವೇಶಿಸಿದ ರಶ್ಮಿಕಾ ಬೆರಳೆಣಿಕೆಯ ದಿನಗಳಲ್ಲೇ ಬಹು ಬೇಡಿಕೆಯ ನಟಿಯಾಗಿ ಬೆಳೆದದ್ದು ಕನ್ನಡಿಗರಿಗೆ ಹೆಮ್ಮೆ.



ಆದರೆ ರಶ್ಮಿಕಾಗೆ ಅದ್ಯಾವಾಗ ಪರ ಭಾಷೆಗಳಿಂದ ಅವಕಾಶಗಳು ದುಬಾರಿಯಾಗುತ್ತಾ ಹೋಯಿತೋ ಪಾಪ ರಶ್ಮಿಕಾ ಅಡ್ಡದಾರಿಯ ಮೇಲೆ ಅಡ್ಡದಾರಿಯನ್ನು ಹಿಡಿಯುಲು ಶುರು ಮಾಡಿದರು. ಆರಂಭದಲ್ಲಿ ಯಶ್ ಅವರನ್ನ ಅಲ್ಲಗಳೆದು ಮಾತನಾಡಿದ್ದ ರಶ್ಮಿಕಾ ತೆಲುಗಿನಲ್ಲಿ ಅವಕಾಶ ದೊರೆಯುತ್ತಿದ್ದಂತೆ ಎಂಗೇಜ್ ಆಗಿದ್ದ ರಕ್ಷಿತ್ ಶೆಟ್ಟಿಯವರನ್ನು ಎಡಗಾಲಲ್ಲಿ ಒದ್ದು ವಿಜಯ್ ದೇವರಕೊಂಡನ ಟೀಮು ಸೇರಿಬಿಟ್ಟರು. ಮಾಡಿದವರ ಪಾಪ ಆಡಿದವರ ಬಾಯಿಗೆ... ಇರಲಿ.

ಇಂಥಾ ರಶ್ಮಿಕಾ ಈಗ ಇನ್ನೊಮ್ಮೆ ಕನ್ನಡಿಗರನ್ನು ಕೆರಳಿಸಿದ್ದಾರೆ. ಹೌದು,ರಶ್ಮಿಕಾ ಮಂದಣ್ಣ ಕೊಡಗಿನವರು. ಇವರು ಅಭಿನಯಿಸಿದ ಮೊದಲ ಚಿತ್ರ ಕನ್ನಡದ್ದು ಎಂಬ ವಿಚಾರ ಜಗತ್ತಿಗೆ ಗೊತ್ತು. ಆದರೆ ರಶ್ಮಿಕಾ ಮಾತ್ರ ಈ ವಿಚಾರವನ್ನು ಒಪ್ಪಲು ಸುತಾರಾಂ ತಯಾರಿಲ್ಲ, ಯಾಕೆಂದರೆ ಹೆತ್ತತಾಯಿಯನ್ನು ಅಮ್ಮ ಎನ್ನುವ ಬದಲು ಪರದೇಶಿ ತಾಯಿಯನ್ನು ಮಮ್ಮಿ ಎಂದು ಕರೆಯುವ ಹುಚ್ಚು ರಶ್ಮಿಕಾಗೆ ಹಿಡಿದಿದೆ. ಇದಕ್ಕೆ ಇನ್ನೊಂದು ಕೈಗನ್ನಡಿ ಎನ್ನುವಂತೆ ರಶ್ಮಿಕಾ ಮಂದಣ್ಣ ಈಗ 'ನಾನು ಹೈದರಾಬಾದ್'ನವಳು ಎಂದು ತುಂಬಾ ಹೆಮ್ಮೆಯಿಂದ ಹೇಳಿದ್ದಾರೆ.

ಹೌದು, ರಶ್ಮಿಕಾ ಮಂದಣ್ಣ ಅಭಿನಯದ ಛಾವಾ ಎಂಬ ಹೆಸರಿನ ಹಿಂದಿ ಚಿತ್ರವೊಂದು ಇಂದು ತೆರೆಗೆ ಬಂದಿದೆ. ಈ ಹಿನ್ನೆಲೆ ಕಾಲು ಮುರಿದಿದ್ದರೂ ಕೂಡ ವೀಲ್‌ಚೇರ್‌ನಲ್ಲಿಯೇ ಕುಳಿತು ಚಿತ್ರದ ಪ್ರಚಾರ ಮಾಡುತ್ತಿದ್ದ ರಶ್ಮಿಕಾ ಚಿತ್ರದ ಪ್ರಚಾರ ಮಾಡುವ ಸಮಯದಲ್ಲಿ ನಾನು ಹೈದರಾಬಾದ್‌ನವಳು ನಾನು ಅಲ್ಲಿಂದ ಒಬ್ಬಂಟಿಯಾಗಿ ಬಂದಿದ್ದೇನೆ, ಆದರೆ ಈಗ ನಾನು ನಿಮ್ಮ ಕುಟುಂಬದ ಭಾಗ ಆಗಿದ್ದೇನೆ ಎಂದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ರಶ್ಮಿಕಾ ಅವರ ಈ ಮಾತು ಈಗ ಅನೇಕ ಕನ್ನಡಿಗರನ್ನು ಕೆರಳಿಸಿದೆ.

ಹೀಗಾಗಿಯೇ ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ಆಕ್ರೋಶ ಹೊರ ಹಾಕುತ್ತಿರುವ ನೀವು ಯಾವಾಗ ಹೈದರಾಬಾದ್‌ನವರಾದ್ರೀ? ನಿಮ್ಮ ಜನ್ಮ ಪ್ರಮಾಣ ಪತ್ರವನ್ನು ಬದಲಿಸಿಕೊಂಡಿದ್ದೀರಾ ಹೇಗೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮದುವೆಯಾಗುವ ಮುನ್ನವೇ ರಶ್ಮಿಕಾಗೆ ಹೈದರಾಬಾದ್ ಮೇಲೆ ಪ್ರೀತಿ ಉಕ್ಕಿ ಹರಿಯುತ್ತಿದೆ ಎನ್ನುತ್ತಿದ್ದಾರೆ. ಪ್ರೀತಿಗಾಗಿ ಊರನ್ನೇ ಮರೆತ ರಶ್ಮಿಕಾ, ನಿಮ್ಮನ್ನು ದ್ವೇಷಿಸಲು ನಿತ್ಯ ಹೊಸ ಕಾರಣವನ್ನು ನಮಗೆ ಕೊಡುವುದಕ್ಕೆ ನಿಮಗೆ ಧನ್ಯವಾದ ಎಂದೆಲ್ಲ ಕಾಮೆಂಟ್ ಮಾಡಿದ್ದಾರೆ. ಇನ್ನು ಕೆಲವರು ರಶ್ಮಿಕಾ ಮಂದಣ್ಣಗಿಂತ ದೀಪಿಕಾ ಪಡುಕೋಣೆ, ಶಿಲ್ಪಾ ಶೆಟ್ಟಿ ಎಷ್ಟೋ ವಾಸಿ ಅವರು ಕೊನೆ ಪಕ್ಷ ನಾವು ಕರ್ನಾಟಕದವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಎಂದಿದ್ದಾರೆ. ☯

# 'ರಾಜು ಜೇಮ್ಸ್ ಬಾಂಡ್' ಬ್ಯಾಂಕ್ ರಾಬರಿ ಕಥೆ

ಫಸ್ಟ್ ರ್‍ಯಾಂಕ್ ರಾಜು ಈಗ ಜೇಮ್ಸ್ ಬಾಂಡ್ ರಾಜು ಆಗಿ ಪ್ರೊಮೋಷನ್ ಪಡೆದಿದ್ದಾನೆ, ಗುರುನಂದನ್ ಅಭಿನಯದ ಬಹು ನಿರೀಕ್ಷಿತ ಚಿತ್ರ ರಾಜು ಜೇಮ್ಸ್‌ಬಾಂಡ್ ನಿನ್ನೆ ಶುಕ್ರವಾರ ತೆರೆಕಂಡಿದೆ. ತನ್ನ ತಾಯಿಯ ನೆನಪಾಗಿ ಉಳಿಸಿಕೊಂಡಿದ್ದ ಮನೆಯನ್ನು ಬ್ಯಾಂಕ್‌ನವರ ಹಿಡಿತದಿಂದ ತಪ್ಪಿಸಿಕೊಳ್ಳಲು ಹೋಗಿ ಏನೇನೆಲ್ಲ ಅವಾಂತರ ಮಾಡಿಕೊಳ್ಳುತ್ತಾನೆ ಎಂಬುದನ್ನು ಕುತೂಹಲಕಾರಿಯಾಗಿ ನಿರ್ದೇಶಕ ದೀಪಕ್ ಮಧುವನಹಳ್ಳಿ ಚಿತ್ರದಲ್ಲಿ ನಿರೂಪಿಸಿದ್ದಾರೆ.



ರಾಜು(ಗುರುನಂದನ್), ಕರೆಂಟ್ ಕೃಷ್ಣ (ಅಚ್ಯುತ್ ಕುಮಾರ್) ನ ಜತೆ ಕರೆಂಟ್ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾನೆ, ದಿವ್ಯ(ಮೃದುಲಾ) ಆತನ ಮನಸನ್ನು ಕದ್ದ ಪ್ರೇಯಸಿ. ಟಿವಿ ಚಾನೆಲ್ ಒಂದನ್ನು ನಡೆಸುತ್ತಿರುವ ಟಿಆರ್‌ಪಿ ಪರಮೇಶ್(ಚಿಕ್ಕಣ್ಣ) ಕೂಡ ರಾಜುಗೆ ಪ್ರೀತಿಯ ಗೆಳೆಯ, ಈ ಮೂವರ ಕೆಲಸ, ಕರ್ತವ್ಯ ಬೇರೆಯೇ ಆದರೂ ಸಂಜೆ ಆಯಿತೆಂದರೆ ಒಟ್ಟಿಗೇ ಸೇರುತ್ತಾರೆ, ಎಣ್ಣೆ ಹಾಕುತ್ತಾರೆ, ಮೂವರಿಗೂ ಹಣದ ಅವಶ್ಯಕತೆಯಿರುತ್ತದೆ, ಅದರಲ್ಲೂ ರಾಜುಗೆ ಅದು ತೀವ್ರವಾಗಿರುತ್ತದೆ, ಏಕೆಂದರೆ ರಾಜು ತನ್ನ ಮನೆ ಮೇಲೆ ಮಾಡಿಕೊಂಡಿದ್ದ 25 ಲಕ್ಷ ರೂ. ಸಾಲದ ಅವಧಿ ಮೀರಿ, ಮನೆ ಹರಾಜಿಗೆ ಬಂದಿರುತ್ತದೆ. ಹೇಗಾದರೂ ಮಾಡಿ ಹಿರಿಯರು ಕಷ್ಟಪಟ್ಟು ಕಟ್ಟಿಸಿದ್ದ ಮನೆಯನ್ನು ಉಳಿಸಿಕೊಳ್ಳಬೇಕೆಂದು ರಾಜು ಶತಾಯ ಗತಾಯ ಪ್ರಯತ್ನ ಪಡುತ್ತಾನೆ, ಆಗದೇ ಇದ್ದಾಗ ಅದೇ ಊರಲ್ಲಿದ್ದ ಬ್ಯಾಂಕನ್ನೇ ದರೋಡೆ ಮಾಡುವ ಖತರ್ನಾಕ್ ಐಡಿಯಾ ರಾಜುಗೆ ಹೊಳೆಯುತ್ತದೆ, ಆರಂಭದಲ್ಲಿ ಇಷ್ಟು ದೊಡ್ಡ ರಿಸ್ಕ್ ಬೇಡ ಎಂದು ಗೆಳೆಯರಾದ ಪರಮೇಶ್, ಕೃಷ್ಣ ಸಲಹೆ ನೀಡಿದರೂ, ಹೇಗಾದರೂ ಮಾಡಿ ಹಣ ಹೊಂದಿಸಲೇಬೇಕು, ಮನೆಯನ್ನು ಉಳಿಸಿಕೊಳ್ಳಲೇಬೇಕು ಎಂದು ಭಂಡ ಧೈರ್ಯ ಮಾಡಿದ, ಸ್ನೇಹಿತನಿಗೆ ಉಳಿದಿಬ್ಬರು ಗೆಳೆಯರು ಅನಿವಾರ್ಯವಾಗಿ ಸಾಥ್ ಕೊಡಲು ಒಪ್ಪುತ್ತಾರೆ, ಬ್ಯಾಂಕ್‌ನಲ್ಲಿ ಏನೇ ಕರೆಂಟ್ ಪ್ರಾಬ್ಲಂ ಬಂದರೂ ಸರಿ ಮಾಡಲು ಆಗಾಗ ಬ್ಯಾಂಕ್ ಗೆ ಹೋಗಿ ಸರಿಮಾಡುವ ಕೃಷ್ಣನಿಗೆ ಎಲ್ಲೆಲ್ಲಿ ಸಿಸಿಟಿವಿ ಇದೆ, ಕರೆಂಟ್ ವ್ಯವಸ್ಥೆ ಹೇಗಿದೆ, ಸ್ಟ್ರಾಂಗ್ ರೂಮ್ ಎಲ್ಲಿದೆ ಎಂಬುದರ ಬಗ್ಗೆ ಪೂರ್ತಿ ಮಾಹಿತಿ ಗೊತ್ತಿರುತ್ತದೆ. ಅದರಂತೆ ಒಂದು ರಾತ್ರಿ ಕಂಭದ ಕರೆಂಟ್ ತೆಗೆದು, ಸಿಸಿಟಿವಿ ಆಫ್ ಮಾಡಿ ಬ್ಯಾಂಕ್ ಒಳಗೆ ಹೋದ ರಾಜು, ಬ್ಯಾಂಕ್ ನಲ್ಲಿದ್ದ 50 ಲಕ್ಷ ಹಣ ಹಾಗೂ ಮತ್ತೊಂದು ಪೆಟ್ಟಿಗೆಯಲ್ಲಿದ್ದ 25 ಕೋಟಿ ಹಣವನ್ನು ಕೂಡ ಹೊತ್ತು ಹೊರಬರುರುತ್ತಾನೆ, ಅದರಲ್ಲಿ 25 ಕೋಟಿ ಹಣ ಸ್ಥಳೀಯ ರಾಜಕಾರಣಿ ಭೂತಯ್ಯನ (ರವಿಶಂಕರ್) ಬ್ಲಾಕ್ ಮನಿ ಆಗಿರುತ್ತದೆ. ಭೂತಯ್ಯನಿಗೆ ರಾತ್ರಿಯೇ ಹಣ ಕಳವಾಗಿರುವ ವಿಷಯ ಗೊತ್ತಾಗಿ ಮ್ಯಾನೇಜರ್‌ಗೆ ಹೇಳುತ್ತಾನೆ. ಆದರೆ ಅಷ್ಟೊತ್ತಿಗಾಗಲೇ ಈ ಮೂವರೂ ಎಸ್ಕೇಪ್ ಆಗಿರುತ್ತಾರೆ. ಬ್ಯಾಂಕ್ ರಾಬರಿ ಆದ ವಿಷಯ ಊರಲ್ಲೆಲ್ಲ ಸುದ್ದಿಯಾಗುತ್ತದೆ. 25 ಕೋಟಿ ಹಣ ಕಳೆದುಕೊಂಡ ಶಾಸಕ ಭೂತಯ್ಯ ಬ್ಯಾಂಕ್ ಮ್ಯಾನೇಜರ್ ಮೇಲೆ ಹರಿಹಾಯುತ್ತಾನೆ, ಆದರೆ ಅಧಿಕೃತವಾಗಿ ಅದರ ಲೆಕ್ಕ ಪ್ರಚಾರ ಮಾಡುವಂತಿಲ್ಲ, ಹಣ ಹುಡುಕುವ ಜವಾಬ್ದಾರಿಯನ್ನು ಇನ್‌ಸ್ಪೆಕ್ಟರ್ ಗೋಡ್ಸೆ(ಜೈಜಗದೀಶ್)ಗೆ ವಹಿಸುತ್ತಾನೆ. ಕೊನೆಗೆ ರಾಜು ಮತ್ತವನ ಗೆಳೆಯರೇ 25 ಕೋಟಿ ಹಣವನ್ನು ಲಪಟಾಯಿಸಿರುವುದು ಶಾಸಕ ಭೂತಯ್ಯನಿಗೆ ಗೊತ್ತಾಗುತ್ತದೆ. ಅಷ್ಟೊತ್ತಿಗಾಗಲೇ ರಾಜು ಮತ್ತೊಂದು ಖತರ್ನಾಕ್ ಐಡಿಯಾ ಮಡುತ್ತಾನೆ. ಹೀಗೆ ಸಾಗುವ ಕಥೆ ಕೊನೆಯವರೆಗೂ ಲೈವಿಯಾಗಿ ಮೂಡಿಬಂದಿದೆ. ಒಂದು ಸೀನ್ ಕೂಡ ಪ್ರೇಕ್ಷಕನಿಗೆ ಬೇಸರ ತರಿಸೋದಿಲ್ಲ, ಜತೆಗೆ ಆಗಾಗ ಬರುವ ಪಂಚಿಂಗ್ ಡೈಲಾಗ್‌ಗಳು ನೋಡುಗರಿಗೆ ಮಜಾ ಕೊಡುತ್ತವೆ, ಕೊನಗೂ ಆ ಹಣ ಎಲ್ಲಿ ಹೋಯಿತು, ರಾಜು ಹೇಗೆ ಜೇಮ್ಸ್ ಬಾಂಡ್ ಆದ, ನಾಯಕಿ ಕಥೆ ಏನಾಯಿತು, ಈ ಎಲ್ಲ ಪ್ರಶ್ನೆಗಳಿಗೆ ನಿಮಗೆ ಉತ್ತರ ಬೇಕೆಂದರೆ ನೀವು ಇಂದೇ ಹತ್ತಿರದ ಥೇಟರಿಗೆ ಹೋಗಿ ಚಿತ್ರವನ್ನು ವೀಕ್ಷಿಸಲೇಬೇಕು. ಇಡೀ ಚಿತ್ರ ಎಂಟರ್‌ಟೈನಿಂಗ್ ಆಗಿದ್ದು ಒಳ್ಳೇ ಮಜಾ ಕೊಡುತ್ತದೆ, ಮೆಚ್ಯೂರ್ಡ್ ರಾಜುನ ಕಣ್ಣಾಮುಚ್ಚಾಲೆ ಆಟಗಳು ಮನರಂಜನೆ ನೀಡುತ್ತವೆ, ಎರಡು ಹಾಡುಗಳು ಕೇಳಲು ಖುಷಿ ಕೊಡುತ್ತವೆ. ಬೇಕಿತ್ತ ಬೇಕಿತ್ತಾ ಎಂಬ ಲವ್ ಬ್ರೇಕಪ್ ಗೀತೆ ಎಣ್ಣೆ ಹಾಡು ಸದಾ ಗುನುಗುವಂತಿದೆ, ಮನೋಹರ ಜೋಷಿ ಅವರ ಕ್ಯಾಮೆರಾ ವರ್ಕ್ ಉತ್ತಮಾಗಿದೆ, ☯

Vol. 40 No. 37 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 Email: policenewsreporter@gmail.com